# ನೀನಾಸಮ್ ಸಂಸ್ಕೃತಿ ಶಿಬಿರ:
## ಅಕ್ಟೋಬರ್ ೨೦೦೨

ಕಳೆದ ೨೨ ವರ್ಷಗಳಿಂದ ನೀನಾಸಮ್ ಪ್ರತಿ ಅಕ್ಟೋಬರ್‌ನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದ್ದು, **ಅಕ್ಟೋಬರ್ ೧೩ರಿಂದ ೨೦ರವರೆಗೆ** ನಡೆಯುತ್ತದೆ.

ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವೈವಿಧ್ಯ, ಮೀಮಾಂಸೆ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ — ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ. ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ರತನಕ ನಡೆಯುತ್ತದೆ. ಇದಲ್ಲದೆ ಪ್ರತಿದಿನ ಸಂಜೆ ರಂಗ ಪ್ರದರ್ಶನಗಳು (ತಿರುಗಾಟ ೨೦೦೨ರ ಪ್ರಥಮ ಪ್ರದರ್ಶನಗಳು), ಸಂಗೀತ, ನೃತ್ಯ ಇತ್ಯಾದಿ ಕಾರ್ಯಕ್ರಮಗಳು — ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಡೆಯುತ್ತವೆ.

ಶಿಬಿರಾರ್ಥಿಗಳ ಊಟೋಪಚಾರಗಳಿಗಾಗಿ ನಿಗದಿಪಡಿಸಿದ ಶುಲ್ಕ ರೂ. ೧೦೦೦=೦೦.

---

ಆಸಕ್ತ ಅಭ್ಯರ್ಥಿಗಳು **೨೦೦೨ ಸೆಪ್ಟೆಂಬರ್ ೩೦ರೊಳಗೆ** ಅಭ್ಯರ್ಥಿಪತ್ರ ಕಳಿಸಬೇಕು.
**ವಿಳಾಸ: ನೀನಾಸಮ್ ಸಂಸ್ಕೃತಿ ಶಿಬಿರ, ಹೆಗ್ಗೋಡು, ಸಾಗರ ಕರ್ನಾಟಕ ೫೭೭ ೪೧೭.**

# ಗುಜರಾತಿನ ಧರ್ಮದ್ವಂದ್ವದ ದಾರುಣಕಥನ

*ಧರ್ಮವೆಂಬುದು ಮತ-ಅಭಿಮತಗಳ ಸೀಮಿತತೆಯನ್ನು ದಾಟಿನಿಂತದ್ದೂ ಎಲ್ಲ ಭಿನ್ನತೆಗಳನ್ನು ಗೌರವಿಸುತ್ತಲೆ ಅವೆಲ್ಲವುಗಳ ಹಿಂದಿನ ಏಕತೆಯನ್ನು ಗುರುತಿಸುವಂಥದ್ದೂ ಆದ ಒಂದು ಪ್ರಜ್ಞಾಪಥವೆನ್ನುವುದು ಬಹು ಭಾರತೀಯರ ಬಹುದೀರ್ಘಕಾಲದ ತಿಳುವಳಿಕೆಯಾಗಿದೆ. ಆಗಾಗ್ಗೆ ಅಲ್ಲಲ್ಲಿ ಅನೇಕ ಸವಾಲುಗಳನ್ನೆದುರಿಸಿ ತನ್ನನ್ನುಳಿಸಿಕೊಂಡು ಬೆಳೆಸಿಕೊಂಡು ಬಂದ ಈ ನಂಬುಗೆ ಇತ್ತೀಚಿನ ವರ್ಷಗಳಲ್ಲಿ, ವಿಶೇಷವಾಗಿ ಗುಜರಾತಿನಲ್ಲಿ, ಮರ್ಮಾಘಾತಕ್ಕೆ ಈಡಾಗಿದೆ. ಜೀವನಧರ್ಮ ಹಾಗೂ ಧರ್ಮಜೀವನಗಳ ಸಹಜ ದ್ವಂದ್ವಸಮೃದ್ಧಿಯನ್ನು ಸಹಿಸಲಾರದ ಮತೀಯವಾದಿಗಳು ಧರ್ಮ-ಧರ್ಮಗಳ ನಡುವೆ ದ್ವಂದ್ವಯುದ್ಧವೊಂದನ್ನು ಆರಂಭಿಸಿ, ಧರ್ಮದ ಜೀವಧಾರಕ ಸತ್ವವನ್ನೆ ನಾಶಮಾಡತೊಡಗಿದ್ದಾರೆ. ಈ ಖೂಳ ಕಾಳಗದಲ್ಲಿ, ನಿಷ್ಕಾರಣ ಹಿಂಸೆಯಲ್ಲಿ ತೊಡಗಬಾರದೆನ್ನುವ ಆಧ್ಯಾತ್ಮಧರ್ಮಕ್ಕೆ ಬೆಲೆಯಿಲ್ಲ; ವೃದ್ಧರು, ಹೆಂಗಸರು, ಮಕ್ಕಳಂತಹ ಅಬಲರನ್ನೂ ಪ್ರಾಣಭಿಕ್ಷೆ ಬೇಡಿದವರನ್ನೂ ಕೊಲ್ಲಬಾರದೆನ್ನುವ ಕ್ಷಾತ್ರಧರ್ಮಕ್ಕೆ ಬೆಲೆಯಿಲ್ಲ; ಪಾತಕದಲ್ಲಿ ಪಾಲ್ಗೊಳ್ಳದಿದ್ದವರನ್ನೂ ಪಾತಕಿಗಳೆಂದು ಸಿದ್ಧವಾಗದಿದ್ದವರನ್ನೂ ಶಿಕ್ಷಿಸಬಾರದೆಂಬ ನ್ಯಾಯಧರ್ಮಕ್ಕೆ ಸ್ಥಳವಿಲ್ಲ; ಆಳುವವರು ಎಂಥ ವಿಷಮ ಸನ್ನಿವೇಶದಲ್ಲೂ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕೆನ್ನುವ ರಾಜಧರ್ಮಕ್ಕೆ ಸ್ಥಾನವಿಲ್ಲ. ಮತಾತೀತ ಪ್ರೀತಿಯ ಸೆಳವಿಗೆ ಸಿಕ್ಕು, ಪ್ರಕೃತಿ-ಪುರುಷರುಗಳ ಮೂಲತತ್ವದ ಮಾದರಿಗಳಾದ ಅಂತರ್‌ಮತೀಯ ಪ್ರೇಮಿಗಳನ್ನು ಘಾತಿಸದೆ ಅವರನ್ನು ಬೆರಗುಗಣ್ಣಿಂದ ನೋಡುವಂಥ ಪ್ರೇಮಧರ್ಮಕ್ಕೂ ಇಲ್ಲಿ ನೆಲೆಯಿಲ್ಲ. ಅನ್ಯ ಮತದವರನ್ನು ಹತಮಾಡುವುದೆ ತಮ್ಮ ಧರ್ಮವನ್ನು ಪ್ರತಿಪಾದಿಸುವ ಕ್ರಮವೆಂದು ತಿಳಿದಂತಿರುವ ಮತೀಯವಾದಿಗಳು ಅಂಥ ಪ್ರಕ್ರಿಯೆಯಲ್ಲಿ ತಾವು ತಮ್ಮ ಧರ್ಮವನ್ನೆ ಧ್ವಂಸಗೊಳಿಸು ತ್ತಿದ್ದೇವೆಂಬ ಕನಿಷ್ಠ ಅರಿವೂ ಇಲ್ಲದಂತೆ ವರ್ತಿಸುತ್ತಿರುವುದು ನಮ್ಮ ಕಾಲದ ದುರಂತವ್ಯಂಗ್ಯವಾಗಿದೆ.*

*ಏಟು - ಎದಿರೇಟುಗಳ ಈ ನಿರ್ದಯಸರಣಿ ತಂದ ನೋವನ್ನು ಕುರಿತು 'ಮಾತುಕತೆ' ಈ ಸಂಚಿಕೆಯಲ್ಲಿ ನಾಲ್ವರು ಗಣ್ಯರ ಚಿಂತನೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದೆ. ಇವರಲ್ಲಿ, ಕನ್ನಡದ ಹಿರಿಯ ಚೇತನ ಕೀರ್ತಿನಾಥ ಕುರ್ತಕೋಟಿಯವರು ಅನೇಕ ವರ್ಷಗಳ ಕಾಲ ಗುಜರಾತಿನಲ್ಲಿ ಅಧ್ಯಾಪಕರಾಗಿದ್ದವರು, ಗುಜರಾತಿಗಳ ಆತ್ಮೀಯ ಸಂಬಂಧವನ್ನು ಹೊಂದಿದ್ದವರು; ಆಶೀಷ್ ನಂದಿ ಪ್ರಸ್ತುತ ಭಾರತದ ಧೀಮಂತ ಚಿಂತಕರಲ್ಲೊಬ್ಬರು; ಗಣೇಶ್ ದೇವಿಯವರು ಹಲವು ವರ್ಷಗಳಿಂದ ಗುಜರಾತಿನ ಆದಿವಾಸಿಗಳ ನಡುವೆ ಬಾಳುತ್ತ ಅವರ ಆತ್ಮಗೌರವದ ಆಂದೋಲನಗಳಲ್ಲಿ ನೇರ ಭಾಗಿಯಾದವರು; ಸೈರಸ್ ಗಝ್ದರ್ ಭಾರತೀಯ ಉದ್ಯಮ ಕ್ಷೇತ್ರದ ನೇತಾರರಲ್ಲೊಬ್ಬರು. ನಂದಿ, ದೇವಿ ಹಾಗೂ ಗಝ್ದರ್ ಇವರ ಲೇಖನಗಳನ್ನು ದೆಹಲಿಯ 'ಸೆಮಿನಾರ್' ಪತ್ರಿಕೆಯ ಕೃಪೆಯಿಂದ ಪಡೆದುಕೊಂಡು, ಸಂಗ್ರಹಿಸಿ, ಅನುವಾದಿಸಿ ಇಲ್ಲಿ ಪ್ರಕಟಿಸುತ್ತಿದ್ದೇವೆ.*

# ನಾಯಂ ಹಂತಿ ನ ಹನ್ಯತೇ

ಕೀರ್ತಿನಾಥ ಕುರ್ತಕೋಟಿ

ಗುಜರಾತಿನ ಹತ್ಯಾಕಾಂಡ ಇನ್ನೂ ಮುಗಿದಿಲ್ಲ. ಗೋಧ್ರಾ, ಅಹಮದಾಬಾದ್, ವಡೋದರಾ, ಮೊಡಾಸಾ, ವೀಸನಗರ – ಹೀಗೆ ತನಗೆ ಬೇಕಾದ ಕಡೆಗಳಲ್ಲಿ ಅದು ಪ್ರಕಟವಾಗುತ್ತದೆ. ನಿನ್ನೆ, ಮೊನ್ನೆ, ಇಂದು, ನಾಳೆ, ಕಳೆದ ವರ್ಷ, ಹತ್ತು ಇಪ್ಪತ್ತು ವರ್ಷಗಳಷ್ಟು ಹಿಂದೆ, ಹಗಲು, ರಾತ್ರಿ, ಸಂಜೆ, ಮುಂಜಾನೆ – ಹೀಗೆ ಬೇಕಾದ ಹೊತ್ತಿನಲ್ಲಿ ಅದು ಹೊತ್ತಿಕೊಳ್ಳುತ್ತದೆ. ಅದರ ಕೇಂದ್ರ ಗುಜರಾತವೇ ಆಗಬೇಕಾಗಿಲ್ಲ, – ಗುಜರಾತ ಈಗ ಕೇಂದ್ರವಾಗಿರುವುದು ಒಂದು ಆಕಸ್ಮಿಕ – ಜನ ಇದ್ದಲ್ಲೆಲ್ಲ ಎಲ್ಲಿ ಬೇಕಾದರೂ ಆಗಬಹುದು. ಇಂದಲ್ಲ ನಾಳೆ ಅದು ಮುಗಿಯಬಹುದೆಂದು ಆಸೆಯಿಂದ ಕಾಯುತ್ತಿದ್ದೇವೆ. ಅದು ಮುಗಿದೀತೆಂಬ ಭರವಸೆ ಇಲ್ಲದೆಯೂ ಕಾಯುತ್ತಿದ್ದೇವೆ. ೧೯೬೯ರ ಜುಲೈ ತಿಂಗಳಲ್ಲಿ ಅದು ಹೀಗೆಯೇ ಪ್ರಕಟವಾಗಿತ್ತು. ಎರಡು ತಿಂಗಳವರೆಗೆ ಕರ್ಫ್ಯೂ ಜಾರಿಯಲ್ಲಿತ್ತು. ಆ ಮೇಲೆ ಮುಗಿಯಿತು. ಮುಗಿಯಲಿಲ್ಲ. ಮತ್ತೆ ಮತ್ತೆ ಪ್ರಕಟವಾಗುತ್ತಲೇ ಇದೆ. ಕಾಲಕಾಲಕ್ಕೆ ಇತಿಹಾಸ ಒಂದೊಂದು ನೆವವನ್ನು ನೀಡುತ್ತಿರುತ್ತದೆ.

ಈ ಹತ್ಯಾಕಾಂಡದಲ್ಲಿ ಜೀವತೆತ್ತವರು ಅನೇಕ ರೀತಿಯ ಜನರಿದ್ದಾರೆ. ಹಿಂದುಗಳು, ಮುಸಲ್ಮಾನರು, ಕೆಳಜಾತಿಯ ಜನರು, ಮನೆಗಳಿದ್ದವರು, ಇಲ್ಲದವರು, ಬಡವರು, ಶ್ರೀಮಂತರು – ಹೊತ್ತಿರುವ ದಳ್ಳುರಿಗೆ ಜಾತಿ-ಭೇದವಿಲ್ಲ. ಮನುಷ್ಯನಿಗೆ ಜೀವವಿದ್ದರೆ ಸಾಕು, ಅವನು ಸಾಯಬೇಕು. ಬದುಕನ್ನು ನಾಶಮಾಡುವ ಅಹೈತುಕ ಛಲ. ಇದರ ಸತ್ಯವನ್ನು ಕಂಡುಹಿಡಿಯುವ ತಾಕತ್ತು ಯಾವ ನ್ಯಾಯಾಲಯಕ್ಕೂ ಇಲ್ಲ. ಅಡಗಿಕೊಂಡಿರುವ ಸತ್ಯವನ್ನು ಹುಡುಕಿ ತೆಗೆಯಬಹುದು. ಸತ್ಯ ನಿಚ್ಚಳವಾಗಿರುವಾಗ ಹಗಲ ಬೆಳಕಿನಲ್ಲಿಯೂ ಕಣ್ಣು ಕುರುಡಾಗುತ್ತವೆ. ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ನಿಹಿತವಾಗಿರುವ ದ್ವೇಷ – ಅದು ಅವನಲ್ಲಿಯೇ ಇರುವುದರಿಂದ – ಅವನಿಗೆ ಕಾಣುವುದಿಲ್ಲ. ಅಕಾರಣ ಪ್ರೇಮವಿರುವಂತೆ ಅಕಾರಣ ದ್ವೇಷವೂ ಇರುತ್ತದೆ. ಸಭ್ಯತೆಯ ನೂರಾರು ಮಡಿಕೆಗಳಲ್ಲಿ ಸುಖವಾಗಿ ಮಲಗಿರುವ ಚೇಳಿನಂತೆ ಇರುತ್ತದೆ.



ಹತ್ಯಾಕಾಂಡ ಯಾವಾಗ ಬೇಕಾದರೂ ತಲೆ ಎತ್ತಬಹುದು ನಿಜ. ಆದರೂ ಇತಿಹಾಸ ಕೆಲವು ದಿನಗಳನ್ನು ನೆನಪಿನಲ್ಲಿ ಇಟ್ಟುಕೊಂಡಿರುತ್ತದೆ. ನಮ್ಮ ದೇಶಗಳಲ್ಲಿ ಹಬ್ಬಗಳಿಗೇನೂ ಕೊರತೆ ಇಲ್ಲ. ಜಗನ್ನಾಥನ ರಥಯಾತ್ರೆ ಪುರಿಯಲ್ಲಿ ನಡೆದಂತೆ ಅದೇದಿನ ಉಳಿದ ಕಡೆಯೂ ನಡೆಯಬೇಕು. ಜಗನ್ನಾಥನ ರಥಯಾತ್ರೆ ಎಲ್ಲ ಬೀದಿಗಳಲ್ಲಿಯೂ ನಡೆಯಬೇಕು. ಅವನು ಜಗನ್ನಾಥ, ಜಗತ್ತೆಲ್ಲ ಅವನದೇ. ಜಗನ್ನಾಥನ ರಥದ ಗಾಲಿಯ ಕೆಳಗೆ ಸಿಕ್ಕು ಸತ್ತವರು ಅಸಂಖ್ಯ. ಅದರಂತೆ ಮೊಹರಂ, ಬಕ್ರೀದ್ ಮೊದಲಾದವುಗಳು ಸಾರ್ವಜನಿಕ ಹಬ್ಬಗಳು. ಹೋಳಿಹುಣ್ಣಿಮೆಯ ಬಣ್ಣದಾಟಕ್ಕೆ ಯಾರೂ ಅಸ್ಪೃಶ್ಯರಲ್ಲ. ಹಬ್ಬಗಳೆಂದರೆ ವ್ಯಕ್ತಿ - ವ್ಯಕ್ತಿಗಳ ನಡುವಿನ ಸೀಮಾರೇಖೆಗಳು ಅಳಿಸಿಹೋಗುವ ಕಾಲ. ಯಾರದೇ ಮನೆಯ ಕುಳ್ಳು-ಕಟ್ಟಿಗೆಗಳನ್ನು ಕದ್ದುತಂದು ಬೆಂಕಿಯಲ್ಲಿ ಹಾಕುವುದರಿಂದಲೇ ಕಾಮದೇವನಿಗೆ ತೃಪ್ತಿಯಾಗಬೇಕು. ಈ ವಿಷಯದಲ್ಲಿ ದ್ವೇಷ ಪ್ರೇಮಗಳೆರಡೂ ಒಂದೇ ಆಗಿಬಿಡುತ್ತವೆ, ಮರ್ಯಾದೆಯನ್ನು ದಾಟಿ ಹೋಗುತ್ತವೆ. ಪ್ರೇಮ ಉಕ್ಕಿ ಬಂದರೆ ಒಬ್ಬರನ್ನೊಬ್ಬರು ಅಪ್ಪಿಕೊಳ್ಳಬೇಕು. ಅಪ್ಪುಗೆಯಲ್ಲಿಯಂತೆ ಕೊಲ್ಲುವಾಗಲೂ ಇನ್ನೊಬ್ಬರನ್ನು ಮುಟ್ಟಲೇಬೇಕು. ಪ್ರೇಮಚಂದರ 'ಸದ್ಗತಿ' ಕತೆಯಲ್ಲಿ ಬ್ರಾಹ್ಮಣ ತನ್ನ ಅಂಗಳದಲ್ಲಿ ಸತ್ತುಬಿದ್ದ ಹೊಲೆಯನ ಹೆಣವನ್ನು ಒಬ್ಬನೇ ಸಾಗಿಸುವ ಚಿತ್ರವಿದೆ. ಈ ಚಿತ್ರದ ಅರ್ಥ ದ್ವೇಷವಲ್ಲ, ಪ್ರೇಮವೂ ಅಲ್ಲ. ಅದು ಅವನ ಜವಾಬ್ದಾರಿ. ಅಸ್ಪೃಶ್ಯನ ಸ್ಪರ್ಶ ಬ್ರಾಹ್ಮಣನ ಜವಾಬ್ದಾರಿ.

ಈ ಹಬ್ಬಗಳು ವರ್ಷಕ್ಕೊಮ್ಮೆ ಮಾತ್ರ ಬರುತ್ತವೆ. ಒಮ್ಮೆ ಮಾತ್ರ ಬಂದು ಕಣ್ಮರೆಯಾಗುತ್ತವೆ... 

ಪಡೆಯುತ್ತಲೇ ಹೋಗುತ್ತವೆ. ಆದರೆ ನಮ್ಮ ಅಭಿಮಾನಕ್ಕೆ ಅದನ್ನು ನೋಡುವ ಕಣ್ಣಿಲ್ಲ. ಅಲ್ಲದೆ 'ಸ್ವ ಮತ್ತು ಪರ' ಎಂಬ ಭಾವನೆಯನ್ನು ಪೋಷಿಸಿ ಬೆಳೆಸುವುದೇ ಈ ಕುರುಡು ಅಭಿಮಾನ.

ನಮ್ಮವರು ಎಂದು ಗುಂಪುಕಟ್ಟುವುದೇ ಸಂಘಟನೆಯ ಮೊದಲ ಹೆಜ್ಜೆಯಾಗಿದೆ. ಸಂಘಟನೆ ಯಾವುದೇ ಇರಲಿ ಅದು ದುಷ್ಟವಾದದ್ದು. ಸಂಘಟನೆಯ ಉದ್ದೇಶವೆಂದರೆ ನಮ್ಮವರನ್ನು ಒಂದುಗೂಡಿಸಿ, ಬೇರೆಯವರನ್ನು ಹೊರಗಿಡುವದು. ಮನೆ ಮತ್ತು ಸಂಘಟನೆ ಇವುಗಳ ನಡುವಿನ ವ್ಯತ್ಯಾಸ ಅಗಾಧವಾದದ್ದು. ಮನೆಯ ಸಂರಚನೆ ಖಾಸಗಿಯಾದದ್ದು, ನಮ್ಮ ದೇಹದಂತೆ. ಸಂಘಟನೆಯ ಸ್ವರೂಪ ಸಾರ್ವಜನಿಕವಾದದ್ದು. ಮನೆ ಇರುವುದು ಸ್ವಂತದ ಮತ್ತು ನಮ್ಮವರ ಸಂರಕ್ಷಣೆಗಾಗಿ. ಸಂಘಟನೆಯ ಉದ್ದೇಶ ಬೇರೆಯವರನ್ನು ಹೊರಗಿಡುವುದಕ್ಕಾಗಿ. ಆತ್ಮೀಯತೆ ಮನೆಯ ತಳಹದಿಯಾಗಿದ್ದರೆ, ಸಂಘಟನೆಯು ಬೇರೆಯವರ ವಿರುದ್ಧ ಹುಟ್ಟಿಕೊಳ್ಳುತ್ತದೆ. ಮನೆಯೊಳಗಿನ ಶಿಸ್ತು ವಿಧೇಯತೆಗಳಿಗಿಂತ ಭಿನ್ನವಾದ ಶಿಸ್ತು ವಿಧೇಯತೆಗಳು ಸಂಘಟನೆಯಲ್ಲಿರುತ್ತವೆ. ಸಮಾಜ, ಊರು, ನಗರ ಮತ್ತು ದೇಶಗಳು ಮನೆಗಳಾದರೆ ದೇಶದಲ್ಲಿ ಹಿಂಸೆಯ ಪ್ರಮಾಣ ಕಡಿಮೆಯಾಗಿರುತ್ತದೆ. ಮನೆಗಳಲ್ಲಿ ಹಿಂಸೆ ಇರುವುದಿಲ್ಲ ಎಂದು ಹೇಳಲಾಗುವುದಿಲ್ಲ. ಆದರೆ ಸಂಘಟನೆ ತಂದೊಡ್ಡುವ ಹಿಂಸೆ ವ್ಯಾಪಕವಾದದ್ದು, ಸಾಮುದಾಯಿಕವಾದದ್ದು. ಒಂದು ಸಮೂಹ ಸಂಘಟಿತವಾದರೆ ಅದು ಇತರ ಸಮೂಹಗಳನ್ನು ನಾಶ ಮಾಡಬಲ್ಲದು. ಯೂರೋಪಿನಲ್ಲಿ ಪ್ರಚಾರದಲ್ಲಿರುವ ನೇಶನ್-ಸ್ಟೇಟ್ ಪರಿಕಲ್ಪನೆಯಲ್ಲಿ ಈ ಸಂಘಟನೆಯ ಅಂಶ ನಿಹಿತವಾಗಿದೆ. ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ಅಕಾರಣವಾಗಿ ದ್ವೇಷಿಸುವುದನ್ನು ಕಲಿತ ಮೇಲೆ ಸಾಮುದಾಯಿಕ ಹತ್ಯೆಯನ್ನು ಆತ್ಮಸಾಕ್ಷಿಗೆ ನೋವಾಗದಂತೆ ನಡೆಸಬಹುದು. ಮನೆಯೊಳಗಿನ ಆತ್ಮಸಾಕ್ಷಿಯ ನೋವು ಸಂಘಟನೆಯಲ್ಲಿ ಇರುವುದಿಲ್ಲ.

ಸ್ವಾತಂತ್ರ್ಯವನ್ನು ಪಡೆದುಕೊಂಡ ಮೇಲೆ ನಮ್ಮ ದೇಶ ಮನೆಯಾಗಿ ಉಳಿದಿಲ್ಲ. ಕ್ರಮೇಣ ಅದು ಸಂಘಟನೆಯ ಸ್ವರೂಪವನ್ನು ಪಡೆಯತೊಡಗಿದೆ. 'ವೈವಿಧ್ಯ', 'ಏಕತೆ' ಯಂಥ ಶಬ್ದಗಳು ಈಗ ಸಂಘಟನೆಯ ಕೂಗುಗಳಾಗುತ್ತವೆ. ಮನೆಯಲ್ಲಿಯ ಐಕ್ಯವೆಂದರೆ ದೇಹದಲ್ಲಿಯ ಅಂಗಾಂಗಗಳ ಐಕ್ಯದಂತೆ ಸಹಜವಾದದ್ದು. ಸಂಘಟನೆಯ ಐಕ್ಯವೆಂದರೆ ಒಣ ಕಟ್ಟಿಗೆಗಳನ್ನು ಕೂಡಿಸಿ ಕಟ್ಟಿಹಾಕಿದಂತೆ. ನಮ್ಮ ದೇಶದಲ್ಲಿರುವ ಸರಕಾರಿ ಐಕ್ಯ ಕೂಡ ಇದೇ ರೀತಿಯದು. ಪ್ರತಿಯೊಂದು ರಾಜ್ಯ ಒಂದು ಒಣ ಕಟ್ಟಿಗೆಯಾಗಿದೆ. ಈ ಕಟ್ಟಿಗೆ ಕೋಲಾಗಲು ಬಹಳ ಹೊತ್ತು ಹಿಡಿಯಲಾರದು. ಕೋಲು



ಕಟ್ಟಿಗೆಯದಾಗಬಹುದು, ಅಥವಾ ಉಕ್ಕಿನದೂ ಆಗಬಹುದು. 'ಕೋಲು' ಶಬ್ದಕ್ಕೆ ಬಾಣ ಎಂಬ ಅರ್ಥವೂ ಇದೆ. 'ಕೊಲ್ಲು' ಎಂಬ ಕ್ರಿಯಾಪದದಿಂದ ಹುಟ್ಟಿದ್ದು 'ಕೋಲು'. ದೇಶದ ಪ್ರಜೆಗಳು ಇಂಥ ಕೋಲುಗಳಾಗುತ್ತಿದ್ದಾರೆ. ನೆರೆಮನೆಯಲ್ಲಿ ಸಾವು ಎರಗಿದರೆ ಸಹಾನುಭೂತಿಯಿಂದ ನೆರೆಮನೆಯವರನ್ನು ಸಂತವಿಸಬಹುದು. ಸಾವಿನ ಮನೆಯಲ್ಲಿ ಒಲೆ ಹತ್ತಿಸುವಂತಿಲ್ಲವಾದ್ದರಿಂದ ನಮ್ಮ ಮನೆಯಲ್ಲಿ ಅಡುಗೆ ಮಾಡಿ ನೆರೆಮನೆಗೆ ಹೋಗಿ ಬಡಿಸಬಹುದು. ಆದರೆ ಸಾಮುದಾಯಿಕ ಮರಣಕ್ಕೆ ಈ ಉಪಚಾರ ನಡೆಯುವುದಿಲ್ಲ. ಬದುಕನ್ನು ಸಂಘಟಿಸುವವರು ಸಾವನ್ನೂ ಸಂಘಟಿಸಬೇಕಾಗುತ್ತದೆ. ಸಾಮುದಾಯಿಕ ಮರಣಕ್ಕೆ ಸೂತಕವಿಲ್ಲ. ಸಂವೇದನೆಯಿಲ್ಲದ ಕೊಲೆಗೆ ಸೂತಕವೂ ಇಲ್ಲ.

ಪ್ರಜೆಗಳು ಕೋಲುಗಳಾಗುವುದೆಂದರೆ ಆಯುಧಗಳಾದಂತೆ. ಆಯುಧದಿಂದಲೇ ಕೊಲೆ ನಡೆದರೂ ಆಯುಧಕ್ಕೆ ಪಾಪಪ್ರಜ್ಞೆ ಇರುವುದಿಲ್ಲ. ಈಗ ನಮ್ಮಲ್ಲಿ ಜೀವಂತ ಮನುಷ್ಯರು ಆಯುಧಗಳಾಗುತ್ತಿದ್ದಾರೆ. ಗುಜರಾತದ ಹತ್ಯಾಕಾಂಡವನ್ನು ನೋಡಿದರೆ ಹುಟ್ಟುವುದು ಶೋಕವಲ್ಲ, ಭಯ. ಕೊಲ್ಲುವುದು ಒಂದು ಅಕರ್ಮಕ ಕ್ರಿಯಾಪದವಾಗಿದೆ, ಅಥವಾ ಕೇವಲ ಕ್ರಿಯೆಯಾಗಿದೆ. ಕೊಲ್ಲುವರಾರು? ಸಾಯುವವರು ಯಾರು? 'ನಾಯಂ ಹಂತಿ ನ ಹನ್ಯತೇ'. ಭಗವದ್ಗೀತೆಯ ಅದ್ಭುತವಾದ ಅಣಕ ಈಗ ದೇಶದಲ್ಲಿ ನಡೆಯುತ್ತಿದೆ.

ಭಾರತೀಯ ಚಲನಚಿತ್ರ ರಂಗದಲ್ಲಿ
ನಾಲ್ಕನೇ ಬಾರಿಗೆ
ಸ್ವರ್ಣಕಮಲ ಪ್ರಶಸ್ತಿ ಭಾಜನರಾದ
**ಶ್ರೀ ಗಿರೀಶ ಕಾಸರವಳ್ಳಿ**
ಛಾಯಾಗ್ರಹಣಕ್ಕೆ ರಾಷ್ಟ್ರಪ್ರಶಸ್ತಿ ಪಡೆದ
**ಶ್ರೀ ಹೆಚ್.ಎಂ. ರಾಮಚಂದ್ರ**
ಮತ್ತು
ಮೃಚ್ಛಕಟಿಕದ ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ
**ಶ್ರೀ ಬನ್ನಂಜೆ ಗೋವಿಂದಾಚಾರ್ಯ**
ಇವರಿಗೆ
ನೀನಾಸಮ್ ಬಳಗದ ಅಭಿನಂದನೆಗಳು

# ಸಂಸ್ಕೃತಿಯೊಂದಕ್ಕೆ ಶ್ರದ್ಧಾಂಜಲಿ

ಆಶೀಷ್ ನಂದಿ

ಜನಾಂಗೀಯ ನರಮೇಧಗಳ ಇತಿಹಾಸ ನಮಗೆ ಕಲಿಸಿರುವ ಕಟುಪಾಠ ಇದು: ಅತಿಕ್ರೂರ, ಅನಾಗರಿಕ ಹತ್ಯಾಕಾಂಡಗಳು ಘಟಿಸುವುದು ಪರಸ್ಪರ ಅಪರಿಚಿತವೂ ದೂರದೂರದ ಪ್ರದೇಶಗಳಿಗೆ ಸೇರಿದವೂ ಆದ ಜನಾಂಗಗಳ ನಡುವೆಯಲ್ಲ; ಬದಲಾಗಿ ಅತ್ಯಂತ ಹತ್ತಿರದವೂ ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಸಮೀಪದವೂ ಹಲವು ಸ್ತರಗಳಲ್ಲಿ ಪರಸ್ಪರ ಸ್ಪರ್ಶಿಸುವಂಥ ಜೀವನಕ್ರಮಗಳನ್ನುಳ್ಳವೂ ಆದ ಜನಾಂಗಗಳ ನಡುವೆ. ಇಂಥ ಸಾಮೀಪ್ಯ ವಿಷಕಲುಷಿತಗೊಂಡಾಗ ಇಲ್ಲ ವಿಸ್ಫೋಟಗೊಂಡಾಗ ಅದು ವಿಲಕ್ಷಣವೂ ಭಯಾನಕವೂ ಆದ ರಕ್ಕಸಶಕ್ತಿಗಳನ್ನು ಸೃಷ್ಟಿಸಿ ಛೂ ಬಿಡುತ್ತದೆ. ಭಾರತ ವಿಭಜನೆಯ ಸಂದರ್ಭದ ಹತ್ಯಾಕಾಂಡ, ಪಶ್ಚಿಮ ಏಶಿಯಾದಲ್ಲಿ ದಶಕಗಳ ಕಾಲ ಮರಣದಪ್ಪುಗೆಯಲ್ಲಿ ಒಬ್ಬರನ್ನೊಬ್ಬರು ಬಿಗಿದು ಕೊಂಡಿರುವ ಅರಬ್ಬರು ಮತ್ತು ಇಸ್ರೇಲಿಗಳ ಕಾದಾಟ, ಕೆಲವು ವರ್ಷಗಳ ಹಿಂದೆ ರುವಾಂಡಾ ಮತ್ತು ಬೋಸ್ನಿಯಾಗಳಲ್ಲಿ ನಡೆದ ನರಮೇಧಗಳೆಲ್ಲ ಇದೇ ಮಾದರಿಯವು. ಇವೆಲ್ಲವುಗಳಲ್ಲಿ, ಪರಸ್ಪರ ಸೆಣೆಸಾಡಿದ ಸಮುದಾಯಗಳು ಅಕ್ಕಪಕ್ಕದಲ್ಲಿ ಬಾಳಿಕೊಂಡಿದ್ದವು; ಒಂದು ಇನ್ನೊಂದನ್ನು ನಿರ್ನಾಮಗೊಳಿಸಿ ಜನಾಂಗೀಯ ಶುದ್ಧೀಕರಣವನ್ನು ಸಾಧಿಸಬೇಕೆಂಬ ಅವುಗಳ ಪ್ರಯತ್ನಗಳು ಕಡುಕ್ರೂರವೂ ಆತ್ಮನಾಶಕವೂ ಆದ ಭೂತೋಚ್ಚಾಟನೆಯ ರೂಪುಗಳನ್ನು ಪಡೆದುಕೊಂಡಿದ್ದ ವಾಗಿದ್ದವು. ಗುಜರಾತಿನ ವಿದ್ಯಮಾನ ಇದಕ್ಕೆ ಯಾವ ರೀತಿಯಲ್ಲೂ ಹೊರತಲ್ಲ.

ಇಂಥದೊಂದು ಉಚ್ಚಾಟನೆಯ ಕ್ರಿಯಾವಿಧಿಗೆ ಗುಜರಾತಿನಲ್ಲಿ ತಾಲೀಮು ಬಹಳ ಹಿಂದಿನಿಂದಲೆ ನಡೆಯುತ್ತಿತ್ತು. ಆ ರಾಜ್ಯದ ಇತ್ತೀಚಿನ ಇತಿಹಾಸದಲ್ಲಿ ಗಲಭೆಗಳಿಲ್ಲದಿದ್ದ ದಿನಗಳೆ ಅತ್ಯಂತ ಅಪರೂಪ; ಸತತ ಮೂವತ್ತಮೂರು ವರ್ಷಗಳ ಕಾಲ ದಂಗೆಗಳಿಂದ ನರಳಿದ ಗುಜರಾತ್ ನಡುನಡುವೆಯೆಲ್ಲೊ ಅಲ್ಪ ವಿರಾಮಗಳಂತೆ ಮಾತ್ರ ಶಾಂತಿಯನ್ನು – ಅದೂ ಆತಂಕಭರಿತ ಶಾಂತಿಯನ್ನು – ಕಂಡಿದೆ. ಈ ಕಾಲಾವಧಿಯಲ್ಲಿ, ಕೋಮುವಾದ ಹಾಗೂ ಗಲಭೆಗಳು ರಾಜ್ಯದ ನಗರವಾಸಿ



ನಿಮ್ನವರ್ಗಗಳ ದೊಡ್ಡದೊಂದು ಗುಂಪಿಗೆ ಹೊಟ್ಟೆಹೊರೆಯುವ ಮಾರ್ಗವೊಂದಾಗಿ, ತ್ವರಿತ ಲಾಭಗಳಿಕೆಯ ಮಾರ್ಗವಾಗಿ, ಅಪೇಕ್ಷಣೀಯ ಮನರಂಜನೆಯಾಗಿ ಹಾಗೂ ಒಂದು ಜೀವನವಿಧಾನವೆ ಆಗಿ ಬೆಳೆದುಬಂದಿವೆ. ಜೊತೆಗೆ, ಅವು ಈ ನಿಮ್ನವರ್ಗಕ್ಕೆ ತತ್ಕಾಲೀನವಾಗಿಯಾದರೂ ತನ್ನ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಡುವ ಕ್ರಮಗಳಾಗಿ ಕಂಡುಬಂದಿವೆ. ದಂಗೆಯ ಅವಧಿಯಲ್ಲಿ ಹಾಗೂ ನಂತರದ ಹಲವು ದಿನಗಳವರೆಗೆ ಇಂಥ ಗಲಭೆಕೋರರು ತಮ್ಮ ತಮ್ಮ ಸಮುದಾಯಗಳಲ್ಲಿ ವೀರಾಗ್ರಣಿಗಳ ಪಟ್ಟ ಪಡೆದು ಮೆರೆಯುವುದುಂಟು; ಅಲ್ಲಿಯವರೆಗೂ ಸಮಾಜದ ಅಂಚಿನಲ್ಲಿ ಕೊಳೆಯುತ್ತಿದ್ದ ಕಹಿ ನೆನಪನ್ನು ಅವರು ತಮ್ಮ ಈ ಹೊಸ ಸ್ಥಾನಮಾನದಿಂದ ತೊಡೆಯುವುದುಂಟು.

ಇಡಿ ಜಗತ್ತಿನ ಹಿನ್ನೆಲೆಯಲ್ಲಿ ನೋಡಿದಾಗ, ಗಲಭೆಗಳು ಮೂಲಭೂತವಾಗಿ ನಗರ ಪ್ರದೇಶಗಳಲ್ಲಿ ಜನಿಸುವ ರೋಗರೂಪಗಳು ಎನ್ನುವ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಇದು ಭಾರತದ ಮಟ್ಟಿಗೆ ಇನ್ನಷ್ಟು ಸತ್ಯ ಎನ್ನುವುದನ್ನು ಅನೇಕ ಸಮಾಜಚಿಂತಕರು ಈಗಾಗಲೆ ಅಂಕಿ-ಅಂಶಗಳ ಮೂಲಕ ಸಾಬೀತುಗೊಳಿಸಿದ್ದಾರೆ. ಅದರಲ್ಲಿ ಮತ್ತೆ, ಗುಜರಾತಿನ ನಗರವಾಸಿ ಮಧ್ಯಮವರ್ಗವಂತೂ ಇಂದಿನ ಭಾರತದಲ್ಲಿ ಅತಿತೀವ್ರ ಕೋಮುವಾದಿ ಗುಂಪಾಗಿದೆ; ಅದರ ಒಂದು ಭಾಗ ಅತ್ಯುತ್ಸಾಹದಿಂದ ಕೋಮು ಹಿಂಸೆಯನ್ನು ಪ್ರೇರೇಪಿಸಿದರೆ ಇನ್ನೊಂದು ಭಾಗ ಅಷ್ಟೆ ಉತ್ಸಾಹದಿಂದ ಅದನ್ನು ಕಾರ್ಯಗತಗೊಳಿಸುತ್ತದೆ; ಹೀಗೆ ನೇರ ಭಾಗಿಯಾಗಲಾರದ ಮತ್ತೊಂದು ಭಾಗ ಆ ಹಿಂಸೆಯನ್ನು ಮೂಲಕಮಹಾಶಯನಾಗಿ ಅನುಭವಿಸುತ್ತ ಆನಂದಿಸುತ್ತದೆ.

(ಕಳೆದ ಸುಮಾರು ಒಂದುನೂರು ವರ್ಷಗಳ ಅವಧಿಯಲ್ಲಿ, ಭಾರತ ಉಪಖಂಡದ ತಥಾಕಥಿತ ಅಕ್ಷತ್ರಿಯ ಜನಾಂಗಗಳು – ಉದಾಹರಣೆಗೆ, ಬಂಗಾಳದ 'ಬಾಬುಗಳು', ಕಾಶ್ಮೀರಿ ಮುಸ್ಲಿಮರು ಮತ್ತು ಗುಜರಾತಿನ ಉಚ್ಚ ಜಾತಿಗಳವರು – ಹಿಂಸೆಯ ಬಗ್ಗೆ ವಿಶೇಷವಾದ ಹಾಗೂ – ಸ್ವತಃ ತಾವು ರಕ್ತಪಾತದಲ್ಲಿ ತೊಡಗದೆ ಪರರು ಹಾಗೆ ತೊಡಗಿದ್ದನ್ನು ವೀಕ್ಷಿಸುತ್ತ ಖುಷಿಪಡುವ ಅವರ ನಡವಳಿಕೆಯ ಕಾರಣ – ವಿಚಿತ್ರವಾದ ಆಕರ್ಷಣೆಗೆ ಒಳಗಾಗಿವೆ. ಇತ್ತೀಚಿನ ವರ್ಷಗಳಲ್ಲಿ ಮಾತ್ರ, ಇದಕ್ಕೆ ತುಸು ಭಿನ್ನವಾಗಿ, ಅವು ತಮ್ಮ ಮೊದಲಿನ 'ನಿಷ್ಕ್ರಿಯತೆ' ಹಾಗೂ 'ಹೆಣ್ಣಿಗತನ'ಗಳ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡು ವೀರತ್ವದ ಪದವಿಗೇರಲು ಪ್ರಯತ್ನಿಸುವ ರೀತಿಯಲ್ಲಿ, ಹಿಂಸೆಯನ್ನು ಮುಕ್ತಿದಾಯಕ ಮಾರ್ಗವನ್ನಾಗಿ ಅನುಸರಿಸಲು ಹವಣಿಸುತ್ತಿವೆ; ಮನದೊಳಗಿನ ಹಿಂಸೆಯನ್ನು ಸಾರ್ವಜನಿಕವಾಗಿ ಪ್ರತ್ಯಕ್ಷರೂಪದಲ್ಲಿ ತೋರ ತೊಡಗಿವೆ.)

••• ••• •••

ಗುಜರಾತಿನಲ್ಲಿ, ಉತ್ತರ ಪ್ರದೇಶದಂತಹ ಬೇರೆ ರಾಜ್ಯಗಳಿಗೆ ಹೋಲಿಸಿದಲ್ಲಿ, ನಗರಗಳು ಬಹುಮಹತ್ವದ ಕೇಂದ್ರಗಳಾಗಿವೆ. ಆ ರಾಜ್ಯದ ರಾಜಕಾರಣದಲ್ಲಿ ನಗರತ್ವ ಪ್ರಮುಖ ಪಾತ್ರ ವಹಿಸುತ್ತದೆ. ಅಲ್ಲಿನ ಸರಿಸುಮಾರು ಐವತ್ತು ನಗರಗಳಲ್ಲಿ ಬಹುಪಾಲು ಈಗಾಗಲೆ ಪರಭೀತಿ, ಪರದ್ವೇಷ ಹಾಗೂ ಕೋಮುವಾದಗಳು ಕುದಿಕುದಿಯುತ್ತಿರುವ ಕಡಾಯಿಗಳಾಗಿಹೋಗಿವೆ. ಇದರ ಪರಿಣಾಮವಾಗಿ ಗುಜರಾತ್ ಈಗ ನಗರಕ - ಔದ್ಯಮಿಕ ಜೀವನದರ್ಶನದ ಭಯಾನಕವಾದೊಂದು ನಿದರ್ಶನವಾಗಿ ಬೆಳೆದು ನಿಂತಿದೆ; ಆ ಜೀವನತತ್ವ ತನ್ನೊಳಗೆ ಯಾವತ್ತೂ ಹುದುಗಿಸಿಟ್ಟುಕೊಂಡಿದ್ದ ಹಿಂಸೆಯ ಕೊಳಕುರಾಶಿಯನ್ನೆಲ್ಲ ಈಗ ಆ ರಾಜ್ಯದ ಅಂಕಣದಲ್ಲಿ ಕಕ್ಕಿ ಕಾರುತ್ತಿದೆ. ಆ ರಾಜ್ಯ ಇತ್ತೀಚೆಗೆ ಪರರನ್ನು ಕೊಲ್ಲುವುದಷ್ಟೇ ಅಲ್ಲ ತನ್ನೊಡನೆ ತಾನೆ ಕಾದಾಡಿಕೊಳ್ಳುತ್ತಲೂ ಇದೆ. ಗುಜರಾತಿನ ದಂಗೆಗಳ ದಳ್ಳುರಿ ಎಂದೂ ಸಂಪೂರ್ಣವಾಗಿ ನಂದಿದ್ದಿಲ್ಲ. ಹಾಗಾಗಿ, ಸದ್ಯದ ಗಲಭೆಗಳು ಒಂದಿಷ್ಟು ತಗ್ಗಿದರೂ ಕೂಡ ಅದು ಹೆಚ್ಚೆಂದರೆ ತಾತ್ಕಾಲಿಕ ವಿರಾಮವನ್ನು ತರಬಹುದೆ ಹೊರತು ದೀರ್ಘಕಾಲೀನ ಶಾಂತಿಯನ್ನು ಸ್ಥಾಪಿಸಲಾರದು. ಆ ವಿರಾಮದಲ್ಲಿ ಉದ್ವಿಗ್ನತೆ ಮತ್ತು ದ್ವೇಷ ಮತ್ತೂ ಉಳಿದುಕೊಂಡಿರುತ್ತವೆ; ಎರಡೂ ಪಕ್ಷಗಳು ಮುಂದಿನ ಸುತ್ತಿಗೆ ತಯಾರಿ ನಡೆಸಿಕೊಂಡೆ ಇರುತ್ತವೆ. ಗುಜರಾತ್, ಈಗಿರುವಂತೆಯೆ, ಇನ್ನಷ್ಟು ವರ್ಷಗಳ ಕಾಲ ಅಂತರ್‌ಯುದ್ಧದ ಕ್ಷೇತ್ರವಾಗಿ ಮುಂದುವರೆಯುತ್ತದೆ.

ಈ ಬಿಕ್ಕಟ್ಟು ಹುಟ್ಟಿರುವುದು ಪಾಕಿಸ್ತಾನದ ಐ ಎಸ್ ಐ ನಿಂದಲ್ಲ ; ಹಲವು ಭಾರತೀಯರು ಅದು ದೇವರಂತೆಯೆ ಸರ್ವಶಕ್ತವೂ ಸರ್ವಜ್ಞಾನಿಯೂ ಸರ್ವ ವ್ಯಾಪಿಯೂ ಆದುದು ಎಂದು ತಿಳಿಯುವ ಆ ಗೂಢಚರ್‍ಯೆ ಸಂಸ್ಥೆಯ ತಂತ್ರದಿಂದಲ್ಲ. ಅಥವಾ, ಈಚಿನ ಗಲಭೆಗಳಲ್ಲಿ ಅಲ್ಪಸಂಖ್ಯಾಕರೆ ಗಣನೀಯವಾಗಿ ಹಾನಿಗೊಳಗಾಗಿದ್ದು ಅವರಿನ್ನು ಸೇಡಿಗೆ ಸಜ್ಜಾಗುತ್ತಿದ್ದಾರೆಂಬ ಕಾರಣಕ್ಕೂ ಅಲ್ಲ. ಅದು ಉದ್ಭವಿಸಿರುವುದು, ನಿಜವಾಗಿ, ಅಲ್ಪಸಂಖ್ಯಾಕರು ತಾವು ಇನ್ನು ರಾಜ್ಯ ಸರ್ಕಾರದಿಂದ ಯಾವುದೇ ಸಹಾಯವನ್ನು ನಿರೀಕ್ಷಿಸುವಂತಿಲ್ಲ ಎಂದು ತಿಳಿದುಕೊಂಡ ಕಾರಣಕ್ಕಾಗಿ. ಸರ್ಕಾರಗಳ ಕೆಳಸ್ತರಗಳ ಅಧಿಕಾರಿಗಳು ಮತ್ತು ನೌಕರರು ಗಲಭೆಕೋರರ ಜೊತೆ ಕೈಜೋಡಿಸಿದ್ದ ಉದಾಹರಣೆಗಳು ಅನೇಕ ಬಾರಿ ಹಾಗೂ ಅನೇಕ ರಾಜ್ಯಗಳಲ್ಲಿ ಹೇರಳವಾಗಿ ಕಂಡುಬಂದಿವೆ. ಆದರೆ, ಪ್ರಾಯಶಃ ೧೯೮೪ರ ಸಿಖ್-ವಿರೋಧಿ ದುಷ್ಕೃತ್ಯಗಳ ನಂತರದಲ್ಲಿ, ರಾಜ್ಯಸರ್ಕಾರವೊಂದರ ಇಡೀ ವ್ಯವಸ್ಥೆ – ಅಧಿಕಾರಿಗಳು ಹಾಗೂ



ಶಾಂತಿ-ಮತ್ತು-ಕಾನೂನು ಪರಿಪಾಲಕರಲ್ಲಿ ಕೆಲವು ಧೀರ ಭಿನ್ನಮತೀಯರನ್ನು ಹೊರತುಪಡಿಸಿದಂತೆ – ಅಲ್ಪಸಂಖ್ಯಾಕರ ಮೇಲೆ ಹೀಗೆ ಮುಗಿಬಿದ್ದಿರುವುದು ಗುಜರಾತಿನಲ್ಲಿಯೆ ಎಂದು ತೋರುತ್ತದೆ. ಈ ಅಲ್ಪಸಂಖ್ಯಾಕರೂ ಈಗ, ಒಳ್ಳೆಯದಕ್ಕೊ ಕೆಟ್ಟದ್ದಕ್ಕೊ, ಒಟ್ಟು ತಮ್ಮ ರಕ್ಷಣೆಯನ್ನು ತಾವೆ ಮಾಡಿಕೊಳ್ಳಬೇಕೆಂಬ ಕಟುಸತ್ಯವನ್ನು ಮನಗಂಡಿದ್ದಾರೆ. ಇದು ಒಟ್ಟಾರೆಯಾಗಿ ದುರಂತದ ಬೀಜವನ್ನು ಬಿತ್ತಿದೆ; ಇಡಿಯ ರಾಜ್ಯದ ವಾತಾವರಣವನ್ನು ವಿಷಮಯಗೊಳಿಸಿ, ಭಯೋತ್ಪಾದಕರ ಉದ್ಭವಕ್ಕೆ ಇನ್ನೊಂದು ನೆಲೆ ಹಾಗೂ ನೆಲವನ್ನು ಸೃಷ್ಟಿಸಿದೆ. ಪಂಜಾಬಿನಲ್ಲಿ ಕಂಡಂತೆ, ಅಲ್ಲಿ ೧೯೮೦ರ ದಶಕದಲ್ಲಿ ಭಯೋತ್ಪಾದನೆ ಅತಿಯಾಗಿ ಬೆಳೆದದ್ದು ಅಪರೇಷನ್ ಬ್ಲೂಸ್ಟಾರ್‌ಗಿಂತ ಹೆಚ್ಚಾಗಿ ಸಿಖ್-ವಿರೋಧಿ ಗಲಭೆಗಳ ಕಾರಣದಿಂದಾಗಿ; ಈಗ ಗುಜರಾತಿನಲ್ಲಿ ಅದೆ ರೀತಿಯಲ್ಲಿ, ಎರಡು ದಶಕಗಳಿಗೂ ಮಿಕ್ಕು ನಡೆಯುತ್ತಬಂದಿರುವ ಕೋಮುಗಲಭೆಗಳು ಭಯೋತ್ಪಾದನೆಯ ಸೃಷ್ಟಿಗೆ ಕಾರಣವಾಗುವಂತಹ ಅತೀವ ಹತಾಶೆಯ ಪರಿಸ್ಥಿತಿಯನ್ನು ನಿರ್ಮಿಸಿವೆ.

••• ••• •••

ನಾನು ಗುಜರಾತನ್ನು ಮೊದಲ ಸಲ ಕಂಡದ್ದು ೧೯೬೦ರ ದಶಕದಲ್ಲಿ, ಹದಿಹರೆಯದ ವಿದ್ಯಾರ್ಥಿಯಾಗಿ. ಅಂದು, ಈ ರಾಜ್ಯ ಎಂದಾದರೂ ಒಮ್ಮೆ ಕೋಮುದಳ್ಳುರಿಯಲ್ಲಿ ಬೇಯಬಹುದು ಎಂದು ಕಲ್ಪಿಸಿಕೊಳ್ಳಲೂ ಆಗದಂತಹ ಸನ್ನಿವೇಶವಿತ್ತು. ಅಲ್ಲಿ ಆ ಮೊದಲು ಸಣ್ಣಪುಟ್ಟ ಕೋಮುಘರ್ಷಣೆಗಳಾಗಿದ್ದುದು ಹೌದು; ಜನ ಅವುಗಳನ್ನು ನೆನಪಿಸಿಕೊಳ್ಳುತ್ತಿದ್ದುದೂ ಹೌದು. ಆದರೆ ಅವು ಮುಂದೆ ಹೀಗೆ ಭೀಕರ ದಾವಾಗ್ನಿಯ ರೂಪು ತಳೆಯಬಹುದೆನ್ನುವುದು ಯಾರ ಕುಕಲ್ಪನೆಗೂ ಹೊಳೆಯದ ಮಾತಾಗಿತ್ತು. ನಾನು ಗಮನಿಸಿದಂತೆ, ಅಹಮದಾಬಾದಿನ ಹಲವು ಹಿಂದುಗಳು ಮುಸ್ಲಿಮರ ಬಗ್ಗೆ ಸಂಶಯ ಹಾಗೂ ಭಯಗಳನ್ನಿಟ್ಟುಕೊಂಡಿದ್ದರಾದರೂ ಅವು ಬಹುಪಾಲು ಗುಜರಾತಿಯಲ್ಲದ ಮುಸ್ಲಿಮರ – ಅಹಮದಾಬಾದಿನ ಬೃಹತ್ ಜವಳಿ ಉದ್ಯಮದಲ್ಲಿ ಕಾರ್ಮಿಕರಾಗಿ ಬಂದು ಸೇರಿಕೊಂಡಿದ್ದ ಮುಸ್ಲಿಮರ – ಬಗ್ಗೆಯಾಗಿದ್ದವು. ಅದೇ ವ್ಯಾಪಾರಿ ವರ್ಗದ ಗುಜರಾತಿ ಮುಸ್ಲಿಮರನ್ನು ಈ ಹಿಂದುಗಳು ಗುಜರಾತಿನ ಪರಿಸರದ ಅವಿಭಾಜ್ಯವಾದೊಂದು ಅಂಶವೆಂದೆ ಪರಿಗಣಿಸಿಕೊಂಡಿದ್ದರು. ಇವರಿಬ್ಬರ ನಡುವೆ ಸಾಮಾಜಿಕವಾಗಿ ಸ್ಪಷ್ಟವಾದೊಂದು ದೂರವಿದ್ದರೂ ಸಹಿತ ಅದು ಮೊದಲು ಪ್ರಸ್ತಾಪಿಸಿದ ವರ್ಗದ ಮುಸ್ಲಿಮರ ವಿಷಯದಲ್ಲಾದಂತೆ ಸಂಶಯ ಭಯಗಳಿಗೆ ಎಡೆಮಾಡಿಕೊಟ್ಟಿರಲಿಲ್ಲ.

ಈಗ, ಹಿನ್ನೋಟದಲ್ಲೊಮ್ಮೆ ನೋಡಿದರೆ, ಅಂದಿನ ಅಹಮದಾಬಾದ್ ಕೊಚಿನ್ ನಗರವನ್ನು ತುಂಬಾ ಹೋಲುತ್ತಿತ್ತು. ಧಾರ್ಮಿಕ ಹಾಗೂ ಜನಾಂಗೀಯ ಸಹಬಾಳುವೆಯ ಅತ್ಯುಜ್ವಲ ಪ್ರತೀಕವಾಗಿರುವ ಕೇರಳದ ಆ ಪುರಾತನ ಪಟ್ಟಣವನ್ನು ತುಂಬ ನೆನಪಿಸಿಕೊಡುವಂತಿತ್ತು. ಪ್ರಾಯಶಃ, ಅವೆರಡರ ನಡುವಿದ್ದ ಒಂದೇ ಒಂದು ವ್ಯತ್ಯಾಸವೆಂದರೆ, ಜೈನ್-ಬನಿಯಾ ಮನೋಧರ್ಮ ಪ್ರಾಬಲ್ಯದ ಅಹಮದಾಬಾದಿನಲ್ಲಿ ಮುಸ್ಲಿಮರ ಬಗ್ಗೆ ಅವರು ತಾಮಸ ತತ್ವದ ಪ್ರತಿನಿಧಿಗಳು ಎಂಬ, ತುಸು ಅಸಹಜವೆ ಆದ, ಅಸಹಿಷ್ಣುತೆಯ ಭಾವನೆಯಿತ್ತು. ಇನ್ನೊಂದೆಡೆ, ಆ ನಗರದಲ್ಲಿ ಆಗಷ್ಟೆ ಸ್ಥಾಪನೆಯಾಗುತ್ತಿದ್ದ ಆಧುನಿಕ ಸಂಸ್ಥೆಗಳಲ್ಲಿ ಹೊರರಾಜ್ಯಗಳಿಂದ ಬಂದು ಸೇರುತ್ತಿದ್ದ ಪಶ್ಚಿಮೀಕೃತ 'ಅನ್ಯ'ರ ಬಗ್ಗೆಯೂ ಅಂಥದೆ ಅಸಹಿಷ್ಣುತೆಯ ಭಾವನೆಯೊಂದು ಬೆಳೆಯುತ್ತಿದ್ದು, ಅದು ಮೊದಲನೆಯದರ ತೀಕ್ಷ್ಣತೆಯನ್ನು ತುಸು ಮುಕ್ಕಾಗಿಸಿಟ್ಟಿತ್ತು. ಸಾಂಪ್ರದಾಯಿಕ ಅಹಮದಾಬಾದ್ ಹೀಗೆ ಮೇಲ್ಕಂಡ ಎರಡೂ ವರ್ಗಗಳನ್ನು ಒಂದೇ ದೂರದಲ್ಲಿಟ್ಟಿತ್ತು.

ಆದರೆ, ೧೯೬೯ರ ಕೋಮುಗಲಭೆ ಈ ನಗರ ಪರಿಸರವನ್ನು ಮೂಲಭೂತವಾಗಿ ಬದಲಿಸಿತು; ಆಗ ಮಸುಕುಮಸುಕಾಗಿದ್ದ ಈ ಬದಲಾವಣೆಗಳು ಈಗ ಸ್ಫುಟವಾಗಿ ಗೋಚರಿಸತೊಡಗಿವೆ. ದಕ್ಷಿಣ ಏಷಿಯಾದ ಎಲ್ಲ ಗಲಭೆಗಳಂತೆಯೆ ಈ ಗಲಭೆಯೂ ಸಹ ವ್ಯವಸ್ಥಿತವಾಗಿ ಸೃಷ್ಟಿಯಾದುದಾಗಿತ್ತು; ರಾಷ್ಟ್ರೀಯ ಸ್ವಯಂಸೇವಕ ಸಂಘ ಅದನ್ನು ಅಸಾಧಾರಣ ಸಂಘಟನಾ ಸಾಮರ್ಥ್ಯದೊಂದಿಗೆ ನಡೆಸಿತು. ಈ ಹಿಂಸೆ ಹಾಗೂ ಆರ್‌ಎಸ್‌ಎಸ್ ಮತ್ತು ವಿಶ್ವ ಹಿಂದು ಪರಿಷತ್ ಯೋಜಿಸಿದ ದ್ವೇಷಾಂದೋಲನ ಗಳು ದೊಡ್ಡದೊಡ್ಡ ಲಾಭಗಳನ್ನು ತಂದಿತ್ತವು. ಅವುಗಳಿಂದಾಗಿ, ಮುಸ್ಲಿಮರು ಮಿಶ್ರಜನ ವಸತಿ ಪ್ರದೇಶಗಳನ್ನು ತೊರೆದು ಏಕಜನಾಂಗವಸತಿ ವಲಯಗಳನ್ನು ಕಟ್ಟಿಕೊಳ್ಳು ವಂತಾಯಿತು; ಎರಡೂ ಕೋಮುಗಳಲ್ಲಿ ಮಾಫಿಯಾ ಶಕ್ತಿಗಳು ಬೆಳೆದು ಪ್ರಬಲಗೊಳ್ಳುವಂತಾಯಿತು; ಈ ಹಿಂಸ್ರಕ ತಂಡಗಳು ಸದಾಕಾಲ ಹಿಂದು-ಮುಸ್ಲಿಮರ ನಡುವೆ ಗಲಭೆಗಳನ್ನೆಬ್ಬಿಸುತ್ತಾ, ಆ ಗಲಭೆಗಳ ಹೊತ್ತಿನಲ್ಲಿ ತಾವು ಹಿಂದೂಗಳ ರಕ್ಷಕರೆಂದೊ ಮುಸ್ಲಿಮರ ರಕ್ಷಕರೆಂದೊ ವೇಷಹೊತ್ತು ಮೆರೆದಾಡುವಂತಾಯಿತು.

••• ••• •••

ಆದರೆ, ನಿರುದ್ಯೋಗಿ ಮುಸ್ಲಿಮ್ ಯುವಕರಲ್ಲಿ ಇಂಥ ಅಪರಾಧಿ ವರ್ಗದ ಬೆಳವಣಿಗೆ ಬೇರೆ ಕೋಮುಗಳಲ್ಲಿನ ಪ್ರಮಾಣಕ್ಕಿಂತ ಅತಿ ಹೆಚ್ಚಾಗಿತ್ತು. ಇದಕ್ಕೆ ಕಾರಣ ವಿಲ್ಲದಿರಲಿಲ್ಲ. ಹಿಂದು-ಮುಸ್ಲಿಮ್ ಸಮುದಾಯಗಳ ನಡುವೆ ಮೊದಲೆ ಇದ್ದ ಸಾಮಾಜಿಕ ಅಂತರ ಆ ವೇಳೆಗಾಗಲೆ ಇನ್ನೊಂದು ಆಯಾಮವನ್ನು ಪಡೆದುಕೊಳ್ಳ



ಲಾರಂಭಿಸಿತು. ವೃತ್ತಿ ಹಾಗೂ ವಸತಿಗಳ ವಿಷಯದಲ್ಲಿ ಭೇದಭಾವಕ್ಕೀಡಾಗಿದ್ದ ಮುಸ್ಲಿಮ್ ನಿರುದ್ಯೋಗಿಗಳಲ್ಲಿ ಹಲವು ಯುವಕರು ಈಗ, ಜಗತ್ತಿನ ಯಾವುದೆ ಕೊಳೆಗೇರಿಗಳ ಯುವಕರಂತೆ, ಕಳ್ಳಭಟ್ಟಿ ತಯಾರಿಕೆ, ಮಾದಕದ್ರವ್ಯ ಮಾರಾಟ, ಹಫ್ತಾ ವಸೂಲಿ ಹಾಗೂ ಚಿಲ್ಲರೆ ಕಳ್ಳತನ, ಸುಲಿಗೆಗಳಂತಹ ಚಟುವಟಿಕೆಗಳಲ್ಲಿ ವಿಶೇಷವಾಗಿ ತೊಡಗಿಕೊಂಡರು. ಇಂಥವರು ಸಹಜವಾಗಿಯೆ ಬೀದಿಕಾಳಗಗಳನ್ನು ಸ್ವಾಗತಿಸು ವಂಥವರಾಗಿದ್ದರು. ಈ ಮಧ್ಯೆ ಅಹಮದಾಬಾದಿನ ಪ್ರಖ್ಯಾತ ಜವಳಿ ಉದ್ದಿಮೆ ಕುಸಿದುಬಿದ್ದದ್ದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು. ಅದೇ ವೇಳೆಗೆ ಬದಲಾಗುತ್ತಿದ್ದ ನಗರದ ರಾಜಕೀಯ ಸಂಸ್ಕೃತಿ ಕೂಡ ಆ ಔದ್ಯಮಿಕ ಕುಸಿತದಿಂದ ಬೇರಾರಿಗಿಂತಲೂ ಮುಸ್ಲಿಮರೆ ಹೆಚ್ಚು ಸಂಕಷ್ಟಕ್ಕೊಳಗಾಗುವಂತಹ ಸನ್ನಿವೇಶಕ್ಕೆ ಕಾರಣವಾಯಿತು.

(ಇತ್ತೀಚಿನ ಗಲಭೆಗಳಿಗೆ ಕಾರಣವಾದ ಗೋಧ್ರಾ ದುರ್ಘಟನೆ ಭಾಗಶಃ ಮೇಲೆ ವಿವರಿಸಿದ ಪ್ರಕ್ರಿಯೆಯದೆ ಒಂದು ಅಂಗವಾಗಿದೆ. ಅದು, ಸಂಘ ಪರಿವಾರದವರು ವಾದಿಸುವಂತೆ, ಐಎಸ್‌ಐ ನ ಸಂಚೆಂದೇನೂ ಅನಿಸುವುದಿಲ್ಲ. ಹಾಗೆಯೆ, ರಾಜಕೀಯ ಸೂಕ್ತತೆಯನ್ನೆ ನೆಚ್ಚಿಕೊಳ್ಳುವ ಸೆಕ್ಯುಲರ್ ವಾದಿಗಳು ಕೆಲವರು ಹೇಳುತ್ತಿರುವಂತೆ ಅದು ಕರಸೇವಕರ ಅವಹೇಳನಕ್ಕೆ ಪ್ರತಿಯಾಗಿ ಮುಸ್ಲಿಮರು ಕೈಗೊಂಡ ಸೇಡಿನ ಕ್ರಿಯೆಯೆಂದೂ ಅನಿಸುವುದಿಲ್ಲ. ಇನ್ನು ಕೆಲವರು ಗೋಧ್ರಾದಲ್ಲಿ ನಡೆದದ್ದು ಅಷ್ಟೆಲ್ಲ ಮುಖ್ಯವಾದ ಘಟನೆಯೆ ಅಲ್ಲವೆಂದೂ ಬಾಲಿಶವಾಗಿ ವಾದಿಸುತ್ತಿದ್ದಾರೆ; ಈ ವಾದದ ಬಗ್ಗೆ ಸದ್ಯಕ್ಕೆ ನಾನು ಏನನ್ನೂ ಹೇಳಬಯಸುವುದಿಲ್ಲ. ಆದರೆ ಒಂದಂತೂ ದಿಟ: ಗೋಧ್ರಾ ಹತ್ಯಾಕಾಂಡ ಈಚಿನ ಬಹಳಷ್ಟು ಕೋಮುಗಲಭೆಗಳ ಮೂಲ ಸ್ವರೂಪದ ಒಂದು ಸೂಚಿಯೆಂಬಂತಿದೆ – ಮೊದಲು ಯಾರೊ ಒಬ್ಬರು ಇನ್ನೊಬ್ಬರನ್ನು ಉದ್ದೇಶಪೂರ್ವಕವಾಗಿ ಕೆಣಕುತ್ತಾರೆ, ಅದನ್ನು ವಿರೋಧಿಸಿ ಏಕಕೋಮುವಸತಿ ಪ್ರದೇಶಗಳು ಹಾಗೂ ಕೊಳೆಗೇರಿಗಳ ಹತಾಶ ಮತಿಭ್ರಷ್ಟ ಯುವಕರು ಪ್ರತಿದಾಳಿ ನಡೆಸುತ್ತಾರೆ, ಇದನ್ನೆ ಕಾಯುತ್ತಿದ್ದಂತೆ ಇನ್ನೊಂದು ಕಡೆಯವರು ವ್ಯವಸ್ಥಿತವಾದ ದೊಡ್ಡ ಪ್ರಮಾಣದ ದೊಂಬಿಗಳನ್ನು ಆರಂಭಿಸುತ್ತಾರೆ. ಹಿಂಸೆಯ ಸರಣಿ ಹೀಗೆಯೆ ಮುಂದುವರಿಯುತ್ತದೆ.)

ಗುಜರಾತಿನಲ್ಲಿ ೧೯೬೯ರ ಕೋಮುಗಲಭೆ ಬಿತ್ತಿದ ವಿಷಬೀಜ ಉದ್ದಕ್ಕೂ ರಕ್ಕಸ ಫಲಗಳನ್ನು ನೀಡುತ್ತ ಬಂದಿದೆ. ಅದು ಪ್ರತಿ ವರ್ಷ ನೀಡುವ ಹೊಸ ಫಸಲಿನಲ್ಲಿ ಭೀಕರ ಕೋಮು ಘರ್ಷಣೆಗಳು ಮತ್ತು ದೊಂಬಿ ಹಿಂಸೆಗಳು ಸೇರಿರಲೇಬೇಕು. ಅದರ ಪೂರ್ಣಾಕಾರದ ಫಲವೊಂದು ಕಂಡುಬಂದದ್ದು ರಾಮಜನ್ಮಭೂಮಿ ಚಳವಳಿಯ

ದಿನಗಳಲ್ಲಿ. ಆದರ ಮಹಾಸಾರಥಿ ಲಾಲ್‌ಕೃಷ್ಣ ಆದ್ವಾನಿ ಗುಜರಾತಿನಲ್ಲಿ ಇಟ್ಟ ಪ್ರತಿ ಹೆಜ್ಜೆಯ ಹಿಂದೆಹಿಂದೆಯೆ ಹಿಂಸಾಸರಣಿಯೊಂದು ರೂಪುಗೊಂಡಿತು. ಆ ಮೊದಲಿನ ಗಲಭೆಗಳಲ್ಲಿ ಪುರುಷರಷ್ಟೆ ಭಾಗಿಗಳೂ ಬಲಿಗಳೂ ಆಗಿದ್ದರೆ, ಈ ಹಿಂಸಾಕಾಂಡದಲ್ಲಿ ಮೊತ್ತಮೊದಲಬಾರಿಗೆ ಮಹಿಳೆಯರು ಹಾಗೂ ಮಕ್ಕಳನ್ನು ಪೂರ್ವೋದ್ದೇಶಿತ ಹಾಗೂ 'ನ್ಯಾಯಬದ್ಧ' ಗುರಿಗಳಾಗಿ ಬಳಸಿಕೊಳ್ಳಲಾಯಿತು. ಇಲ್ಲಿಂದ ಮುಂದೆ ಗಲಭೆಗಳು ಹೆಚ್ಚು ಹೆಚ್ಚು ಬರ್ಬರವಾಗತೊಡಗಿದವು.

••• ••• •••

ಗುಜರಾತ್ ಕಳೆದ ಒಂದು ದಶಕದಲ್ಲಿ ಈ ಪರಂಪರೆಯನ್ನು ಪರಿಪಾಲಿಸಿಕೊಂಡು ಬಂದಿದೆ. ಪ್ರಸಕ್ತ ಗಲಭೆಗಳಲ್ಲಿ ಹೆಂಗಸರು ಹಾಗೂ ಮಕ್ಕಳ ಮೇಲೆ ದಾಳಿ ನಡೆಸಲಾಗಿದೆ ಮಾತ್ರವಲ್ಲ ಬಹಳಷ್ಟು ಕಡೆ ಅವರನ್ನು ಕಲ್ಪನೆಗೂ ನಿಲುಕದಂತಹ ನಿರ್ದಯ ಹಿಂಸಾಸುಖಿ ರೀತಿಯಲ್ಲಿ ಕೊಲ್ಲಲಾಗಿದೆ. ಗಲಭೆಗಳನ್ನು ಪ್ರಚೋದಿಸಿದ ಗೋಧ್ರಾ ಹತ್ಯಾಕಾಂಡದಲ್ಲೂ ಸಹ ಬಲಿಯಾದವರಲ್ಲಿ ಹೆಂಗಸರು ಮತ್ತು ಮಕ್ಕಳೆ ಹೆಚ್ಚಾಗಿದ್ದರು.

ಈಚಿನ ಗಲಭೆಗಳನ್ನು ಪ್ರತ್ಯಕ್ಷ ಕಂಡವರಲ್ಲಿ ಐಎಎಸ್ ಅಧಿಕಾರಿ ಹರ್ಷ ಮಂದರ್ ಒಬ್ಬರು; ಆ ಘಟನೆಗಳ ಕುರಿತು ಅವರು ಬರೆದ ವರದಿಯೊಂದರ ಕೆಲವು ಭಾಗಗಳು ಹೀಗೆ ಹೇಳುತ್ತವೆ:

'ಕಳೆದ ಹತ್ತು ದಿನಗಳ ಕಾಲ ನರಮೇಧ ಹಾಗೂ ಭೀತಿಗಳಿಂದ ಕಲಕಿಹೋದ ಗುಜರಾತನ್ನು ಕಂಡು ನನ್ನ ಮನ ಭೀಭತ್ಸಭಾವದಲ್ಲಿ ಅದ್ದಿಹೋಗಿದೆ... ಅಹಮದಾಬಾದಿನಲ್ಲಿ ಸುಮಾರು ೫೩,೦೦೦ ಗಂಡಸರು, ಹೆಂಗಸರು ಮತ್ತು ಮಕ್ಕಳು ಇಪ್ಪತ್ತೊಂಬತ್ತು ತಾತ್ಕಾಲಿಕ ಪರಿಹಾರ ಕೇಂದ್ರಗಳಲ್ಲಿ ಮೈಮುದುಡಿ ಜೀವ ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದಾರೆ. ಅಪರಿಚಿತರ ಎದುರು ಅವರು ತಮ್ಮ ನೋವನ್ನು ಬಹಿರಂಗವಾಗಿ ಪ್ರಕಟಿಸುವುದಿಲ್ಲ. ಆದರೆ ನಾವು ಅವರೊಡನೆ ಕುಳಿತು ಒಂದೆರಡು ಮಾತನಾಡಿದ ಮೇಲೆ ಅವರು ಬಾಯಿ ತೆರೆಯುತ್ತಾರೆ, ತಮ್ಮ ದುಃಖ ತೋಡಿಕೊಳ್ಳುತ್ತಾರೆ. ಅವರ ಆ ಮಾತುಗಳು ನಾರುವ ಗಾಯಗಳಿಂದ ಸೋರುವ ಕೀವಿನ ರಾಶಿಯಂತೆ ಭಾಸವಾಗುತ್ತವೆ. ಅವರು ವಿವರಿಸುವ ಹಿಂಸಾಕೃತ್ಯಗಳು ಎಷ್ಟು ಭೀಕರವಾದುವೆಂದರೆ ಅವುಗಳನ್ನು ಇಲ್ಲಿ ನಮೂದಿಸುವಲ್ಲಿ ನನ್ನ ಲೇಖನಿ ನಿತ್ರಾಣಗೊಂಡು ನಡುಗುತ್ತದೆ... ಶಸ್ತ್ರಸಜ್ಜಿತ ಸುಸಂಘಟಿತ ಯುವ ಪುಂಡರ ಗುಂಪುಗಳು ಇಲ್ಲಿ ಅಸಹಾಯಕ ಹೆಂಗಸರು ಹಾಗೂ ಮಕ್ಕಳ ಮೇಲೆ ನಿರ್ದಯವಾಗಿ ಅತ್ಯಾಚಾರಗಳನ್ನು ನಡೆಸಿವೆ. ಕಳೆದ ಒಂದು ಶತಮಾನದಲ್ಲಿ ನಮ್ಮ ದೇಶ ಅನೇಕ ಕಳಂಕಪ್ರಾಯ ಕೋಮುಗಲಭೆಗಳನ್ನು ಕಂಡಿದೆ.



ಆದರೆ ಈ ಗಲಭೆಗಳ ಅನಾಗರಿಕತೆ ಇನ್ನೆಲ್ಲವುಗಳನ್ನು ಅಣಕಿಸುವಂತಿದೆ....

ಒಂದು ಕಡೆ, ಗಲಭೆಕೋರರ ಕೈಗೆ ಸಿಕ್ಕಿದ ಎಂಟು ತಿಂಗಳ ಗರ್ಭಿಣಿಯೊಬ್ಬಳು ತನ್ನನ್ನು ಉಳಿಸುವಂತೆ ಅವರನ್ನು ಅಂಗಲಾಚಿದಳು. ಅವರೊ, ಆಕೆಯ ಹೊಟ್ಟೆಯನ್ನು ಬಗೆದು, ಭ್ರೂಣವನ್ನು ಹೊರಗೆಳೆದು ಆಕೆಯ ಎದುರೆ ಅದನ್ನು ಕೊಚ್ಚಿಹಾಕಿದರು. ಇನ್ನೊಂದು ಕಡೆ, ಹತ್ತೊಂಬತ್ತು ಸದಸ್ಯರ ತುಂಬು ಕುಟುಂಬವೊಂದನ್ನು ಸುತ್ತುವರೆದ ದುಷ್ಕರ್ಮಿಗಳು ಅವರ ಮನೆಯ ತುಂಬ ನೀರು ನುಗ್ಗಿಸಿದರು; ನಂತರ ನೀರಿಗೆ ಗರಿಷ್ಠ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಹರಿಸಿ ಅವರಿಗೆ ಮರಣಾಘಾತ ನೀಡಿದರು. ಮತ್ತೊಂದೆಡೆ, ಜುಹಾಪುರ ನಿರಾಶ್ರಿತರ ಕೇಂದ್ರದಲ್ಲಿಯ ಆರು ವರ್ಷ ವಯಸ್ಸಿನ ಹುಡುಗನೊಬ್ಬ ಹೇಳಿಕೊಂಡಂತೆ, ಪುಂಡರು ಆತನ ತಾಯಿ ಹಾಗೂ ಆರು ಜನ ಸಹೋದರ-ಸಹೋದರಿಯರನ್ನು ಆತನ ಕಣ್ಣೆದುರೆ ಜಜ್ಜಿ ಕೊಂದರು; ತಾಳಲಾಗದ ಆಘಾತದಿಂದ ಮೂರ್ಛೆ ಬಿದ್ದ ಅವನನ್ನು ಆ ಪಾತಕಿಗಳು ಸತ್ತನೆಂದೆ ಭ್ರಮಿಸಿದ್ದರಿಂದಷ್ಟೆ ಆತ ಉಳಿದುಕೊಂಡ. ಇನ್ನೊಂದು ಘಟನೆಯಲ್ಲಿ, ಅಹಮದಾಬಾದಿನ ಅತ್ಯಂತ ಗಲಭೆ ಪೀಡಿತ ವಸತಿಪ್ರದೇಶಗಳಲ್ಲೊಂದಾದ ನರೋದಾ-ಪತಿಯಾದಿಂದ ಪಾರಾಗಿ ತೆರಳುತ್ತಿದ್ದ ಕುಟುಂಬವೊಂದಕ್ಕೆ ಪೋಲಿಸ್ ಕಾನ್‌ಸ್ಟೇಬಲ್ಲೊರ್ವ 'ಸುರಕ್ಷಿತ ದಾರಿ'ಯನ್ನು ತೋರಿಸಿಕೊಟ್ಟ; ಅವರು ಅತ್ತ ನಡೆದರೆ ಅಲ್ಲಿ ಕಂಡದ್ದು ರಕ್ಷಣೆಯ ಬದಲು ಪುಂಡರ ಗುಂಪೊಂದಾಗಿತ್ತು; ಕುಟುಂಬದ ಹೆಂಗಸೊಬ್ಬಳು ಹಾಗೂ ಆಕೆಯ ಮೂರು ತಿಂಗಳ ಹಸುಗೂಸನ್ನು ಎಳೆದು ಬೇರ್ಪಡಿಸಿದ ಆ ಗುಂಪು ಇಬ್ಬರ ಮೇಲೂ ಸೀಮೆಎಣ್ಣೆ ಸುರಿದು ಅವರನ್ನು ಸುಟ್ಟುಹಾಕಿತು.

ಈ ಮೊದಲೆ ಲಿಂಗಾಧಾರಿತ ಶೋಷಣೆಗೆ ತುತ್ತಾಗಿರುವ ಸ್ತ್ರೀಯರನ್ನು ಕೋಮುವಾದಿ ಹಿಂಸೆಯ ಗುರಿಗಳನ್ನಾಗಿ ಇಷ್ಟು ವ್ಯಾಪಕವಾಗಿಯೂ ಹೃದಯ ವೇಧಕವಾಗಿಯೂ ಬಳಸಿಕೊಂಡ ಗಲಭೆಗಳ ಉದಾಹರಣೆ ಇನ್ನೊಂದಿಲ್ಲ. ಎಳೆಯ ಹುಡುಗಿಯರನ್ನು, ಬೆಳೆದ ಹೆಂಗಸರನ್ನು, ಎಷ್ಟೊ ಕಡೆ ಅವರ ಕುಟುಂಬದ ಸಹಸದಸ್ಯರ ಸಮ್ಮುಖದಲ್ಲಿಯೆ ಸಾಮೂಹಿಕ ಅತ್ಯಾಚಾರಕ್ಕೀಡುಮಾಡಲಾಯಿತು; ನಂತರ ಅವರನ್ನು ಜೀವಂತ ದಹಿಸಿಯೊ, ಬಡಿಗೆ-ಸುತ್ತಿಗೆಗಳಿಂದ ಜಪ್ಪಿಯೊ, ಅಥವಾ ಒಂದು ಪ್ರಕರಣದಲ್ಲಿಯಂತೆ ಸ್ಕ್ರೂಡ್ರೈವರ್‌ನಿಂದ ಇರಿದು ತಿವಿದು ಕೊನೆಗಾಣಿಸಲಾಯಿತು.'

ಗುಜರಾತು ಮೋಹನದಾಸ ಕರಮಚಂದ ಗಾಂಧಿಯನ್ನು ಬಹಳ ಹಿಂದೆಯೆ ತೊರೆದಾಗಿದೆ; ಆ ರಾಜ್ಯದ ರಾಜಕೀಯ ಆತ್ಮದಲ್ಲಿ ಗಾಂಧಿಹಂತಕರ ಪ್ರೇತ ಹೊಕ್ಕಾಗಿದೆ. ಈ ಬಾರಿ ಆ ದುರುಳರು ಗಾಂಧಿಯನ್ನು ಮತ್ತೊಮ್ಮೆ ಹತ್ಯೆಗೈದಿರುವುದಷ್ಟೆ ಅಲ್ಲ, ರಕ್ಕಸಖುಷಿಯ ಕೇಕೆ ಹಾಕುತ್ತ ಕೊಳಕು ನುಡಿಗಳನ್ನು ಕಿರುಲುತ್ತ ಆತನ ಶವದ

ಮೇಲೆ ಕುಣಿದಾಡಿದ್ದಾರೆ. ಇದಕ್ಕೆ ಎದುರಾಗಿ, ರಾಜ್ಯದ ನಾಝಿವಾದಿ ಸರ್ಕಾರದ ವಿರುದ್ಧ ದಿಟ್ಟ ಸಾರ್ವಜನಿಕ ನಿಲುವೊಂದನ್ನು ತಳೆಯುವುದು ಬಿಟ್ಟು ಗಾಂಧಿವಾದಿಗಳು ನಿಷ್ಪ್ರಯೋಜಕ ಶಾಂತಿ ಮೆರವಣಿಗೆಗಳನ್ನು ಏರ್ಪಡಿಸಿದರು. ಇಂಥ ಸನ್ನಿವೇಶದಲ್ಲಿ, ನಗರದ ಸರ್ವಪ್ರಥಮ ಆಶ್ರಯಧಾಮವಾಗಬೇಕಿದ್ದ ಸಬರಮತಿ ಆಶ್ರಮ ತನ್ನ ಆಸ್ತಿಪಾಸ್ತಿ ರಕ್ಷಣೆಗೆಂದು ಬಾಗಿಲು ಹಾಕಿಕೊಂಡು ತಣ್ಣಗೆ ಕುಳಿತದ್ದು ಅಚ್ಚರಿಯ ಸಂಗತಿಯೇನಲ್ಲ.

••• ••• •••

ಗುಜರಾತಿನ ಮಧ್ಯಮ ವರ್ಗ ಮುಟ್ಟಿರುವ ಅಧೋಗತಿಗೆ ಆ ರಾಜ್ಯದ ಪ್ರಸಕ್ತ ಮುಖ್ಯಮಂತ್ರಿ ನರೇಂದ್ರ ಮೋದಿ ಅತಿ ನಿಚ್ಚಳ ನಿದರ್ಶನವಾಗಿದ್ದಾರೆ. ಅವರು ನಿರ್ಲಜ್ಜವಾಗಿ ಗಲಭೆಗಳನ್ನು ಯೋಜಿಸಿದರು ಮಾತ್ರವಲ್ಲ ಅವುಗಳನ್ನು ಅತ್ಯಂತ ಅನಾಗರಿಕವಾಗಿ ಸಮರ್ಥಿಸಿದರು ಕೂಡ. ಹತ್ತು ವರ್ಷಗಳಿಗಿಂತಲೂ ಹಿಂದೆ ನಾನು ಹಾಗೂ ನನ್ನ ಸಹವರ್ತಿಯೊಬ್ಬ ಸೇರಿ ಮೋದಿಯವರನ್ನು ಸಂದರ್ಶಿಸಿದ್ದೆವು. ಆಗ ಅವರು ಇನ್ನೂ ಅತಿಸಾಮಾನ್ಯ ಮಟ್ಟದ ಆರ್‌ಎಸ್‌ಎಸ್ ಪ್ರಚಾರಕನಾಗಿದ್ದು, ಬಿಜೆಪಿಯಲ್ಲೊಂದಿಷ್ಟು ಪ್ರಾಮುಖ್ಯ ಗಳಿಸಲು ಹೆಣಗಾಡುತ್ತಿದ್ದರು. ಆ ದೀರ್ಘ ಸಂದರ್ಶನ ಬೇರೆಬೇರೆ ಪ್ರಶ್ನೆಗಳನ್ನೂ ಘಟ್ಟಗಳನ್ನೂ ದಾಟಿ ಬೆಳೆಯುತ್ತಿದ್ದಂತೆ ನನಗೆ ಒಂದು ಸಂಗತಿ ಸಂದೇಹಾತೀತವಾಗಿ ಕಾಣತೊಡಗಿತ್ತು: ಮೋದಿಯವರದ್ದು ಮನೋವಿಜ್ಞಾನ ಯಾವುದನ್ನು 'ಫ್ಯಾಸಿಸ್ಟ್'ಎಂದು ಪರಿಗಣಿಸುತ್ತದೆಯೊ ಅಂಥ ವ್ಯಕ್ತಿತ್ವವಾಗಿತ್ತು. 'ಫ್ಯಾಸಿಸ್ಟ್' ಪದವನ್ನು ನಾನು ಬೈಗುಳದ ಇಲ್ಲ ಟೀಕೆಯ ಮಾತಾಗಿ ಬಳಸುತ್ತಿದ್ದೇನೆಂದು ಯಾರೂ ತಿಳಿಯಬಾರದು. ನಾನು ಮನಃಶಾಸ್ತ್ರದ ವಿದ್ಯಾರ್ಥಿ; ನನಗೆ 'ಫ್ಯಾಸಿಸ್ಟ್' ಎನ್ನುವುದು, ಇತರ ಪರಿಭಾಷಾತ್ಮಕ ಪದಗಳಂತೆಯೆ, ನಿರ್ದಿಷ್ಟ ವ್ಯಕ್ತಿತ್ವ ವರ್ಗವೊಂದನ್ನು ನಿರ್ದೇಶಿಸುವ ಪದ, ಮನೋರೋಗಿಗಳ ಮಾದರಿಯೊಂದನ್ನು ಸೂಚಿಸುವ ಶಬ್ದ ಮಾತ್ರ. ಆ ಹಿಂಸಾರಾಧಕ ವ್ಯಕ್ತಿತ್ವ ಮಾದರಿಯ ಎಲ್ಲ ಗುಣ-ಲಕ್ಷಣಗಳೂ ಮಾನ್ಯ ಮೋದಿಯವರಲ್ಲಿ ಹೇರಳವಾಗಿ ತುಂಬಿಕೊಂಡಿದ್ದವು. ಅವರ ಆ ಸಂದರ್ಶನ ನನ್ನನ್ನು ಆಮೂಲಾಗ್ರವಾಗಿ ಅಲ್ಲಾಡಿಸಿಬಿಟ್ಟಿತು. ಭೇಟಿ ಪೂರೈಸಿ ಹೊರಬರುತ್ತಿದ್ದಂತೆ ನನ್ನ ಸಹವರ್ತಿಯಲ್ಲಿ ನನಗಾದ ಭಯಮಿಶ್ರಿತ ಆಘಾತದ ಅನುಭವವನ್ನು ತೋಡಿಕೊಂಡಿದ್ದೆ; ನಾವು ಮಾತನಾಡಿಸಿದ ವ್ಯಕ್ತಿ ಮನೋವಿಜ್ಞಾನ ನಿರ್ವಚಿಸುವಂತಹ ಫ್ಯಾಸಿಸ್ಟ್ ವ್ಯಕ್ತಿತ್ವದ ಸರ್ವವಿವರಪೂರ್ಣ ಪ್ರತ್ಯಕ್ಷ ನಿದರ್ಶನದಂತೆಯೂ ಮುಂದಿನ ದಿನಗಳಲ್ಲಿ ಕೊಲೆಗಡುಕನಾಗಿ, ಅದರಲ್ಲೂ ಸಾಮೂಹಿಕ



ಕೊಲೆಗಡುಕನಾಗಿ ಬೆಳೆಯುವಂತೆಯೂ ಕಂಡನೆಂದು ಹೇಳಿಕೊಂಡಿದ್ದೆ.

ಇಂತಹ ವ್ಯಕ್ತಿಯೊಬ್ಬ ಗುಜರಾತ್ ರಾಜ್ಯದ ಮುಖ್ಯಮಂತ್ರಿಯ ಪಟ್ಟಕ್ಕೇರಿರುವುದು ಆತನ ಕಥೆಯನ್ನಷ್ಟೆ ಅಲ್ಲ, ನಮ್ಮ ದೇಶದ ಪ್ರಜಾಪ್ರಭುತ್ವ ಹಾಗೂ ರಾಜಕಾರಣ ಕಳೆದ ಐವತ್ತು ವರ್ಷಗಳಲ್ಲಿ ಅನುಸರಿಸಿಕೊಂಡು ಬಂದ ಹಾದಿಯ ಕಥೆಯನ್ನೂ ಹೇಳುತ್ತದೆ. ಇಷ್ಟಾದ ಮೇಲೆ, ದೇಶದ ಭವಿಷ್ಯತ್ತಿನ ಬಗ್ಗೆ, ನನಗಂತೂ, ಭೀತಿ ಆತಂಕಗಳ ಹೊರತು ಇನ್ಯಾವ ಭಾವನೆಗಳೂ ಮೂಡುತ್ತಿಲ್ಲ. ಹಿಂದೊಮ್ಮೆ ಭೌಗೋಳಿಕವಾಗಿ ಇಬ್ಭಾಗಗೊಂಡು, ಈಗ ಸಂಘ ಪರಿವಾರದ ದುಸ್ಸಾಹಸಗಳಿಂದ ಮತ್ತೊಮ್ಮೆ, ಈ ಬಾರಿ ಮನಸುಗಳ ಸ್ತರದಲ್ಲಿ, ಛಿದ್ರಗೊಂಡ ಭಾರತ ಬರಲಿರುವ ಸವಾಲುಗಳನ್ನು ಹೇಗೆ ಎದುರಿಸುವುದೊ ಗೊತ್ತಿಲ್ಲ.

(ಸಂಗ್ರಹ - ಅನುವಾದಃ ಜಶವಂತ ಜಾಧವ)

ಕಳೆದ ತಿಂಗಳುಗಳಲ್ಲಿ ನೀನಾಸಮ್ ಅನೇಕ ಹಿತೈಷಿ ಆಪ್ತರನ್ನು ಕಳೆದುಕೊಂಡಿದೆ.
ಸಮುದಾಯದ ಹಿರಿಯ, ರಂಗಾಸಕ್ತ
**ಕಾಶಿ ಮಂಜ ಭಟ್ಟರು** (ಭೀಮನಕೋಣೆ)
ಸುಪ್ರಸಿದ್ಧ ಸಂಗೀತವಿದ್ವಾಂಸ, ಕನ್ನಡ ಗೀತ ರಂಗಸಂಗೀತ ಸೃಜನಶೀಲ
**ಎ.ವಿ.ಕೃಷ್ಣಮಾಚಾರ್**(ಬೆಂಗಳೂರು)
ಕರ್ನಾಟಕ ನೃತ್ಯಪರಂಪರೆಯ ಮಹಾನ್ ಕಲಾವಿದೆ
**ವೆಂಕಟಲಕ್ಷ್ಮಮ್ಮ** (ಮೈಸೂರು)
ಕನ್ನಡ ನಾಟಕರಂಗದ ಸವ್ಯಸಾಚಿ, ಹಿರಿಯ
**ಹೆಚ್.ಕೆ. ಯೋಗಾನರಸಿಂಹ** (ಮೈಸೂರು)
ಮತ್ತು ಅಕಾಲಮರಣದಿಂದ ಆಘಾತಗೊಳಿಸಿದ
ನಾಟಕರಂಗ ಯಕ್ಷರಂಗಗಳೆರಡರಲ್ಲೂ ಗಣ್ಯರಾದ ಉತ್ಸಾಹಿ ಜನಪ್ರಿಯ ಅಧ್ಯಾಪಕ
**ಡಿ.ಜಿ. ಹೆಗಡೆ** (ಪೂರ್ಣಪ್ರಜ್ಞ- ಉಡುಪಿ)
ನೀನಾಸಮ್‌ನ ವಿದ್ಯಾರ್ಥಿಮಿತ್ರ, ರಂಗಾಯಣದ ಕಲಾವಿದ
**ಬಸವರಾಜ ಕೊಡಗೆ** (ಮೈಸೂರು)
ಅಧ್ಯಾಪಕಿ, ಲೇಖಕಿ, ಅನುವಾದಕಿ, ರಂಗಾಸಕ್ತೆ
**ಕೆ.ಎನ್.ವಿಜಯಲಕ್ಷ್ಮಿ** (ಬೆಂಗಳೂರು)
ಈ ಅನೇಕರ ಮರಣಕ್ಕಾಗಿ ನೀನಾಸಮ್ ದುಃಖಾಂಜಲಿ ಸಲ್ಲಿಸುತ್ತದೆ.

# ಆದಿವಾಸಿ ಆಖ್ಯಾನ

## ಗಣೇಶ ದೇವಿ

ಮೊನ್ನೆ ಫೆಬ್ರುವರಿ ೨೭ ಮತ್ತು ಮಾರ್ಚ್ ೪ರ ನಡುವಣ ಅವಧಿಯಲ್ಲಿ ಗುಜರಾತ್ ಹೊತ್ತಿ ಉರಿಯುತ್ತಿರುವಾಗ ಗುಜರಾತಿನ ಮೂಡಣ ಸರಹದ್ದಿನ ಬುಡಕಟ್ಟು ಜನರ ವಾಸಸ್ಥಾನ ಶಾಂತಿಯುತವಾಗಿತ್ತು. ಗೋಧ್ರಾ ಮುಖ್ಯ ಪಟ್ಟಣವಾಗಿರುವ ಪಂಚಮಹಲ್‌ನ ಎರಡು ಜಿಲ್ಲೆಗಳು ಮಾತ್ರ ಇದಕ್ಕೆ ಹೊರತಾಗಿತ್ತು. ಉಳಿದೆಲ್ಲ ಬುಡಕಟ್ಟು ಪ್ರದೇಶಗಳಲ್ಲಿ ಬುಡಕಟ್ಟು ಜನರು, ಹಿಂದುಗಳು ಮತ್ತು ಮುಸಲ್ಮಾನರ ಶಾಂತಿಯುತ ಸಹಬಾಳ್ವೆ ಮುಂದುವರಿದಿತ್ತು. ಆದರೆ ಬುಡಕಟ್ಟು ಕಾರ್ಮಿಕರ ದೊಡ್ಡ ದಂಡು ಕರ್ಫ್ಯೂಗೊಳಗಾದ ಪಟ್ಟಣದಿಂದ ತಮ್ಮ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿ ಬರುತ್ತಿರುವ ದೃಶ್ಯ ಮನಕಲಕುತ್ತಿತ್ತು. ಕೆಲವು ಸಂದರ್ಭಗಳಲ್ಲಿ ನೂರು ಕಿ.ಮೀ. ದೂರವನ್ನು ಇವರು ಕ್ರಮಿಸಿದ್ದುಂಟು. ಇವರ ನಡಿಗೆ ನಿಶ್ಯಬ್ದದಿಂದ ಕೂಡಿತ್ತು. ಅವರದಾದ ಎಲ್ಲಾ ವಸ್ತುಗಳೂ ತಲೆಯ ಮೇಲಿದ್ದವು, ಹೃದಯದಲ್ಲಿ ದುಃಖ ಮಡುಗಟ್ಟಿತ್ತು ಮತ್ತು ಬಲೆಯಲ್ಲಿ ಸಿಕ್ಕ ಪ್ರಾಣಿಯಂತೆ ಎಲ್ಲರೂ ಬೆದರಿದ್ದರು.

ಸುತ್ತಲಿನ ಅರವತ್ತು ಸಾವಿರ ಬುಡಕಟ್ಟು ಕಾರ್ಮಿಕರು ಪ್ರತಿವರ್ಷ ಆಕ್ಟೋಬರ್‌ನಿಂದ ಮಾರ್ಚ್ ಅವಧಿಗೆ ಉದ್ಯೋಗವನ್ನರಸಿ ಬರೋಡಾಕ್ಕೆ ವಲಸೆ ಹೋಗುವುದು ಸಾಮಾನ್ಯ. ಹಿಂಸಾಕೃತ್ಯ ಪ್ರಾರಂಭವಾದ ಮೂರನೆ ದಿನದಿಂದ ಇವರೆಲ್ಲ ತಮ್ಮ ಹಳ್ಳಿಗಳಿಗೆ ಮರಳಲು ಶುರುಮಾಡಿದರು. ಯಾವುದೇ ಸಂಚಾರ ವ್ಯವಸ್ಥೆ ಇವರಿಗೆ ಸಿಗಲಿಲ್ಲ. ಆದುದರಿಂದ ಧ್ವಂಸಗೊಂಡ ರಾಷ್ಟ್ರದಿಂದ ತಪ್ಪಿಸಿಕೊಳ್ಳುವ ನಿರಾಶ್ರಿತರಂತೆ ನಡೆದೆ ತಮ್ಮ ಹಳ್ಳಿಗಳಿಗೆ ತೆರಳಲು ತೀರ್ಮಾನಿಸಿದರು.

ಬುಡಕಟ್ಟು ಗ್ರಾಮಗಳಲ್ಲಿ ಅಗ್ನಿಗಾಹುತಿಯಾದ ಮೊದಲನೆ ಮುಸ್ಲಿಂ ಅಂಗಡಿ ತೇಜಗಢದ್ದು. ಉದ್ದೇಶಪೂರ್ವಕವಾದ ಈ ಕೃತ್ಯ ಮಾರ್ಚ್ ನಾಲ್ಕರ ಸಂಜೆ ನಡೆಯಿತು. ರಾತ್ರಿಯಲ್ಲಿ ಮತ್ತೆರಡು ಅಂಗಡಿಗಳಿಗೆ ಬೆಂಕಿ ಹಚ್ಚಲಾಯಿತು. ಗೋಧ್ರಾ ಘಟನೆಗೆ ತಡವಾದ ಈ ಬಗೆಯ ಉಗ್ರ ಪ್ರತಿಕ್ರಿಯೆಯನ್ನು ಬರೋಡ ಜಿಲ್ಲೆಯ ಗ್ರಾಮೀಣ ಪೋಲೀಸ್ ಠಾಣೆ ನಿರೀಕ್ಷಿಸಿರಲಿಲ್ಲ. ಮಂಗಳವಾರ ಹಿರಿಯ ಡಿಎಸ್‌ಪಿ ಕೇಶವ



ಕುಮಾರ (ಬುಡಕಟ್ಟು ಭಾಷೆಯಲ್ಲಿ ಐಪಿಸಿ ಪುಸ್ತಕ ಬರೆದವರು) ಶಾಂತಿ ಮರುಸ್ಥಾಪನೆಯ ತಮ್ಮ ಪ್ರಯತ್ನದಲ್ಲಿ ಸಹಕರಿಸಲು ಸೇರಿಕೊಳ್ಳಲು ನನ್ನನ್ನು ಕೇಳಿದರು. ನಾವು ತೇಜಗಢ ತಲುಪಿದಾಗ ಒಂದು ಬಟ್ಟೆ ಅಂಗಡಿಯನ್ನು ಲೂಟಿಮಾಡಿ ಬೆಂಕಿ ಹಚ್ಚಿದ ಗುಂಪನ್ನು ನೋಡಿದೆವು. ಡಿಎಸ್‌ಪಿ ತಕ್ಷಣ ಅಶ್ರುವಾಯು ಪ್ರಯೋಗಿಸಿ ಗುಂಪನ್ನು ಚದುರಿಸಿದರು. ಬಿಜೆಪಿ ಎಂ.ಪಿ ಮತ್ತು ಹಿಂದಿನ ಕಾಂಗ್ರೆಸ್ ಎಂ.ಪಿಯ ಜೊತೆ ಅಲ್ಲಿಂದ ಛೋಟಾ ಉದೇಪುರದತ್ತ ಮುಂದಿನ ಏರ್ಪಾಡು ಮಾಡಲು ತೆರಳಿದೆವು. ರಾತ್ರಿ ಪಹರೆಗಾಗಿ ಐದು ಲಾರಿ ಸೈನಿಕರ ನಿರೀಕ್ಷೆಯಲ್ಲಿ ಡಿಎಸ್‌ಪಿ ಇದ್ದರು.

ಆ ರಾತ್ರಿ ಸೈನಿಕ ಪಡೆ ತೇಜಗಢದಲ್ಲಿರಲಿಲ್ಲ. ಹಳ್ಳಿಯ ಅನೇಕ ಅಂಗಡಿಗಳು ಮತ್ತು ಮನೆಗಳು ಅಗ್ನಿಗಾಹುತಿಯಾದವು. ತೇಜಗಢದಲ್ಲಿ ಅತ್ಯಲ್ಪ ಅಂದರೆ ಶೇ. ೫ ಮುಸ್ಲಿಮರು, ಶೇ. ೭೫ ರಷ್ಟು ಬುಡಕಟ್ಟು ಜನಾಂಗ, ಶೇ. ೧೫ರಷ್ಟು ಹಿಂದುಗಳು ಇದ್ದಾರೆ. ಪ್ರಾರಂಭದಲ್ಲಿ ಅಂಗಡಿ ಮತ್ತು ಮನೆಗಳಿಗೆ ಅಗ್ನಿಸ್ಪರ್ಶ ಮಾಡಿದವರು ಚೆನ್ನಾಗಿ ಮದ್ಯಪಾನ ಮಾಡಿದ್ದರು, ಮತ್ತು ಪಕ್ಕದ ಹಳ್ಳಿಯಿಂದ ಬಂದಿದ್ದರು. ಪ್ರಾರಂಭದ ಈ ಆಕ್ರಮಣದ ನಂತರ ಇತರೆ ಗ್ರಾಮಸ್ಥರು ತಾವಾಗಿಯೆ ಯಾವ ಪ್ರಚೋದನೆಯೂ ಇಲ್ಲದೆ ಅವ್ಯಾಹತವಾದ ಹಿಂಸೆಯಲ್ಲಿ ಸೇರಿಕೊಂಡರು. ಲೂಟಿ ಮುಂದುವರಿಯಿತು.

ತೇಜಗಢದ ಘಟನಾವಳಿಗಳು ಗಲಭೆಯ ವಿಷಯದಲ್ಲಿ ಕ್ರಮಾನುಗತ ಬೆಳವಣಿಗೆಯನ್ನು ಸ್ಪಷ್ಟಪಡಿಸುತ್ತವೆ. ಪಟ್ಟಣಗಳಲ್ಲಿ, ಕಡೆಪಕ್ಷ ಪ್ರಾರಂಭದ ಮೂರು ದಿನಗಳಲ್ಲಿ, ಗಲಭೆ ವ್ಯವಸ್ಥಿತವಾದ ಸಂಶೋಧನಾತ್ಮಕ, ತಾಳಮೇಳಗಳೊಳಗೊಂಡ ಹೊಡೆತದ ಮುದ್ರೆಯಿಂದ ಕೂಡಿತ್ತು. ಅಲ್ಲಿನ ಆಕ್ರಮಣಗಲ್ಲಿ ಅತ್ಯಾಶ್ಚರ್ಯಕರವಾದ ಖಚಿತತೆ ಇತ್ತು. ಇದಕ್ಕೆ ವಿರುದ್ಧವಾಗಿ ಪಂಚಮಹಲ್, ಖೇಡ ಮತ್ತು ಬರೋಡ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಕುರುಡುತನದ ಕೋಪ ವ್ಯಕ್ತವಾಗುತ್ತಿತ್ತು. ತೇಜಗಢದ ಘಟನಾವಳಿಗಳು ಇವೆರಡಕ್ಕಿಂತ ಭಿನ್ನವಾಗಿದ್ದವು. ಇಲ್ಲಿನ ಹಿಂಸಾಚಾರ ಪ್ರಾರಂಭದ ನಿಷ್ಣಾತ ಯೋಜನೆಗಳಲ್ಲಿ ಸೇರಿದಂತೆ ಕಾಣುತ್ತಿರಲಿಲ್ಲ. ತೇಜಗಢದ ಘಟನೆಗಳ ಸುರುಳಿ ಗೋಧ್ರಾ ಹಿಂಸಾಚಾರಕ್ಕೆ ಆವೇಶಭರಿತ ಪ್ರತಿಕ್ರಿಯೆಯಾಗಿ ಸಹ ಗೋಚರಿಸುತ್ತಿರಲಿಲ್ಲ.

ಯಾವುದೇ ಬಗೆಯ ಭಯೋತ್ಪಾದನೆಯ ಸುಳಿವೂ ಇಲ್ಲದೆ ತೇಜಗಢದ ಮುಸ್ಲಿಂ ಸಮುದಾಯ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಬದುಕನ್ನು ಮುಂದುವರಿಸಿಕೊಂಡಿತ್ತು. ಆ ದಿನ ಬೇರೆ ಕೆಲವು ಹಳ್ಳಿಗಳಲ್ಲಿ ಸ್ಥಳೀಯರು ಮುಸ್ಲಿಮರಿಗೆ ಬೆದರಿಕೆ ಹಾಕಿದ ವರದಿ ಹಬ್ಬಿತು. ತೇಜಗಢದ ಮುಸ್ಲಿಮರು ಆ ಹಳ್ಳಿಗಳ ಮುಸ್ಲಿಮರ ರಕ್ಷಣೆಗಾಗಿ ಹೋದರು

ಎನ್ನುವ ಭಾವನೆ ಎಲ್ಲೆಡೆ ಸೃಷ್ಟಿಯಾಯಿತು. ಇದರಿಂದ ತೇಜಗಢದ ಮುಸ್ಲಿಮರು ಸ್ಥಳೀಯರ ಕೋಪಕ್ಕೆ ತುತ್ತಾದರು. ಫಲಿತಾಂಶವಾಗಿ ಮಾರ್ಚ್ ನಾಲ್ಕರ ಸಂಜೆ ತೇಜಗಢದ ಮುಸ್ಲಿಂ ಅಂಗಡಿಗೆ ಬೆಂಕಿ ಹಚ್ಚಲಾಯಿತು.

ಸರಪಂಚ ಕೃಷ್ಣಕಾಂತ ಶಾ ಗಲಭೆ ಹುಟ್ಟುಹಾಕುವವರನ್ನು ತಡೆಯುವ ಪ್ರಯತ್ನ ಮಾಡಿದ, ಆದರೆ ಗಲಭೆಕೋರರ ಒತ್ತಡ ಮತ್ತು ಬೆದರಿಕೆಯಿಂದ ಸುಮ್ಮನಾದ ಎಂದು ಹೇಳುತ್ತಾರೆ. ಅಲ್ಲದೆ ಗಲಭೆಕೋರರು ಹೊರಗಿನವರು. ಈ ಘಟನೆಯ ನಂತರ ತೇಜಗಢದಲ್ಲಿ ಯಾರೂ ಗಲಭೆಕೋರರ ಹೆಸರನ್ನು ಹೇಳಲು ತಯಾರಿಲ್ಲ. ಕೆಲವು ಪ್ರಶ್ನೆಗಳಿಗೆ ಉತ್ತರವಿಲ್ಲ. ಯಾಕೆ ತೇಜಗಢದ ಮುಸ್ಲಿಮರು ಬೇರೆ ಗ್ರಾಮಗಳಿಗೆ ತೆರಳಿದರು ಮತ್ತು ತೇಜಗಢದ ಅಂಗಡಿ, ಮನೆ, ವಾಹನಗಳನ್ನು ವ್ಯವಸ್ಥಿತವಾಗಿ, ನಿಷ್ಠೆಯಿಂದ, ಕಂತುಕಂತಾಗಿ ಸುಡುತ್ತಿದ್ದರೂ ಯಾಕೆ ಯಾರೊಬ್ಬರೂ ರಕ್ಷಣೆಗೆ ಬರಲಿಲ್ಲ ಎನ್ನುವುದನ್ನೂ ಹೇಳುವುದಿಲ್ಲ. ಅಷ್ಟೆಲ್ಲಾ ಸೀಮೆಎಣ್ಣೆ ಹೇಗೆ ದೊರೆಯಿತು ಮತ್ತು ಈ ಗುಂಪುಗಳ ಮುಂದಾಳತ್ವ ವಹಿಸಿದವರು ಯಾರು ಎನ್ನುವುದನ್ನೂ ಹೇಳುವುದಿಲ್ಲ. ಕೇವಲ ಮುಸ್ಲಿಂ ಸಮುದಾಯದ ಆಸ್ತಿ ಮಾತ್ರ ಯಾಕೆ ಬೆಂಕಿಗೆ ಆಹುತಿಯಾಯಿತು ಎನ್ನುವುದನ್ನೂ ಯಾರೂ ಹೇಳುವುದಿಲ್ಲ.

••• ••• •••

ತೇಜಗಢದ ಕಗ್ಗೊಲೆ ಸಾವಧಾನವಾಗಿ ನಡೆಯುತ್ತಿತ್ತು. ಪ್ರತಿದಿನ ಒಂದು ಅಥವಾ ಎರಡು ಅಂಗಡಿಗಳಿಗೆ ಬೆಂಕಿ ಹಚ್ಚಲಾಗುತ್ತಿತ್ತು. ಮೊದಲನೆ ಘಟನೆಯಲ್ಲಿಯೆ ಗುಂಪು ಹಿಂಸೆಯ ಕೇಂದ್ರವಾದ ಲಿಮಿಡಿ ಬಜಾರ್‌ನಿಂದ ಒಂದು ಅಥವ ಎರಡು ಕಿ.ಮಿ. ದೂರದ ಟಿಮ್ಲಾ, ಕೋರಜ್ ಮತ್ತು ಅಚಲಾ ಪಂಚಾಯ್ತಿ ವ್ಯಾಪ್ತಿಯಿಂದ ಬಂದಿತ್ತು. ಎರಡು ಮತ್ತು ಮೂರನೆ ಘಟನಾವಳಿಯಲ್ಲಿ ಮತ್ತೂ ದೂರ ಪ್ರದೇಶದ ಗುಂಪು ಸೇರ್ಪಡೆಯಾಯಿತು. ನೆರೆಯ ಗ್ರಾಮಗಳ ಬುಡಕಟ್ಟು ಜನ ಸಹ ಹಿಂಸಾಚಾರಕ್ಕೆ ತಮ್ಮ ಪಾಲಿನ ಕೊಡುಗೆಯನ್ನು ನೀಡಲು ಬಯಸಿದರು. ತೇಜಗಢದ ನಿವಾಸಿಗಳು ತಮ್ಮ ಮನೆಗಳ ಬಾಗಿಲನ್ನು ಭದ್ರವಾಗಿ ಹಾಕಿಕೊಂಡು ಸ್ವಯಂಘೋಷಿತ ಕರ್ಫ್ಯೂವನ್ನು ವಿಧಿಸಿಕೊಂಡರು. ಅಧಿಕೃತವಾಗಿ ಕರ್ಫ್ಯೂ ಹೇರಿದ್ದು ಕೇವಲ ಒಂದು ತಾಂತ್ರಿಕ ವಿಧಾನವಷ್ಟೆ.

ಗ್ರಾಮದ ಪಹರೆಗಾಗಿ ಒದಗಿಸಿದ ಪೋಲಿಸ್ ಬಲ ಬಹಳ ಕಡಿಮೆ ಪ್ರಮಾಣ ದಲ್ಲಿತ್ತು. ಎರಡು ಅಥವಾ ಮೂರು ಆಕ್ರಮಣವೆಸಗುವ ಗುಂಪುಗಳನ್ನು ಚದುರಿಸಿದ ನಂತರ ನಿಷ್ಕ್ರಿಯವಾಗುತ್ತಿತ್ತು. ಗ್ರಾಮಸ್ಥರು ಈಗಾಗಲೆ ಸೃಷ್ಟಿಸಿಕೊಂಡ ಜಡತ್ವದ



ಪಿತೂರಿಯ ಸಂಚಿಗೆ ಬಲಿಯಾದಂತೆ ಇದ್ದರು. ಇದರಿಂದ ತೇಜಗಢದ ದೌರ್ಜನ್ಯದ ಹನ್ನೆರಡನೆಯ ದಿನವೂ ಒಂದು ಮನೆ ಬೆಂಕಿಗಾಹುತಿಯಾಯಿತು. ಆ ಸಂದರ್ಭದಲ್ಲಿ ಗ್ರಾಮಸ್ಥರಾಗಲಿ ಅಥವಾ ಪೋಲೀಸರಾಗಲಿ ಮಧ್ಯಪ್ರವೇಶಿಸಲು ತಯಾರಿರಲಿಲ್ಲ. ಹದಿಮೂರು ಮತ್ತು ಹದಿನಾಲ್ಕನೆ ದಿನ ಸಹ ಒಂದೆರಡು ಮನೆಗಳಿಗೆ ಬೆಂಕಿ ಇಟ್ಟರು. ಈ ಶಾಸ್ತ್ರ ಮುಂದುವರಿಯಿತು. ಪಟ್ಟಣಗಳಲ್ಲಿನ ಹಿಂಸಾಚಾರಗಳಲ್ಲಿ ನಿಖರತೆ ಇದ್ದರೆ ಇತರೆ ಗ್ರಾಮೀಣ ಪ್ರದೇಶಗಳಲ್ಲಿ ಇದು ಕುರುಡುತನದಿಂದ ಕೂಡಿದ ಆವೇಶಭರಿತ ಪ್ರತಿಕ್ರಿಯೆಯಾಗಿತ್ತು. ಅಲ್ಲದೆ ತೇಜಗಢದ ಹಿಂಸಾಚಾರ ತನ್ನ ಶಾಸ್ತ್ರೀಯ ಗುಣದಿಂದ ಎದ್ದುಕಾಣುತ್ತಿತ್ತು. ಇದರ ದೀರ್ಘಾವಧಿ ಶೀತರಕ್ತ ಆಕ್ರಮಣವನ್ನು ಪ್ರತಿನಿಧಿಸುತ್ತಿತ್ತು. ಗುಜರಾತ್ ಹಿಂಸಾಚಾರದ ಈ ಕೊನೆಯ ಶಾಸ್ತ್ರಬದ್ಧ ಆಚರಣೆಯಲ್ಲಿ ಜಾತೀಯ ಸಂಘರ್ಷ ಹಿಂದಿನ ಸ್ಥಾನವನ್ನು ಅಲಂಕರಿಸಿ ಬುಡಕಟ್ಟು ಸಂಸ್ಕಾರದ ವಿಜೃಂಭಣೆಯ ಸೂಚಕವಾಗಿತ್ತು.

ಆದುದರಿಂದ ತೇಜಗಢದಿಂದ ೩೦ ಕಿ.ಮೀ. ದೂರದ ಪಾನವಾಡದಲ್ಲಿ ಎರಡು ದಿನಗಳ ನಂತರ ತೊಂದರೆ ಪ್ರಾರಂಭವಾದಾಗ ಹಿಂಸಾಚಾರ ಬುಡಕಟ್ಟು ಜನಾಂಗದ ಸ್ವತ್ತಾಯಿತು. ಸಮಸ್ಯೆಯು ಉಲ್ಬಣವಾಗುವುದನ್ನೆ ಎದುರು ನೋಡುತ್ತಿದ್ದ ಆಸಕ್ತರು ಬುಡಕಟ್ಟು ಜನಾಂಗದವರನ್ನು ಪ್ರಚೋದಿಸಲು ಬೇಕಾದ ಗಾಳಿಸುದ್ಧಿಯ ಬೀಜವನ್ನು ಬಿತ್ತಿದರು. ನಾನು ಕೇಳಿದ ಗಾಳಿಸುದ್ದಿಗಳಲ್ಲಿ ಕೆಳಗಿನ ಐದು ದಾಖಲಿಸಲು ಯೋಗ್ಯವಾಗಿವೆ:

೧. ರಾತ್ರಾಗಳ ಪವಿತ್ರವಾದ ಮಹಾಮಹಿಮ ಮಹೋದ ವೃಕ್ಷವನ್ನು ಕಡಿದು ರಸ್ತೆತಡೆಗೆ ಬಳಸಿದರು ಎಂದು ಬುಡಕಟ್ಟು ವ್ಯಕ್ತಿಯೊಬ್ಬನಿಗೆ ಕನಸು ಬಿತ್ತು. ಇದರಿಂದ ಬಾಬೋ ಪಿತೋರ ದೇವತೆಗೆ ಭಯಂಕರ ಕೋಪ ಬಂದಿದೆ; ದೇವತೆ ಮಹೋದ ವೃಕ್ಷಕ್ಕೆ ತೊಂದರೆ ಮಾಡಿದವರ ಮೇಲೆ ಪ್ರತೀಕಾರವನ್ನು ಬಯಸುತ್ತದೆ.

೨. ಬುಡಕಟ್ಟು ಜನಾಂಗದವರು ತಮ್ಮ ಮಂತ್ರದಿಂದ ಪೋಲಿಸರು ಬಳಸುವ ಬಂದೂಕುಗಳನ್ನು ಅಭಿಮಂತ್ರಿಸಿ ಅವರ ಮೇಲೆ ಪುನಃ ಬಳಸಬಹುದು. ಇದರಿಂದಾಗಿ ಪೋಲಿಸರು ತಮ್ಮ ಶಸ್ತ್ರಾಸ್ತ್ರಗಳನ್ನು ಬಳಸಲು ಹೆದರಿದರು.

೩. ದೈವತ್ವದ ಪ್ರೇರಣೆ ಪಡೆದ ಕೆಲವು ಬಾಡ್ವಾಗಳು ಬೃಹತ್ ಬಾಡ್ವಾಗಳಾಗಿ ದ್ದಾರೆ(ವಯಸ್ಸು ಕೇವಲ ೨೨). ಐಂದ್ರಜಾಲಿಕ ವಿದ್ಯೆಯ ಎಲ್ಲಾ ಅಂಶಗಳನ್ನು ಕರಗತಗೊಳಿಸಿಕೊಂಡಿದ್ದರಿಂದ ಇವರನ್ನು ಕೊಲ್ಲುವುದು ಸಾಧ್ಯವಿಲ್ಲ. ಇವರಲ್ಲಿ ಒಬ್ಬ ಬುಡಕಟ್ಟು ಜನರ ನಾಯಕತ್ವ ವಹಿಸುತ್ತಾನೆ.

೪. ಮುಸ್ಲಿಮರು ಬುಡಕಟ್ಟು ಮಹಿಳೆಯರನ್ನು ಅತ್ಯಾಚಾರಕ್ಕೆ ಒಳಪಡಿಸಿದ್ದಾರೆ.

ಮತ್ತು ಬುಡಕಟ್ಟು ಹೆಣ್ಣು ಮಕ್ಕಳನ್ನು ಅಪಹರಿಸಿ ಪಟ್ಟಣಗಳಲ್ಲಿ ಮಾರುತ್ತಾರೆ.

೫. ಮುಸ್ಲಿಮರು ಕಾಶ್ಮೀರ (ಸ್ಥಳ/ಹುಡುಗಿ) ವನ್ನು – ಬುಡಕಟ್ಟು ಜನಾಂಗವನ್ನು ಶೋಷಣೆಗೊಳಪಡಿಸಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮತ್ತು ೫೦ ಮಂದಿ ಬುಡಕಟ್ಟು ಮಹಿಳೆಯರನ್ನು ತಮ್ಮ ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದಾರೆ.

ಪಾನವಾಡ ಅತ್ಯಂತ ವಿಶಿಷ್ಟ ಪ್ರದೇಶ. ಗುಡ್ಡಗಾಡಿನಲ್ಲಿ ಹೆಚ್ಚುಕಡಿಮೆ ಇಪ್ಪತ್ತು ಸಣ್ಣ ಮತ್ತು ದೊಡ್ಡ ಗ್ರಾಮಗಳನ್ನು ನಡೆದುಕೊಂಡೆ ಅಲ್ಪಾವಧಿಯಲ್ಲಿ ತಲುಪ ಬಹುದು. ಅನೇಕ ಹಿಂದು ಭಿನ್ನ ವರ್ಗಾವಲಂಬಿ ಪಂಥಗಳ ಚಳುವಳಿಗಳು ಹಲವು ವರ್ಷಗಳಿಂದ ಕ್ರಿಯಾತ್ಮಕವಾಗಿದೆ. ರಾಜಾಸ್ಥಾನ ಅಥವಾ ಮಧ್ಯಪ್ರದೇಶದ ಕೆಲಮಂದಿ ಕವಾರ ಜೈನ ಸನ್ಯಾಸಿಗಳು ಹತ್ತಿರದ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಮತ್ತು ಇವರು ಅಲ್ಲಿನ ಜನಗಳಲ್ಲಿ ಸಾಕಷ್ಟು ಪ್ರಭಾವಶಾಲಿಗಳಾಗಿದ್ದಾರೆ. ಪಾನವಾಡದ ಮುಸ್ಲಿಮ್ ವ್ಯಾಪಾರಸ್ಥರು ಶ್ರೀಮಂತರು ಮತ್ತು ಹಲವಾರು ಜನ ಶೇ. ೬೦ರಿಂದ ಶೇ ೧೨೦ರ ಬಡ್ಡಿಯಲ್ಲಿ ಲೇವಾದೇವಿ ಮಾಡುತ್ತಿದ್ದಾರೆ.

ಲೇವಾದೇವಿಗಾರರ ಮೇಲಿನ ದ್ವೇಷವೊ ಅಥವಾ ಪೋಲಿಸರ ಸಾಮರ್ಥ್ಯದ ವಿರುದ್ಧವಿರುವ ಐಂದ್ರಜಾಲಿಕ ಅಡಚಣೆಯೊ, ಅಂತೂ ಪಾನವಾಡದ ಬುಡಕಟ್ಟು ಜನಾಂಗದ ಐಕಮತ್ಯ ಮಾತ್ರ ಎಚ್ಚರಿಕೆ ಗಂಟೆಯ ಹಾಗೆ ಅದ್ಭುತವಾದದ್ದು. ದಿನಪತ್ರಿಕೆ ಯೊಂದರ ವರದಿಯ ಪ್ರಕಾರ ಇವರ ಸಂಖ್ಯೆ ೫೦೦೦. ಪ್ರತಿಯೊಂದು ಹಳ್ಳಿಯೂ ಸುಮಾರು ೫೦ ರಿಂದ ೧೦೦ ಜನರನ್ನು ಕಳಿಸಿಕೊಟ್ಟಿದೆ ಎಂದರೆ ಲೂಟಿಯಲ್ಲಿ ಪಾಲ್ಗೊಂಡವರ ಸಂಖ್ಯೆ ಒಂದು ನಿರ್ದಿಷ್ಟ ಅವಧಿಯಲ್ಲಿ ೨೦೦ಕ್ಕೂ ಸ್ವಲ್ಪ ಕಡಿಮೆ.

ತೇಜಗಢದ ಘಟನಾವಳಿಗಳಲ್ಲಿರುವ ಶಾಸ್ತ್ರೋಕ್ತ ವಿಧಿವಿಧಾನಗಳು ಅತ್ಯಂತ ದೊಡ್ಡಪ್ರಮಾಣದಲ್ಲಿ ಪಾನವಾಡದಲ್ಲಿ ಪ್ರಮಾಣಭೂತವಾಗಿ ಗೋಚರಿಸುತ್ತದೆ. ಈ ಬಾರಿ ಬುಡಕಟ್ಟು ಜನಾಂಗದವರು ತಮ್ಮ ಸಾಂಪ್ರದಾಯಿಕ ಬಿಲ್ಲುಬಾಣಗಳನ್ನು ಬಳಕೆಗೆ ತಂದರು. ಸಾಮಾನ್ಯವಾಗಿ ಬಾಣಗಳನ್ನು ಇವರು ಅಸ್ತ್ರವಾಗಿ ಬಳಸುವುದಿಲ್ಲ. ಯಾರನ್ನಾದರು ಕೊಲ್ಲಬೇಕಾದಾಗ ಚೂಪಾದ ಲೋಹದ ಪಾಳಿಯೂ ಅಥವಾ ಧಾರಿಯೂವನ್ನು ಬಳಸುತ್ತಾರೆ; ಕಳ್ಳರು ಅಥವ ಶತ್ರುವಿನ ವಿರುದ್ಧ ಹೋರಾಡ ಬೇಕಾದರೆ ಬಂದೂಕನ್ನು ಬಳಸುತ್ತಾರೆ. ಹಲವರ ಬಳಿ ಬಂದೂಕು ಲೈಸೆನ್ಸ್ ಇದೆ. ಮತ್ತೆ ಕೆಲವರು ಕೆಲವೆ ಕಿ.ಮೀ ಅಂತರದಲ್ಲಿರುವ ಮಧ್ಯಪ್ರದೇಶದಿಂದ ಅಕ್ರಮವಾಗಿ ಬಂದೂಕುಗಳನ್ನು ಕೊಳ್ಳುತ್ತಾರೆ. ಕೇವಲ ಮಕ್ಕಳು ಮಾತ್ರ ಹಕ್ಕಿಗಳ ಬೇಟೆಗಾಗಿ ಬಾಣಗಳನ್ನು ಬಳಸುತ್ತಾರೆ. ಇದರಿಂದಾಗಿ ಈ ಪ್ರದೇಶದಲ್ಲಿ ಹಕ್ಕಿಗಳು ಕಾಣಸಿಗುವುದು ತುಂಬಾ ಕಡಿಮೆ.



ಪಾನವಾಡವನ್ನು ಗುಂಪು ಮೊದಲಬಾರಿ ಆಕ್ರಮಣ ಮಾಡಿದಾಗ ಅವರು ಅಲಂಕಾರಪ್ರಾಯವಾದ ಬಿಲ್ಲುಬಾಣಗಳನ್ನು ಹಿಡಿದಿದ್ದರು. ಕೇವಲ ಮಂತ್ರದಿಂದ ಪೋಲಿಸರ ಗುಂಡಿನ ಸುರಿಮಳೆಯನ್ನು ಎದುರಿಸುವುದು ಅಸಾಧ್ಯ ಎಂದರಿವಾದಾಗ ನಂತರ ಅತಿಯಾಗಿ ಬಂದೂಕುಗಳನ್ನು ಬಳಸಲು ಪ್ರಾರಂಭಿಸಿದರು. ಧೈರ್ಯಶಾಲಿ ಮತ್ತು ಪ್ರಾಮಾಣಿಕ ಹಿರಿಯ ಡಿಎಸ್‌ಪಿ ಕೇಶವಕುಮಾರ ಹೇಳಿದಂತೆ ಬುಡಕಟ್ಟು ಜನಾಂಗದ ಕೆಲವರು ನನ್ನನ್ನು ಸುಡಿ ಎಂದು ಎದೆಯೊಡ್ಡಿದವರನ್ನು ಭೇಟಿಯಾದರಂತೆ. ವದಂತಿಯಲ್ಲಿರುವ ಮಂತ್ರದ ಸಾಮರ್ಥ್ಯದ ಬಗ್ಗೆ ಇವರಿಗೆ ಅಚಲ ವಿಶ್ವಾಸ.

••• ••• •••

ಬುಡಕಟ್ಟು ಜನಾಂಗದ ದೃಷ್ಟಿಯಿಂದ ಆಕ್ರಮಣದ ಕುರಿತು ಕೆಲವು ಪ್ರಶ್ನೆಗಳನ್ನು ಎತ್ತುವುದು ಅಗತ್ಯ. ಛೋಟಾ ಉದೇಪುರದ ಬುಡಕಟ್ಟು ಜನರು ಬಂಡೇಳುವ ಯಾವುದೇ ಯೋಜನೆಯನ್ನು ಹಮ್ಮಿಕೊಂಡಿದ್ದರೆ? ರಾಜ್ಯದ ವಿರುದ್ಧ ಹೋರಾಡುವ ಯಾವುದೇ ಗೋಚರ ಅಥವಾ ಅಗೋಚರ ಚಳುವಳಿ ಈ ಭಾಗದಲ್ಲಿತ್ತೆ? ಸ್ಥಳೀಯ ಬುಡಕಟ್ಟು ಸಂಸ್ಕೃತಿಯನ್ನು ಹಿಂದೆಸರಿಸಿ ಹಿಂದುತ್ವದ ಭೂತ ಬುಡಕಟ್ಟು ಜೀವನದೊಳಗೆ ಒಳಹೋಗುವಂತಹ ಏರ್ಪಾಟನ್ನು ಮತೀಯ ಬಿಜೆಪಿ ಮಾಡಿತ್ತೆ? ಬೇರೆ ರೀತಿಯಲ್ಲಿ ಹೇಳುವುದಾದರೆ ಬುಡಕಟ್ಟು ಪ್ರದೇಶದಲ್ಲಿ ನಡೆದ ಮುಸ್ಲಿಮರ ಮೇಲಿನ ಮಾರ್ಚ್ ೨೦೦೨ರ ಹಿಂಸಾಚಾರದಲ್ಲಿ ಎಷ್ಟು ಬುಡಕಟ್ಟು ಲಕ್ಷಣದಿಂದ ಕೂಡಿದೆ ಮತ್ತು ಇದರಲ್ಲಿ ಬಿಜೆಪಿ ತೆಗೆದುಕೊಂಡ ಕಾರ್ಯಕ್ರಮದ ಯಶಸ್ಸು ಎಷ್ಟು? ಈ ಪ್ರಶ್ನೆಗಳಿಗೆ ಉತ್ತರ ದಂಗೆ ಮತ್ತು ಬುಡಕಟ್ಟು ಸನ್ನಿವೇಶವನ್ನು ಅರ್ಥಮಾಡಿ ಕೊಳ್ಳಲು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಬಹಳ ಮುಖ್ಯ.

ಈ ಹಿಂಸಾಚಾರದ ಒಂದು ಅಂಶ ತೇಜಗಢ ಮತ್ತು ಪಾನವಾಡದಲ್ಲಿ ನಡೆದ ಮುಸ್ಲಿಂ ಜನಾಂಗದ ಮೇಲಿನ ದೌರ್ಜನ್ಯ, ಗುಜರಾತಿನ ಇತರೆಡೆ ಸಂಘಪರಿವಾರ ದವರು ಯೋಜಿಸಿದ ರೀತಿಯಲ್ಲಿ ಕಂಡುಬಂದರೂ, ಇದು ಸ್ವಯಂ ಪ್ರೇರಿತವಾದ್ದು. ತೇಜಗಢ ಪ್ರತಿಕ್ರಿಯಿಸಲು ಐದುದಿನಗಳನ್ನು ತೆಗೆದುಕೊಂಡರೆ ಪಾನವಾಡ ಸುಮಾರು ಒಂಬತ್ತು ದಿನಗಳು. ಅಲ್ಲದೆ ಕಾಶ್ಮೀರ, ಅಯೋಧ್ಯೆ ಮತ್ತು ಗಡಿಯಾಚೆಗಿನ ಭಯೋತ್ಪಾದನೆಯ ಕುರಿತು ಅರಿವು ಈ ಬುಡಕಟ್ಟು ಗ್ರಾಮಗಳಲ್ಲಿ ತೀರಾ ಕಡಿಮೆ. ಇಲ್ಲಿನ ಹಲವು ಸರಪಂಚರು ಅವಿದ್ಯಾವಂತರು ಅಥವಾ ನವಸಾಕ್ಷರರು. ಈ ಗ್ರಾಮಗಳಲ್ಲಿ ಯಾವುದೆ ಎಲೆಕ್ಟ್ರಾನಿಕ್ಸ್ ಮಾಧ್ಯಮ ಇಲ್ಲ ಎನ್ನಬಹುದು.

ಆ ದಿನಗಳಲ್ಲಿ ಒಬ್ಬ ವಿದ್ಯಾವಂತ ರಾತ್ವಾ ಯುವಕ ಒಂದು ಟಿಪ್ಪಣಿಯನ್ನು

ಕಳುಹಿಸಿದ್ದ. ಅದು ಮರವನ್ನು ಉರುಳಿಸುದ ಬಗೆಗಿನ ಆತನ ಅನಿಸಿಕೆಗಳನ್ನು ಹೊಂದಿತ್ತು. ಅದೊಂದು ಬೃಹದಾಕಾರದ ಕಹಿಬೇವಿನ ಮರ. ಗುಜರಾತಿಯಲ್ಲಿ ಅದನ್ನು ಲಿಮ್ಡು ಎಂದು ಕರೆಯುತ್ತಾರೆ. ಇದರಿಂದಾಗಿಯೆ ಈ ಗಲಭೆಪೀಡಿತ ಪ್ರದೇಶಕ್ಕೆ 'ಲಿಮ್ಡಿ ಬಜಾರ್' ಎಂದು ಹೆಸರು ಬಂದಿದೆ. ದಂಗೆಕೋರರರು ಕಹಿಬೇವಿನ ವೃಕ್ಷಕ್ಕೆ ಬೆಂಕಿ ಹಚ್ಚಿದರು. ಈ ವೃಕ್ಷ ಒಂದು ಶತಮಾನಕ್ಕೂ ಹೆಚ್ಚು ಕಾಲ ಅಲ್ಲಿತ್ತು; ಅದನ್ನು ಸಜೀವ ದಹನ ಮಾಡಲಾಯಿತು. ನಿಧಾನಕ್ಕೆ ಲಯಬದ್ಧವಾಗಿ ಹತ್ತು ದನಗಳ ಕಾಲ ಅದು ಉರಿಯಿತು. ಅರ್ಜುನ ರಾತ್ವಾನ ಟಿಪ್ಪಣಿ ಈ ರೀತಿ ಹೇಳುತ್ತದೆ: ''ದಾರಿಹೋಕರಿಗೆ ನೆರಳನ್ನು ನೀಡುವುದನ್ನು ಬಿಟ್ಟರೆ ಲಿಮ್ಡು ವೃಕ್ಷಕ್ಕೆ ಯಾವುದೆ ಬಗೆಯ ಧಾರ್ಮಿಕ ಅಂಶ ಇದೆಯೆ? ಅದೊಂದು ಹಿಂದೂ ಅಥವಾ ಮುಸ್ಲಿಂ ಅಲ್ಲದ ಆದಿವಾಸಿಯಲ್ಲವೆ? ಅದನ್ನು ಯಾಕೆ ನಾಶಪಡಿಸಲಾಯಿತು? ಆದಿವಾಸಿಗಳನ್ನು ಸಹ ಕಹಿಬೇವಿನ ವೃಕ್ಷದಂತೆ ನಾಶಪಡಿಸಲಾಯಿತು. ಅವರು ಹಿಂದೂಗಳೂ ಅಲ್ಲ ಮುಸ್ಲಿಮರೂ ಅಲ್ಲ. ಆದರೆ ಈಗ ಅವರನ್ನು ಬೇರುಸಹಿತ ಕಿತ್ತುಹಾಕಲಾಗುತ್ತಿದೆ.''

ನನ್ನ ಮಟ್ಟಿಗೆ ಈ ಟಿಪ್ಪಣಿ ಬುಡಕಟ್ಟು ಜನಾಂಗಕ್ಕೆ ಮತೀಯ ರಾಜಕೀಯದಲ್ಲಿ ಸೇರುವ ಯಾವುದೇ ಆಸಕ್ತಿ ಇಲ್ಲದಿರುವುದರ ದ್ಯೋತಕ. ಹಾಗಾದರೆ ಮುಸ್ಲಿಂ ಜನಾಂಗದ ಮೇಲಿನ ಈ ಬಗೆಯ ಕ್ರೋಧಾಗ್ನಿಗೆ ಮೂಲ ಏನು? ಈ ಪ್ರಶ್ನೆಗೆ ಹೊಂದುವ ಬಹಳ ಉತ್ತಮ ಉತ್ತರವೆಂದರೆ ಬುಡಕಟ್ಟು ಜನಾಂಗವನ್ನು ಬನಿಯಾಗಳ ಪರವಾಗಿ ಪರೋಕ್ಷ ಯುದ್ಧ ನಡೆಸಲು ಬಳಸಿಕೊಳ್ಳಲಾಯಿತು.

ಗುಜರಾತ್ ದಳ್ಳುರಿಯು ಪ್ರಾರಂಭವಾದಾಗಿನಿಂದ ಎರಡು ಘಟನೆಗಳು ಬುಡಕಟ್ಟು ಜನಾಂಗ ಮತೀಯ ಘರ್ಷಣೆಯಲ್ಲಿ ಪಾಲ್ಗೊಳ್ಳಲು ಬಯಸದೆ ಇರುವುದನ್ನು ಸ್ಪಷ್ಟಪಡಿಸುತ್ತದೆ. ಫೆ. ೨೮ರ ಸಂಜೆ ಪಂಚಮಹಲಿನ ಮುಸ್ಲಿಮರನ್ನು ತುಂಬಿಕೊಂಡ ಒಂದ ಲಾರಿ ಪ್ರಯಾಣಿಕರನ್ನು ಸಾಗಿಸುತ್ತಿದ್ದ ಒಂದು ಜೀಪಿಗೆ ಹೊಡೆದು ಅದು ರಸ್ತೆಯ ತುದಿಗೆ ಹೋಗುವಂತೆ ಮಾಡಿತು. ಈ ಭಾಗದಲ್ಲಿನ ಪ್ರಖ್ಯಾತ ಸಾರಿಗೆ ವ್ಯವಸ್ಥೆ ಮತ್ತು ಜನಬಾಹುಳ್ಯದಿಂದಾಗಿ ಇಂತಹ ಜೀಪಿನ ಎಲ್ಲಾ ಭಾಗಗಳಲ್ಲೂ ಪ್ರಯಾಣಿಕರು ಜೋತಾಡುತ್ತಿರುತ್ತಾರೆ. ಈ ಅಪಘಾತದಲ್ಲಿ ನಾಲ್ಕುಜನ ಪ್ರಯಾಣಿಕರು – ಮೂವರು ಪುರುಷರು ಮತ್ತು ಒಬ್ಬ ಮಹಿಳೆ ಸ್ಥಳದಲ್ಲಿಯೆ ಮೃತಪಟ್ಟರು. ಮುಸ್ಲಿಮರನ್ನು ಹೊತ್ತ ಆ ವಾಹನದಿಂದಾಗಿ ಅಪಘಾತವಾಯಿತು ಎನ್ನುವುದರ ಅರಿವು ಗ್ರಾಮಸ್ಥರಿಗಿತ್ತು. ಲಾರಿಯಲ್ಲಿ ಪಂಚಮಹಲಿನ ಮುಸ್ಲಿಮರಿದ್ದರು. ಆ ದಿನ ಗೋಧ್ರಾ ಹಿಂಸಾಕಾಂಡ ಜರುಗಿತ್ತು. ತೇಜಗಢದ ಹಳ್ಳಿಗರು ಲಾರಿಯ ಸುರಕ್ಷಿತೆಗೆ ಭಂಗವಾಗದ ರೀತಿಯಲ್ಲಿ ಅದನ್ನು ಬಿಟ್ಟುಕೊಟ್ಟರು. ಯಾವುದೆ ಕ್ರೋಧದ ಪ್ರದರ್ಶನವಾಗಲಿಲ್ಲ.



ಎರಡನೆ ಘಟನೆ ತೇಜಗಢದ ಅತ್ಯಂತ ಪುರಾತನ ಭಾಗವಾದ ಹರಿದಾಸಪುರದಲ್ಲಿ ಫೆ. ೨೮ರಂದು ಘಟಿಸಿತು. ಹರಿದಾಸಪುರದಲ್ಲಿ ಒಂದೆ ವಂಶಕ್ಕೆ ಸೇರಿದ ೧೭೦ ಕುಟುಂಬಗಳ ವರ್ಗ ಒಬ್ಬ ಸಹವ್ಯಕ್ತಿಯ ಶವಸಂಸ್ಕಾರಕ್ಕಾಗಿ ಮಧ್ಯಾಹ್ನದ ಹೊತ್ತಿಗೆ ಸೇರಿಕೊಂಡಿತ್ತು. ಸುಮಾರು ೧೨೦೦ ಜನ ಸೇರಿದ್ದ ಸಭೆಯಲ್ಲಿ ಕೆಲವು ಪಕ್ಕದ ಗ್ರಾಮದ ಪಂಚಾಯ್ತಿ ಸದಸ್ಯರು ಗೋಧ್ರಾ ಹಿಂಸಾಚಾರಕ್ಕೆ ಪ್ರತೀಕಾರ ತೆಗೆದುಕೊಳ್ಳುವ ಮಾತಾಡಿದರು. ಶಾಸ್ತ್ರೋಕ್ತವಾಗಿ ಮದ್ಯಪಾನ ಮಾಡಿದಾಗಲೂ ಈ ಮಾತಿಗೆ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯಲಿಲ್ಲ. ಗೋಧ್ರಾ ಹಿಂಸಾಚಾರದ ವಾರ್ತೆ ಎಲ್ಲಾ ವೃತ್ತಪತ್ರಿಕೆಗಳ ಮುಖಪುಟದಲ್ಲಿ ದೊಡ್ಡದಾಗಿ ಬಂದ ದಿನ ಹಿಂದುತ್ವದ ಮನವಿಗೆ ಈ ಬುಡಕಟ್ಟು ಜನರಿಂದ ನೀರಸ ಪ್ರತಿಕ್ರಿಯೆ ದೊರಕಿತ್ತು. ಅಲ್ಲಿದ್ದವರು ನೀಡಿದ ಮಾಹಿತಿಯ ಪ್ರಕಾರ ಮುಸ್ಲಿಮರ ಮೇಲೆ ಆಕ್ರಮಣ ಮಾಡುವ ಧೈರ್ಯವಂತರಿಗೆ ಪುಕ್ಕಟೆ ಸೀಮೆಎಣ್ಣೆ ಮತ್ತು ಹೆಂಡವನ್ನು ಪೂರೈಕೆಮಾಡುವ ಆಶ್ವಾಸನೆಯನ್ನು ನೀಡಲಾಯಿತು.

••• ••• •••

ಕಿಡಿಗೇಡಿಗಳು ಮಾರ್ಚ್ ೧ ರಂದು ಮುಸ್ಲಿಂ ಕುಟುಂಬಗಳನ್ನು ಸುಡುವುದರಲ್ಲಿ ಪಾಲ್ಗೊಳ್ಳಬೇಕೆಂದು ತೇಜಗಢದ ಸರಪಂಚನನ್ನು ಕೇಳಿಕೊಂಡರು. ಆತ ತನ್ನ ಪಂಚಾಯಿತಿ ಸರಹದ್ದಿನಲ್ಲಿ ಹಿಂಸಾಚಾರಕ್ಕೆ ಅವಕಾಶ ನೀಡಲು ಒಪ್ಪಲಿಲ್ಲ. ಮಾರ್ಚ್ ೨ ಮತ್ತು ೩ರಂದು ಗ್ರಾಮದ ಮತೀಯ ಶಕ್ತಿಗಳು ತಮ್ಮ ವಾದವನ್ನು – ಶುದ್ಧ ಮತೀಯ ವಾದವನ್ನು – ಬಿಟ್ಟುಕೊಟ್ಟು, ಅದರ ಸ್ಥಾನದಲ್ಲಿ ಸ್ವಲ್ಪ ಭಿನ್ನವಾದ, ಸರ್ವಸಮ್ಮತವಾದ ವ್ಯಾಪಾರಿ ದೃಷ್ಟಿಕೋನವನ್ನು ಜನರಲ್ಲಿ ಬಿತ್ತಿದಂತೆ ಕಾಣುತ್ತದೆ. ಅವರು ಮುಸ್ಲಿಂ ವ್ಯಾಪಾರಸ್ಥರು ವಿಪರೀತ ಅಹಂಕಾರಿಗಳಾಗಿದ್ದಾರೆ, ತುಂಬಾ ಕೊಬ್ಬಿದ್ದಾರೆ ಎನ್ನುವ ವದಂತಿಯನ್ನು ಸೃಷ್ಟಿಸಿದರು. ಇದು ಬುಡಕಟ್ಟು ಜನರಿಗೆ ಮನವರಿಕೆಯಾಯಿತು. ಮಾರ್ಚ್ ೪ರ ಸಂಜೆ ಮುಖ್ಯಮಂತ್ರಿ ಮೋದಿಯ – ಹಿಂಸೆಯನ್ನು ೭೨ ಗಂಟೆಗಳ ಅತ್ಯಲ್ಪ ಅವಧಿಯಲ್ಲಿ ಹತೋಟಿಗೆ ತರಲಾಯಿತು ಎನ್ನುವ ಹಾಸ್ಯಾಸ್ಪದ ಮಾತು ಹೊರಬೀಳುತ್ತಿದ್ದಂತೆ ಮೊದಲ ಮುಸ್ಲಿಂ ಅಂಗಡಿಗೆ ಬೆಂಕಿ ಹಚ್ಚಲಾಯಿತು.

ಈ ಅಂಗಡಿ ೫೫ ವಯಸ್ಸಿನ ಯಾಕೂಬ್ ಖತ್ರಿಯದು. ಅಂಗಡಿಯಲ್ಲಿ ಬಿಸ್ಕತ್, ಚಾಕ್ಲೆಟ್ ಮುಂತಾದ ವಸ್ತುಗಳಿದ್ದವು. ಈತ ೫ ಎಕರೆ ಕೃಷಿ ಭೂಮಿಯ ಒಡೆಯ. ಈತನ ಸಹೋದರ ಗನಿಭಾಯಿ ತೇಜಗಢ ಮಸೀದಿಯಲ್ಲಿ ಗೌರವಾನ್ವಿತ ವ್ಯಕ್ತಿ. ಅಂಗಡಿ ವಹಿವಾಟು ಯಾಕೂಬನ ಹಣಕಾಸು ಸ್ಥಿತಿಯ ನೈಜ ಚಿತ್ರಣವನ್ನು

ನೀಡುವುದಿಲ್ಲ. ಈತ ದೊಡ್ಡ ಮನೆ ಮತ್ತು ಎರಡು ಅಂಗಡಿಗಳನ್ನು ಹೊಂದಿದ್ದಾನೆ. ಯಾಕೂಬ್ ಖತ್ರಿಯನ್ನು ಗುರಿಯಾಗಿಟ್ಟುಕೊಂಡು ಹಿಂದೂ ಮತೀಯ ಶಕ್ತಿಗಳು ಧಾರ್ಮಿಕ ಪ್ರತೀಕಾರ ಮತ್ತು ವ್ಯಾಪಾರಿ ಪೈಪೋಟಿಯನ್ನು ಸಮನ್ವಯ ಗೊಳಿಸಿದರು.

ಗಲಭೆಯ ಈ ಘಟನೆ ನಡೆದಾಗ ಮುಸ್ಲಿಂ ಸಮುದಾಯ ತೇಜಗಢದ ಹಳ್ಳಿಯಲ್ಲೆ ಇತ್ತು. ಆಕ್ರಮಣವನ್ನು ಎದುರಿಸಲು ಮುಸ್ಲಿಂ ಸಮುದಾಯ ವಿಫಲ ಪ್ರಯತ್ನ ನಡೆಸಿತು. ಅಲ್ಲಿ ಸೇರಿದ್ದ ಗುಂಪು ದೊಡ್ಡದಾಗಿದ್ದರಿಂದ ಪ್ರತಿಭಟನೆ ಕ್ಷೀಣವಾಗಿತ್ತು. ದೌರ್ಜನ್ಯ ನಡೆಯುವ ಸ್ಥಳದಲ್ಲಿ ಪೋಲಿಸರು ಇರಲಿಲ್ಲ. ಮುಂದಿನ ಮೂರು ದಿನಗಳಲ್ಲಿ ಆಕ್ರಮಣ ಭೀತಿಯಿಂದ ತೇಜಗಢದ ಮುಸ್ಲಿಮರು ಓಡಿ ಹೋಗಲು ತಯಾರಾಗಿದ್ದರು. ಮಧ್ಯಾಹ್ನದಿಂದ ಸಂಜೆಯವರೆಗೂ ಲೂಟಿ ಮುಂದುವರಿಯಿತು. ಇನ್ನೂ ಎರಡು ಅಂಗಡಿಗಳು ಭಸ್ಮವಾದವು. ರಾತ್ರಿ ಎಲ್ಲಾ ಮುಸ್ಲಿಮರು ಓಡಿಹೋದರು. ಎಲ್ಲಿ ಆಶ್ರಯ ಪಡೆದರೆಂದು ಯಾರಿಗೂ ಗೊತ್ತಿಲ್ಲ. ವದಂತಿಯಂತೆ ಯಾಕೂಬ್ ಖತ್ರಿ ಘಟನೆಯಲ್ಲಿ ಮುಸ್ಲಿಮರು ಗುಂಪಿನತ್ತ ಗುಂಡುಹಾರಿಸಿದರು, ಇವರ ಬಳಿ ಅಕ್ರಮ ಮದ್ದುಗುಂಡುಗಳಿವೆ ಎನ್ನುವ ನಂಬಿಕೆ ಬಲವಾಯಿತು. ಇದರಿಂದ ಎಲ್ಲಾ ಮಸೀದಿಗಳು ಶಸ್ತ್ರಾಸ್ತ್ರಗಳ ಸಂಗ್ರಹಾಲಯವಾಗಿವೆ ಎನ್ನುವ ಅಭಿಪ್ರಾಯ ಗಟ್ಟಿಯಾಯಿತು.

ನಾಶನಾದ ಮತ್ತೊಂದು ಅಂಗಡಿ ೫೫ ವಯಸ್ಸಿನ ಖಾದರ ಭಾಯಿಯದು. ಈತ ಒಂದು ಹಿಟ್ಟಿನ ಗಿರಣಿ, ಬಟ್ಟೆ ಮತ್ತು ದಿನಸಿ ಅಂಗಡಿಯ ಮಾಲಿಕ. ಹೀಗೆ ಅನೇಕ ಮುಸ್ಲಿಂ ಅಂಗಡಿಗಳನ್ನು ಸುಡಲಾಯಿತು. ಈ ಹಂತದಲ್ಲಿ ಮತೀಯ ಭಾವನೆ ಹಿಂದೆ ಸರಿದು, ವ್ಯಾಪಾರಿ ತಂತ್ರವಾಗಿ ಮಾರ್ಪಾಟಾಯಿತು. ಇದರಿಂದ ವ್ಯಾಪಾರಿಗಳ ನಡುವಣ ಪೈಪೋಟಿಯನ್ನು ನಿವಾರಿಸುವ, ಮಾರುಕಟ್ಟೆಯ ಮೇಲೆ ಹತೋಟಿ ಸಾಧಿಸುವ ಪ್ರಯತ್ನ ಮುಂದುವರಿಯಿತು. ಗಲಭೆಯಲ್ಲಿ ಪಾಲ್ಗೊಂಡವರು ಇದನ್ನು ಲೂಟಿ ಮಾಡಲು ಸೂಕ್ತ ಅವಕಾಶವೆಂದು ಪರಿಗಣಿಸಿದರು. ಹಿಂದೆ ಹೇಳಿದಂತೆ ಹಿಂಸಾಚಾರ ದಲ್ಲಿ ಒಂದು ಬಗೆಯ ಶಾಸ್ತ್ರೋಕ್ತ ವಿಧಿ ವಿಧಾನ ಗೋಚರಿಸುತ್ತದೆ.

ಈ ಹಂತದಲ್ಲಿ ಕೋಮುಶಕ್ತಿಗಳು ತುಂಬಾ ಕಷ್ಟಪಟ್ಟು ಸೃಷ್ಟಿಮಾಡಿದ ಹಿಂಸೆಯ ಚಾಲನೆಯಲ್ಲಿ ಬಿರುಕು ಕಂಡಾಗ ಹಿಂದೆ ಪಟ್ಟಿಮಾಡಿದ ವದಂತಿಗಳನ್ನು ಹುಟ್ಟುಹಾಕಲಾಯಿತು. ಬುಡಕಟ್ಟು ಜನಾಂಗ ಲೇವಾದೇವಿ ದಂಧೆ ಮಾಡುತ್ತಿದ್ದ ಎಲ್ಲಾ ವ್ಯಾಪಾರಸ್ಥರ ಮೇಲೆ ದಾಳಿಮಾಡುವ ಮನೋಭಾವವನ್ನು ಬೆಳೆಸಿಕೊಳ್ಳುತ್ತಿತ್ತು. ಆದರೆ ಬನಿಯಾ ವರ್ಗ ಕೇವಲ ಮುಸ್ಲಿಂ ವ್ಯಾಪಾರಸ್ಥರನ್ನು ಗುರಿಯಾಗಿಟ್ಟುಕೊಂಡು ದಂಗೆಯನ್ನು ಹುಟ್ಟುಹಾಕಿತ್ತು. ಹಿಂದೂ ಬನಿಯಾಗಳಲ್ಲಿ ತಮ್ಮ ಅಂಗಡಿಗಳನ್ನೂ ಲೂಟಿ ಮಾಡ



ಬಹುದೆಂಬ ಭಯ ಪ್ರಾರಂಭವಾದಾಗ ತೇಜಗಢದ ದಂಗೆಯ ಯಂತ್ರದ ಮೂಲಕ ಯಾಕೂಬ್ ಖತ್ರಿಯ ಮತ್ತೆರಡು ಅಂಗಡಿಗಳನ್ನು ಸುಟ್ಟುಹಾಕಲಾಯಿತು. ಗನಿಭಾಯಿ ಜೊತೆಗಿನ ಆತನ ಸಂಬಂಧದಿಂದಾಗಿ ತೇಜಗಢದ ಮಸೀದಿಯ ಮೇಲೆ ಆಕ್ರಮಣ ಮಾಡಿದಂತೆ ಕಾಣುತ್ತದೆ. ಅದೇ ರೀತಿ ಮುಸ್ಲಿಂ ಶ್ರೀಮಂತರು ಮಾತ್ರವಲ್ಲದೆ ಟೈಲರ್, ಬಡಕೃಷಿಕ, ನಿವೃತ್ತಿಯಾದ ಜೈಲಿನ ಕ್ಲರ್ಕ್ ಹೀಗೆ ಹಲವು ಮುಸ್ಲಿಮರ ಮನೆಗಳನ್ನು, ಅವರ ಹಣಕಾಸು ಸ್ಥಿತಿಯನ್ನು ಪರಿಗಣಿಸದೆ, ಬೂದಿ ಮಾಡಲಾಯಿತು.

ಆಕ್ರಮಣ ಪ್ರವೃತ್ತಿಯವರ ವ್ಯಾಪಾರಿ ಆಸಕ್ತಿ ಕ್ಷೀಣಿಸಲೆ ಇಲ್ಲ. ಮತ್ತೂ ಅನೇಕ ಮುಸ್ಲಿಂ ವ್ಯಾಪಾರಸ್ಥರ ಆಹಾರ ಸಂಗ್ರಹದ ಉಗ್ರಾಣಗಳಿಗೆ ಬೆಂಕಿ ಹಚ್ಚಲಾಯಿತು. ಮುಸ್ಲಿಂ ಸಮುದಾಯ ಬಿಟ್ಟುಹೋದ ಎಲ್ಲಾ ಮನೆಗಳನ್ನು ಹುಡುಕಿ ನಾಶಮಾಡಲಾಯಿತು. ಕೊನೆಯದಾಗಿ ಬಷೀರ್ ಖತ್ರಿಯ ಪಾನೀಯ ಮತ್ತು ಬಟ್ಟೆ ಅಂಗಡಿಗಳನ್ನು ಆಕ್ರಮಣ ಮಾಡಲಾಯಿತು. ದೀರ್ಘವಾದ ಎರಡು ವಾರಗಳ ದಂಗೆಯ ದಿನಗಳಂದು ಪೋಲಿಸರು ಒಂದು ಬಗೆಯ ಸಂತೃಪ್ತಿಯಿಂದ ಇದ್ದದ್ದು ಕಂಡುಬರುತ್ತಿತ್ತು. ಮಾರ್ಚ್ ನಾಲ್ಕರ ನಂತರ ಒಮ್ಮೆಯೂ ಪಂಚಾಯ್ತಿ ಸದಸ್ಯರಾಗಲಿ ಅಥವ ಹಿಂದು ಬನಿಯಾಗಳಾಗಲಿ ದಂಗೆಕೋರರನ್ನು ಸಮಾಧಾನ ಪಡಿಸುವ ಪ್ರಯತ್ನ ಮಾಡದಿರುವುದು ದಂಗೆಯ ಉದ್ದೇಶ ಮತ್ತು ಲಕ್ಷಣದ ಬಗೆಗೆ ಮಾಡುವ ಪ್ರಖರವಾದ ಟೀಕೆ.

ಪಂಚಾಯ್ತಿಯ ಚುನಾಯಿತ ಸದಸ್ಯ ಮತ್ತು ಪ್ರಸ್ತುತ ತೇಜಗಢದ ಮುಸ್ಲಿಂ ಸಮುದಾಯದ ಪ್ರತಿನಿಧಿ ಶಬೀರ್‌ಭಾಯಿಯ ಮನೆಯನ್ನು ಉಳಿಸಿರುವುದು ದಂಗೆಕೋರರ ಔದಾರ್ಯವನ್ನು ಪ್ರತಿಬಿಂಬಿಸುತ್ತದೆ. ಯಾರೋ ಗೋಧ್ರಾದ ಸಬರಮತಿ ಎಕ್ಸ್‌ಪ್ರೆಸ್‌ನ್ನು ಆಕ್ರಮಣ ಮಾಡಿದ ತಪ್ಪಿಗೆ ತೇಜಗಢದ ೫೦೦ಕ್ಕೂ ಹೆಚ್ಚು ಮುಸ್ಲಿಂ ಕುಟುಂಬಗಳಿಗೆ ಶಿಕ್ಷೆ ನೀಡಲಾಯಿತು. ಬಹಳ ಮುಖ್ಯವಾಗಿ ಬುಡಕಟ್ಟು ಪ್ರದೇಶದಲ್ಲಿ ಹಿಂದೂ ಲೇವಾದೇವಿಗಾರರ ಜೊತೆ ಪೈಪೋಟಿ ನಡೆಸುತ್ತಿದ್ದ ಮುಸ್ಲಿಂ ವ್ಯಾಪಾರಿಗಳನ್ನು ಶಿಕ್ಷಿಸಲಾಯಿತು. ಪಾನವಾಡದ ದಂಗೆಯ ಉದ್ದಕ್ಕೂ ಕೇಳಿಬಂದ ಒಂದು ಅಂಶ ಕೊಬ್ಬಿದ ಮುಸ್ಲಿಂ ಲೇವಾದೇವಿಗಾರರಿಗೆ ಪಾಠಕಲಿಸುವುದು ಆಕ್ರಮಣದ ಉದ್ದೇಶ.

ದಂಗೆಯ ಯಾವುದೇ ಹಂತದಲ್ಲೂ ಬುಡಕಟ್ಟು ಜನಾಂಗದ ಉದ್ದೇಶ ಹಿಂದುತ್ವವನ್ನು ಬೆಂಬಲಿಸುವುದು ಎಂದು ತಿಳಿದುಕೊಳ್ಳುವುದು ಸಂಪೂರ್ಣ ತಪ್ಪು. ಸತ್ಯ ಇದಕ್ಕೆ ಬಹಳ ದೂರದಲ್ಲಿದೆ ಎನ್ನುವುದು ಮೇಲೆ ವಿವರಿಸಿದ ಘಟನಾವಳಿಗಳಿಂದ ಸ್ಪಷ್ಟವಾಗುತ್ತದೆ. ಬುಡಕಟ್ಟು ಗ್ರಾಮಗಳು ದಂಗೆಯಲ್ಲಿ ಪಾಲ್ಗೊಳ್ಳುವಂತೆ ಪುಸಲಾಯಿಸಲಾಯಿತು. ಹದಿನೈದರಿಂದ ಇಪ್ಪತ್ತು ಜನರ ಗುಂಪು ಗ್ರಾಮದ ಸರಪಂಚನ ಬಳಿ

ಮುಸ್ಲಿಂಮರ ಮೇಲೆ ಆಕ್ರಮಣಮಾಡಲು 'ಪಡೆ'ಯನ್ನು ಒದಗಿಸುವಂತೆ ಕೇಳಿತು. ಆಕ್ರಮಣಕ್ಕೆ ಜೊತೆಕೊಟ್ಟವರಿಗೆ ಕಾನೂನಿನ ರಕ್ಷಣೆ ನೀಡುವುದಾಗಿ ಆಶ್ವಾಸನೆ ನೀಡಲಾಯಿತು. ಬೆಂಬಲಿಸದವರನ್ನು ಬೆದರಿಸಲಾಯಿತು. ಪ್ರಚೋದನೆ ನೀಡುವವರು ಆಡಳಿತ ಪಕ್ಷಕ್ಕೆ ಸೇರಿದವರಾದ್ದರಿಂದ ಆಶ್ವಾಸನೆ ಅಥವಾ ಬೆದರಿಕೆ ಸಾಧ್ಯವಾಯಿತು.

ವದಂತಿಯ ಕೇಂದ್ರವಾದ ರಾತ್ವಾ ಯುವಕನಿಗೆ ಯಾವುದೆ ಅವಘಡವಾದಾಗ ಆತನ ಕುಟುಂಬಕ್ಕೆ ಎರಡು ಲಕ್ಷ ರೂಪಾಯಿ ನೀಡುವುದಾಗಿ ಭರವಸೆ ಕೊಡಲಾಯಿತು. ಇದನ್ನು ಒಪ್ಪದಾಗ ಬೆದರಿಸಲಾಯಿತು. ಈತನಿಗೆ ಶ್ರೀಮಂತಿಕೆ ಇರಲಿಲ್ಲ ಅಥವಾ ಬೆದರಿಕೆ ಎದುರಿಸುವ ರಾಜಕೀಯ ಸಾಮರ್ಥ್ಯವೂ ಇರಲಿಲ್ಲ. ರಾತ್ವಾಗಳು ಮಿತಭಾಷಿಗಳು ಮತ್ತು ಸುಳ್ಳುಹೇಳುವವರಲ್ಲ ಎನ್ನುವುದನ್ನು ಮನಸ್ಸಿನಲ್ಲಿಟ್ಟು ಕೊಳ್ಳಬೇಕು. ಪೋಲಿಸ್ ಹೇಳಿಕೆ ಪ್ರಕಾರ ರಾತ್ವಾಗಳು ಕೊಲೆ ಮಾಡಿದರೆ ತಾವೇ ಠಾಣೆಗೆ ಬಂದು ತಮ್ಮ ಅಪರಾಧವನ್ನು ಒಪ್ಪಿಕೊಳ್ಳುತ್ತಾರೆ. ಹಣದ ಆಮಿಷದಿಂದ ರಾತ್ವಾಗಳು ಈ ಕೆಲಸ ಮಾಡಿದ್ದಾರೆ.

••• ••• •••

ಬುಡಕಟ್ಟು ದಂಗೆಯನ್ನು ಸಂಘಟಿಸಿದವರು ಲೇವಾದೇವಿಗಾರರು. ಇದನ್ನು ಸ್ಥಾಪಿಸಲು ಬೇಕಾದ ಪುರಾವೆಗಳು ನಿಧಾನ ದೊರೆಯುತ್ತಿವೆ. ಸರ್ಕಾರ ತೆಗೆದುಕೊಂಡ ಯಾವುದೇ ಪರಿಹಾರಕ್ರಮ ಕೇವಲ ಬಾಹ್ಯ ಆಡಂಬರ. ಇದು ಬಡಪಾಯಿ ದಂಗೆಕೋರರ ಮೇಲೆ ಕಳ್ಳತನದ ಆರೋಪಹೊರಿಸಿ ಕೇಸನ್ನು ದಾಖಲು ಮಾಡುವುದರಲ್ಲಿ ಪರ್ಯವಸಾನ ವಾಗುತ್ತದೆ.

ಹತ್ತೊಂಬತ್ತನೆ ಶತಮಾನದಲ್ಲಿ ಪಂಚಮಹಲ್‌ನ ಸಾಹುಕಾರರ ಪಾತ್ರದ ಕುರಿತು ಅತ್ಯುತ್ತಮವಾದ ಅಧ್ಯಯನಗಳು ದೊರೆಯುತ್ತವೆ. ಮತ್ತು ರಾಜಾಸ್ತಾನದ ಸಿರೋಹಿ ಜಿಲ್ಲೆಯಲ್ಲಿ ಉಪ್ಪಿನ ವ್ಯಾಪಾರದ ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳಲು ಬುಡಕಟ್ಟು ಜನಾಂಗದ ಪ್ರತಿರೋಧವನ್ನು ಹೇಗೆ ಸೃಷ್ಟಿಸಿದರು ಎನ್ನುವುದರ ಅಧ್ಯಯನವೂ ಲಭ್ಯವಿದೆ. ಈ ಅಧ್ಯಯನಗಳ ಆಧಾರದಿಂದ ಪೂರ್ವ ಭಾರತ ಶತಶತಮಾನಗಳಿಂದ ಲೇವಾದೇವಿಗಾರರ ದಾಸ್ಯದಲ್ಲಿತ್ತು ಎಂದು ವಿಶ್ವಾಸದಿಂದ ಹೇಳಬಹುದು.

ದೊಡ್ಡ ಮೊತ್ತದ ಹಣವನ್ನು ಪಾವತಿಸುವ ಯಾವುದೇ ಅನಿರೀಕ್ಷಿತ ಘಟನೆ ಗಳನ್ನು ಎದುರಿಸುವ ಬುಡಕಟ್ಟು ಜನರ ಸಾಮರ್ಥ್ಯ ಗಣನೀಯವಾಗಿ ಇಳಿದಿರುವುದಕ್ಕೆ ಅವರು ಅರಣ್ಯದ ಮೇಲಿನ ಸಾರ್ವಭೌಮತ್ವವನ್ನು ಕಳೆದುಕೊಂಡಿರು ವುದು ಕಾರಣ. ಅವರ ಜೀವನೋಪಾಯಕ್ಕೆ ಉಳಿದಿರುವುದು ಕೇವಲ ತುಂಡು ಭೂಮಿ ಮಾತ್ರ. ಕೃಷಿಗೆ



ಲಭ್ಯವಿರುವ ಭೂಮಿಯ ಪ್ರಮಾಣ ತುಂಡಾಗುತ್ತಾ ಸಾಗಿದೆ. ಇದು ಭೂ ದಾಖಲೆಗಳಲ್ಲಿ ನಮೂದಾಗಿಲ್ಲದಿರುವುದು ಸ್ಪಷ್ಟ. ಮಳೆ ಆಧಾರಿತ ಕೃಷಿಯಲ್ಲಿ ಬುಡಕಟ್ಟು ಜನಾಂಗ ಕೇವಲ ಜೀವನಾವಶ್ಯಕ ಪ್ರಮಾಣದ ಧಾನ್ಯವನ್ನು ಮಾತ್ರ ಬೆಳೆಯುವುದು ಸಾಧ್ಯ. ಮಳೆ ಕೊರತೆ ಸಂಭವಿಸಿದಾಗ ಋಣಬಾಧೆಗೆ ಒಳಗಾಗಬೇಕಾಗುತ್ತದೆ.

ಬುಡಕಟ್ಟು ಪ್ರದೇಶಗಳಲ್ಲಿ ಬ್ಯಾಂಕಿನ ಕಾರ್ಯಾಚರಣೆ ಅವಮಾನಕಾರಿ ಎನಿಸುವಷ್ಟು ಈ ಜನರ ವಿರುದ್ಧವಿದೆ. ಪ್ರಾದೇಶಿಕ ವಿಸ್ತೀರ್ಣಕ್ಕೆ ಸಮನಾದ ಬ್ಯಾಂಕ್ ಶಾಖೆಗಳಿಲ್ಲ. ನಬಾರ್ಡ್‌ನ ಸ್ಪಷ್ಟ ನಿರ್ದೇಶನವಿದ್ದರೂ ಅಧಿಕಾರಿಗಳು ಬುಡಕಟ್ಟು ಜನರ ಅಗತ್ಯವನ್ನು ಪೂರೈಸುತ್ತಿಲ್ಲ, ಅವರ ಬಗ್ಗೆ ಕಾಳಜಿಯಿಲ್ಲ. ಬ್ಯಾಂಕ್ ಅಧಿಕಾರಿ ಬುಡಕಟ್ಟು ಜನರ ಜೊತೆ ಸಂಭಾಷಣೆ ಮಾಡಿದರೆ ಅದು ಅವರ ಅದೃಷ್ಟವೇ ಸರಿ. ಬುಡಕಟ್ಟು ವ್ಯಕ್ತಿ ಬ್ಯಾಂಕ್ ಪ್ರವೇಶಿಸಿದಾಗ ಅವಮಾನವಾಗದೆ ಇರುವುದು ಅಪರೂಪ.

ಬ್ಯಾಂಕ್ ಬಯಸುವ ದಾಖಲೆ ಪತ್ರಗಳನ್ನು ಒದಗಿಸುವುದು ಬುಡಕಟ್ಟು ಜನರ ಸಾಮರ್ಥ್ಯಕ್ಕೆ ಮೀರಿದ್ದು. ಖಾಸಗಿ ಲೇವಾದೇವಿ ಮಾಡುವವ ಯಾವುದೆ ದಾಖಲೆಯನ್ನು ಬಯಸುವುದಿಲ್ಲ. ಆತನಿಗೆ ಎಲ್ಲ ಪರಿಚಯ ಹತ್ತಿರದಿಂದ ಇರುತ್ತದೆ. ಹವಾಮಾನ ವಿಫಲವಾದಾಗ ಪಾವತಿ ಷರತ್ತನ್ನು ಅಗತ್ಯವಿದ್ದ ಹಾಗೆ ಬದಲಾಯಿಸಿ ಕೊಳ್ಳುತ್ತಾನೆ. ಈ ಅನುಕೂಲಗಳಿಗೆ ಬದಲಾಗಿ ಲೇವಾದೇವಿ ಮಾಡುವವ ಶೇ. ೭೦ರಿಂದ ಶೇ ೧೪೪ರ ಬಡ್ಡಿಯನ್ನು ವಿಧಿಸುತ್ತಾನೆ. ಮೊದಲ ಮೂರು ತಿಂಗಳ ಬಡ್ಡಿಯನ್ನು ಅಸಲಿನಲ್ಲಿಯೆ ಮುರಿದುಕೊಳ್ಳುತ್ತಾನೆ. ಶೇ. ೧೨೦ ಬಡ್ಡಿಯಾದರೆ ನೂರು ರೂ. ಸಾಲ ತೆಗೆದುಕೊಂಡವನಿಗೆ ಸಿಗುವುದು ಕೇವಲ ರೂ. ೭೦ ಮಾತ್ರ.

ಸಾಲವನ್ನು ನಗದಾಗಿ ತೀರಿಸಬೇಕಾಗಿಲ್ಲ. ಆಹಾರಧಾನ್ಯ, ಅರಣ್ಯೋತ್ಪನ್ನ ಅಥವಾ ನಾಟಾ ಮುಂತಾದವುಗಳನ್ನು ಸ್ಥಳೀಯ ಮಾರುಕಟ್ಟೆ ಬೆಲೆಗನುಗುಣವಾಗಿ ಲೇವಾದೇವಿ ಮಾಡುವವ ಒಪ್ಪಿಕೊಳ್ಳುತ್ತಾನೆ. ಸಾಲ ಮರುಪಾವತಿಗೆ ಅಗತ್ಯವಿರುವ ಪ್ರಮಾಣದ ಆಹಾರಧಾನ್ಯ ಇಲ್ಲದೆ ಇದ್ದಾಗ ಮತ್ತೊಬ್ಬ ಲೇವಾದೇವಿ ವ್ಯಕ್ತಿಯಿಂದ ಸಾಲ ಪಡೆದು ಮೊದಲನೆ ಸಾಲವನ್ನು ತೀರಿಸುತ್ತಾನೆ. ಎರಡು ಶತಮಾನಗಳ ವ್ಯವಹಾರ ದಿಂದಾಗಿ ಲೇವಾದೇವಿ ಮಾಡುವವರು ಊಹೆಗೂ ಮೀರಿದ ಸಂಪತ್ತನ್ನು ಗಳಿಸಿದ್ದಾರೆ. ಮತ್ತು ಬುಡಕಟ್ಟು ಜನ ತೀರಿಸಲಾರದ ಋಣಬಾಧೆಯಲ್ಲಿ ಬಿದ್ದಿದ್ದಾರೆ. ತೇಜಗಢ ಅಥವಾ ಪಾನವಾಡದಲ್ಲಿ ವಾಸಿಸುವ ಲೇವಾದೇವಿ ವ್ಯಕ್ತಿಗಳನ್ನು ಪ್ರತಿವಾರ ಬುಡಕಟ್ಟು ಜನ ಸಂಧಿಸಿ ಶುಭಕೋರುತ್ತಾರೆ. ಇದರ ಮೂಲಕ ವಿಶ್ವಾಸ ಹೆಚ್ಚುತ್ತದೆ ಎನ್ನುವುದು ಬಡಪಾಯಿಗಳ ನಂಬಿಕೆ.

ಸಾಹುಕಾರರು ಮತ ಬ್ಯಾಂಕನ್ನು ಹತೋಟಿಯಲ್ಲಿಟ್ಟುಕೊಂಡಿರುವುದರಿಂದ

ರಾಜಕಾರಣಿಗಳು ತಮ್ಮ ಯಶಸ್ಸಿಗೆ ಹೆಚ್ಚು ಇವರನ್ನೆ ನಂಬಿದ್ದಾರೆ. ಲೇವಾದೇವಿಗಾರರ ಆಸಕ್ತಿಯನ್ನು ರಕ್ಷಿಸದಿದ್ದರೆ ಯಾವ ರಾಜಕಾರಣಿಯೂ ಉಳಿಯಲಾರ. ಚುನಾಯಿತ ವ್ಯಕ್ತಿ ಬುಡಕಟ್ಟು ಜನಾಂಗದವನಾಗಿದ್ದರೂ ಲೇವಾದೇವಿ ಮಾಡುವವರ ಹಿತಕ್ಕೆ ಧಕ್ಕೆಯಾಗುವ ಯಾವುದೆ ಅಭಿವೃದ್ಧಿ ಕಾಮಗಾರಿಗಳನ್ನು ಯೋಜಿಸುವಂತಿಲ್ಲ. ಮೇಲ್ನೋಟಕ್ಕೆ ತುಂಬಾ ಆಕರ್ಷಕವಾದ ಅಭಿವೃದ್ಧಿ ಚಟುವಟಿಕೆಗಳು ಬುಡಕಟ್ಟು ಪ್ರದೇಶದಲ್ಲಿ ನಡೆದಂತೆ ಕಂಡರೂ ಆರ್ಥಿಕ ಸಬಲತೆ ಇವರಿಗೆ ದೊರೆತಿಲ್ಲ.

ಮೂಲಭೂತ ಅಗತ್ಯಗಳ ಕೊರತೆ, ನಗದಿನ ತೀವ್ರ ಅಭಾವ, ವ್ಯಾಪಕವಾದ ನಿರುದ್ಯೋಗ, ಅನಕ್ಷರತೆ ಮತ್ತು ತಾಂತ್ರಿಕ ಹಿಂದುಳಿದಿರುವಿಕೆ, ಇತರೆ ವಲಯಗಳಲ್ಲಿ ಅಭಿವೃದ್ಧಿಗೆ ಪೂರಕವಲ್ಲವಾದರೂ, ಖಾಸಗಿ ಲೇವಾದೇವಿಗಾರರ ಅಭಿವೃದ್ಧಿಗೆ ಇದು ಕನಿಷ್ಟ ಅಗತ್ಯ. ಬುಡಕಟ್ಟು ಜಿಲ್ಲೆಗಳಲ್ಲಿ ಮೇಲಿನ ಸನ್ನಿವೇಶದಲ್ಲಿ ತಾರತಮ್ಯತೆ ಇದ್ದರೂ, ಸಾರ್ವತ್ರಿಕವಾಗಿ ಅನಭಿವೃದ್ಧಿ ಮತ್ತು ಋಣಬಾಧೆ ಇಲ್ಲಿ ಸಾಮಾನ್ಯ ಲಕ್ಷಣ.

ಬಿಲ್ಲು, ಬಾಣ ಮತ್ತು ಬಂದೂಕುಗಳನ್ನು ಬುಡಕಟ್ಟುಜನ ದಂಗೆಯ ಸಂದರ್ಭದಲ್ಲಿ ಪೋಲಿಸರ ವಿರುದ್ಧ ಬಳಸಿದ್ದನ್ನು ಅವರ ಋಣಬಾಧೆಯ ಮೂಲಕ ಮಾತ್ರ ವಿವರಿಸಲು ಬರುವುದಿಲ್ಲ. ಅಲ್ಲದೆ ಮುಸ್ಲಿಂ ಪೈಪೋಟಿದಾರರನ್ನು ಮುಗಿಸುವಂತೆ ಬಲವಂತಮಾಡಿದಂತೆಯೂ ಕಾಣುವುದಿಲ್ಲ. ರಾತ್ವಾ ಬುಡಕಟ್ಟು ಜನರ ಗುಂಪು ಕಾದಾಟಕ್ಕೆ ಬೇರೆ ಬೇರುಗಳಿವೆ. ಇದನ್ನು ವಿಶ್ಲೇಷಿಸಲು ಪಾನವಾಡದ ಸಾಮಾಜಿಕ ವ್ಯವಸ್ಥೆಯನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ. ಮತ್ತು ಈ ಜನಾಂಗ ಆಧುನಿಕತೆಯೊಂದಿಗೆ ಮುಖಾಮುಖಿಯಾಗಿದ್ದರಿಂದ ವಿಶೇಷವಾದ ಅತೃಪ್ತಿ ಹೇಗೆ ಸೃಷ್ಟಿಯಾಯಿತು ಎನ್ನುವುದನ್ನೂ ಪರಿಶೀಲಿಸಬೇಕಾಗುತ್ತದೆ.

ವಡೋದರ ಜಿಲ್ಲೆಯ ಪಾನವಾಡ ಬುಡಕಟ್ಟು ಜನಾಂಗದ ಪಟ್ಟಣಗಳು ಮಧ್ಯಪ್ರದೇಶಕ್ಕೆ ಸಮೀಪವಾಗಿವೆ. ರಾತ್ವಾ ಜನಾಂಗವನ್ನು ಭಾಷೆ, ಸಂಪ್ರದಾಯದಲ್ಲಿ ಹೋಲುವ ಮತ್ತೊಂದು ಭಾಗದಲ್ಲಿರುವ ಭಿಲ್ ಜನಾಂಗವನ್ನು ಬ್ರಿಟಿಷರ ಕಾಲದಲ್ಲಿ ಕ್ರಿಮಿನಲ್ ಬುಡಕಟ್ಟು ಕಾಯ್ದೆ (೧೮೭೧) ಯನ್ವಯ ಪಟ್ಟಿ ಮಾಡಲಾಗಿತ್ತು. ಈ ಜನಾಂಗದವರು ಹಿಂದೆ ಇಂದೋರ್ ಮತ್ತು ಧಾರ್ ರಾಜರಿಗೆ ಸೈನಿಕರಾಗಿ ಕೆಲಸ ಮಾಡುತ್ತಿದ್ದರು. ೧೯೫೨ರಲ್ಲಿ ಪಟ್ಟಿಯಿಂದ ಹೊರಬಂದ ನಂತರ ಬೇರೆ ದಾರಿ ಕಾಣದೆ ಆಗಾಗ ಸಣ್ಣಪುಟ್ಟ ಅಪರಾಧಗಳಲ್ಲಿ ಪಾಲ್ಗೊಳ್ಳುವಂತಾಯಿತು. ಗಡಿಯಾಚೆಯಿಂದ ಭಿಲ್ ಜನಾಂಗದವರಿಂದ ಆಗಬಹುದಾದ ವಿಪತ್ತನ್ನು ಗಮನದಲ್ಲಿಟ್ಟುಕೊಂಡು ಪಾನವಾಡದ ಸುತ್ತಮುತ್ತಲಿನ ಗ್ರಾಮಗಳು ದೊಡ್ಡ ಪ್ರಮಾಣದಲ್ಲಿ ಗುಡ್ಡದ ತಪ್ಪಲಿನಲ್ಲಿರುವ ಅರಣ್ಯವನ್ನು ನಾಶಪಡಿಸಿದರು. ಬಹುದೂರದಿಂದಲೆ ಭಿಲ್ ಜನಾಂಗ



ದವರ ಆಕ್ರಮಣವನ್ನು ವೀಕ್ಷಿಸಿ ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳ ಬಹುದೆಂದು ಇವರ ಭಾವನೆ. ಅರಣ್ಯ ಕಾರ್ಮಿಕ ಸಂಘವನ್ನು ಹತೋಟಿಯಲ್ಲಿಟ್ಟುಕೊಂಡು ಛೋಟಾ ಉದೇಪುರದ ನಾಟಾ ವ್ಯಾಪಾರಿಗಳು ಈ ಅರಣ್ಯನಾಶವನ್ನು ಪ್ರೋತ್ಸಾಹಿಸಿದರು. ಅರಣ್ಯನಾಶದ ಎಲ್ಲಾ ಅನಾಹುತಗಳನ್ನು ಪಾನವಾಡ ಪ್ರದೇಶ ಎದುರಿಸಿತು. ಈ ಪ್ರದೇಶದ ಕೃಷಿ ಆದಾಯ ಇತರೆಡೆಗಿಂತ ತುಂಬಾ ಕಡಿಮೆ. ಇದರಿಂದಾಗಿ ಇವರ ಒಲವು ಶಿಕ್ಷಣದತ್ತ ತಿರುಗಿತು. ಶಿಕ್ಷಣ ಸಂಸ್ಥೆಗಳ ಕೊರತೆಯಿಂದ ಯುವಕರು ಪ್ರೌಢಶಾಲೆಯ ಹಂತದಲ್ಲೆ ವಿದ್ಯಾಭ್ಯಾಸಕ್ಕೆ ವಿದಾಯ ಹೇಳಬೇಕಾಯಿತು. ಕೆಲವರು ಸಣ್ಣ ಪುಟ್ಟ ನೌಕರಿ ಹಿಡಿದರು. ಮತ್ತೆ ಕೆಲವರು ನಿರುದ್ಯೋಗಿಗಳಾದರು. ಕೆಲವರು ಉದ್ಯೋಗಕ್ಕಾಗಿ ಸೂರತ್, ಕಛ್‌ಗಳಿಗೆ ವಲಸೆ ಹೋದರು.

ಗುಜರಾತ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್‌ನ ಒಂದು ಯೋಜನೆ ಕಾಡಿಪಾಣಿಯ ಪ್ರದೇಶದ ಸುತ್ತಮುತ್ತಲಿನ ಯುವಕರಿಗೆ ಉದ್ಯೋಗವನ್ನು ಒದಗಿಸಿತ್ತು. ಆದರೆ ಕಾನೂನಿನ ತೊಡಕುಗಳಿಂದಾಗಿ ಉದ್ಯೋಗ ಸೃಷ್ಟಿ ಕಡಿಮೆಯಾಯಿತು. ನಿರುದ್ಯೋಗಿ ಯುವಕರು ಡ್ರಗ್ಸ್, ಕಳ್ಳಸಾಗಾಣಿಕೆ, ಸಣ್ಣಪುಟ್ಟ ಅಸ್ತ್ರಗಳ ಮಾರಾಟದಲ್ಲಿ ತೊಡಗಿಕೊಂಡರು. ಹೀಗೆ ಸುಲಭದಲ್ಲಿ ಹಣ ಮಾಡಿಕೊಂಡವರು ಲೇವಾದೇವಿ ವ್ಯವಹಾರವನ್ನು ಪ್ರಾರಂಭಿಸಿದರು. ಹಿಂದೂ ಹೆಸರನ್ನು, ಗುಣಲಕ್ಷಣಗಳನ್ನು ಬೆಳೆಸಿಕೊಂಡರು. ಇಂಥವರು ಹಿಂದುತ್ವ ಚಳುವಳಿಯನ್ನು ಮುಂದುವರಿಸಿಕೊಂಡು ಬಂದಂತೆ ಕಾಣುತ್ತದೆ.

••• ••• •••

ಮೈಕ್ರೊ ಕ್ರೆಡಿಟ್ ಕಾರ್ಯಕ್ರಮ ಪ್ರಾರಂಭವಾದಾಗ ನಾವು ೧೯೯೯ರಲ್ಲಿ ಪಾನವಾಡದ ಸುತ್ತಮುತ್ತಲಿನ ಗ್ರಾಮಗಳಲ್ಲಿ ೭೬ ಸ್ವಸಹಾಯ ಗುಂಪುಗಳನ್ನು ಪ್ರಾರಂಭಿಸಿದೆವು. ಮೂರು ವರ್ಷಕಾಲ ಕ್ಷಾಮದ ಪರಿಸ್ಥಿತಿಯಿದ್ದಾಗ ಇತರೆ ಗ್ರಾಮಗಳ ಗುಂಪುಗಳು ಸಾಲ ಮರುಪಾವತಿಗೆ ಹೆಣಗಾಡುತ್ತಿದ್ದ ಸಂದರ್ಭದಲ್ಲಿ ಒಂದೇ ದಿನ ಈ ಗುಂಪುಗಳು ನೋಟಿನ ಕಂತೆಯನ್ನು ತಂದು ಸಾಲ ಮರುಪಾವತಿ ಮಾಡಿದವು. ಹಣವನ್ನು ತಾತ್ವಿಕವಾಗಿ ಯಾವುದೇ ಗುಂಪು ಇತರೆ ಬ್ಯಾಂಕಿನಿಂದ ತರುವಂತಿರಲಿಲ್ಲ. ಪರಿಶೀಲಿಸಲಾಗಿ ಈ ಹಣ ಲೇವಾದೇವಿಗಾರರಿಂದ ಪಡೆದದ್ದು ಎಂದು ತಿಳಿದು ಬಂದಿತು. ಗುಂಪಿನ ನಾಯಕನಿಗೆ ಸಾಲದ ರೂಪದಲ್ಲಿ ಕೊಡಲ್ಪಟ್ಟಿತ್ತು. ಮೈಕ್ರೊ ಕ್ರೆಡಿಟ್ ಕಾರ್ಯಕ್ರಮ ನಾಶಪಡಿಸುವ ಹುನ್ನಾರ ಕಂಡುಬಂದಿತು. ಪಾನವಾಡದ ಬುಡಕಟ್ಟು ಜನ ಬ್ಯಾಂಕುಗಳ ಶೇ. ೧೨ರ ಬಡ್ಡಿದರದಿಂದ ಶೇ. ೧೨೦ ರ ಬಡ್ಡಿದರಕ್ಕೆ ವಾಪಾಸ್ಸಾಗಲು ತಯಾರಾಗಿದ್ದರು. ಯುವ ನವಹಿಂದು, ಅಲ್ಪಶಿಕ್ಷಿತ, ನಿರುದ್ಯೋಗಿ, ವಿವೇಚನಾರಹಿತ ಪೀಳಿಗೆಗೆ

ಹಿಂದು ಲೇವಾದೇವಿಗಾರರು ಆದರ್ಶ ಪ್ರಾಯರಾದರು. ಡ್ರಗ್ಸ್ ಮತ್ತು ಲೈಸೆನ್ಸ್ ಇಲ್ಲದ ಬಂದೂಕುಗಳು ಬದುಕಿನ ದಾರಿಯಾದವು.

ಹಿಂಸಾಚಾರದ ಅಂತಿಮ ಮೂಲ ವ್ಯಕ್ತಿಯ ಮನಸ್ಸೆ ವಿನಹ ಆತನ ಬಳಿಯಿರುವ ಶಸ್ತ್ರಾಸ್ತ್ರಗಳಲ್ಲ. ಬುಡಕಟ್ಟು ಜನಾಂಗದ ಮನಃಸ್ಥಿತಿ ಊಳಿಗಮಾನ್ಯವಾದದ್ದಲ್ಲ. ಇದು ಖಂಡಿತ ಮಧ್ಯಕಾಲೀನ ಪದ್ಧತಿಗೆ ಸಮನಾದದ್ದು. ಇವರು ರಾಜ್ಯಕ್ಕೆ ತಮ್ಮ ನಿಷ್ಠೆಯನ್ನು ಬದಲಾಯಿಸಿಕೊಳ್ಳುವ ಮನೋಧರ್ಮವನ್ನು ಹೊಂದಿದ್ದಾರೆ. ಬುಡಕಟ್ಟು ಸಾರ್ವಭೌಮತ್ವವನ್ನು, ಪರಿಶುದ್ಧತೆಯನ್ನು ಕಾಪಾಡಿಕೊಳ್ಳಲು ಮಹಿಳೆಯರ ಬಗೆಗಿನ ಇವರ ಮನೋಭಾವ ಬುಡಕಟ್ಟು ಜನಾಂಗದವರಲ್ಲಿ ಅವರ ಪಾವಿತ್ರ್ಯವನ್ನು ಹೊರಗಿನವರಿಂದ ರಕ್ಷಿಸಿಕೊಳ್ಳುವ ಸೀಮಿತ ಹೆದರಿಕೆಯಿಂದ ನಿರ್ದೇಶಿಸಲ್ಪಟ್ಟಿದೆ. ಒಂದು ಬುಡಕಟ್ಟು ಜನಾಂಗದಿಂದ ಹೊರಗೆ ಅವರ ಹೆಣ್ಣು ಮಕ್ಕಳು ಮದುವೆಯಾಗ ಬಯಸಿದರೆ ರಕ್ತಪಾತವಾಗುತ್ತದೆ. ಆ ಜನಾಂಗದ ಗಂಡುಮಕ್ಕಳ ಹೊರತಾಗಿ ಬೇರೆಯವರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಹೆಣ್ಣುಮಕ್ಕಳಿಗಿಲ್ಲ. ವೇಗವಾದ ಆರ್ಥಿಕ ಸ್ಥಿತ್ಯಂತರಗಳಿಂದಾಗಿ ಸಾಮಾಜಿಕ ಕಟ್ಟುಪಾಡು ಶಿಥಿಲಗೊಳ್ಳುತ್ತಿದೆ.

ಪಾನವಾಡ, ಛೋಟಾ ಉದೇಪುರ, ಪಂಚಮಹಲ್ ಪ್ರದೇಶಗಳಲ್ಲಿ ಮಹಿಳೆಯರ ಸ್ಥಾನಮಾನದ ವಿಷಯ ಅತ್ಯಂತ ದೊಡ್ಡ ಪ್ರಮಾಣದ ಸಾಮಾಜಿಕ ಸಂಕ್ರಮಣಾವಸ್ಥೆಯನ್ನು ತಲುಪಿದೆ. ವಧುದಕ್ಷಿಣೆ ಪದ್ಧತಿ ಜಾರಿಯಲ್ಲಿದೆ. ಇದರ ಪ್ರಮಾಣ ಇಂದು ಅರುವತ್ತು ಸಾವಿರಕ್ಕೇರಿದೆ. ವಧೂವರರಿಬ್ಬರೂ ಪಟ್ಟಣಕ್ಕೆ ತೆರಳಿ ಅನೇಕ ವರ್ಷಗಳವರೆಗೆ ಕೂಲಿಮಾಡಿ ಸಂಬಂಧಿಕರು ಮತ್ತು ಲೇವಾದೇವಿ ಮಾಡುವವರಿಂದ ಪಡೆದ ಸಾಲವನ್ನು ತೀರಿಸಬೇಕಾಗುತ್ತದೆ. ವಲಸೆ ಬರುವ ಕೂಲಿಕಾರ್ಮಿಕ ಮಹಿಳೆಯರದ್ದು ದಯನೀಯ ಸ್ಥಿತಿ. ಮೇಸ್ತ್ರಿಗಳು ಮತ್ತು ಪಟ್ಟಣಿಗರಿಂದ ಇವರು ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಾರೆ. ಹೆಣ್ಣುಮಕ್ಕಳನ್ನು ಮಾರಾಟಮಾಡಿ ಹಿಂದೂ ಮತದವರಿಂದ ಪಂಚಮಹಲಿನ ಬುಡಕಟ್ಟು ಜನ ಆಕರ್ಷಕವಾದ ಬಹುಮಾನಗಳನ್ನು ಪಡೆಯು ತ್ತಿದ್ದಾರೆ. ಮಧ್ಯಪ್ರದೇಶದ ಮಹಿಳೆಯರ ಸ್ಥಿತಿ ಇನ್ನೂ ಚಿಂತಾಜನಕ. ವೇಶ್ಯಾವೃತ್ತಿಗೆ ಯುವತಿಯರನ್ನು ತಳ್ಳುವುದು ಬುಡಕಟ್ಟು ಜನಾಂಗದಲ್ಲಿ ಸಾಮಾನ್ಯವಾಗಿದೆ. ಪಾನವಾಡದಲ್ಲಿ ಯುವತಿಯರ ಅಪಹರಣದ ಪ್ರಮಾಣ ಹೆಚ್ಚುತ್ತಿದೆ. ೫೦ ಬುಡಕಟ್ಟು ಮಹಿಳೆಯರ ಮೇಲೆ ಮುಸ್ಲಿಮರು ಅತ್ಯಾಚಾರ ಮಾಡಿದ್ದಾರೆ ಎನ್ನುವ ವದಂತಿಯಾದಾಗ ಬುಡಕಟ್ಟು ಜನಾಂಗ ಹಿಂಸಾಚಾರಕ್ಕೆ ಇಳಿಯದಿದ್ದರೆ ಅದೊಂದು ಆಶ್ಚರ್ಯಕರ ಘಟನೆಯಾಗುತ್ತಿತ್ತು. ಇದರಿಂದಾಗಿ ತೇಜಗಢಕ್ಕಿಂತ ಪಾನವಾಡದಲ್ಲಿ ಹಿಂಸಾಚಾರ ಅಧಿಕವಾಗಿದೆ.



••• ••• •••

ಮುಸ್ಲಿಂ ಆಸ್ತಿಯ ಮೇಲಿನ ಬುಡಕಟ್ಟು ಜನರ ಆಕ್ರಮಣ ಹಿಂದುತ್ವವಾದದ ಜಯಭೇರಿಯೇ? ಬುಡಕಟ್ಟು ಸಂಪ್ರದಾಯದ ಬಗೆಗೆ ಪರಿಪೂರ್ಣ ಜ್ಞಾನ ಅಥವಾ ಮಾಹಿತಿ ಇಲ್ಲದವರು ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರ ನೀಡುತ್ತಾರೆ. ಮೇಲ್ನೋಟಕ್ಕೆ ಬುಡಕಟ್ಟು ಜನ ಬಿಜೆಪಿಯನ್ನು ಬೆಂಬಲಿಸುತ್ತಾರೆ ಎನಿಸುತ್ತದೆ. ಆದರೆ ಬುಡಕಟ್ಟು ಜನಾಂಗ ಮುಸ್ಲಿಮರೂ ಅಲ್ಲ, ಹಿಂದೂಗಳೂ ಅಲ್ಲ ಎನ್ನುವುದು ನಿಜವಾದ ಅಂಶ. ಭಾರತದಲ್ಲಿ ಎರಡು ಬಗೆಯ ಜನಾಂಗಗಳಿವೆ – ಜಾತಿ ಮತ್ತು ಧರ್ಮವನ್ನು ಒಪ್ಪಿಕೊಂಡಿರುವವರು ಮತ್ತು ಒಪ್ಪದೆ ಇರುವವರು. ಧರ್ಮವನ್ನು ಆಶ್ರಯಿಸಿರು ವವರು ಅಥವಾ ಒಂದು ಮತದ ಸದಸ್ಯರು ಒಂದು ವರ್ಗವಾದರೆ ಮತ್ತೊಂದು ಬುಡಕಟ್ಟು ವರ್ಗ. ಎಲ್ಲಾ ಅಧಿಕೃತ ಅರ್ಜಿ ನಮೂನೆಗಳಲ್ಲಿ ಬುಡಕಟ್ಟು ಹಿಂದೂ, ಬುಡಕಟ್ಟು ಮುಸ್ಲಿಂ ಮತ್ತು ಬುಡಕಟ್ಟು ಕ್ರಿಶ್ಚಿಯನ್ ಎಂದು ಬರೆಯುವುದರಿಂದ ಬಹುಮಂದಿ ಬುಡಕಟ್ಟು ಜನರು ತಾವು ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರೆಂದು ನಂಬಲು ಪ್ರಾರಂಭಿಸಿದ್ದಾರೆ.

ಬುಡಕಟ್ಟು ಜನಾಂಗ ತಾವು ಹಿಂದುಗಳು ಎಂದು ಹಕ್ಕು ಸ್ಥಾಪಿಸಿದರೆ ಯಾವುದೇ ಹಿಂದು ತನ್ನನ್ನು ಬುಡಕಟ್ಟು ಜನಾಂಗ ಎನ್ನುತ್ತಾನಾ? ಆದುದರಿಂದ ಬುಡಕಟ್ಟು ಜನರ ದೃಷ್ಟಿಯಿಂದ 'ಬುಡಕಟ್ಟು' ಮತ್ತು 'ಹಿಂದೂ' ಬೇರೆ ಬೇರೆ ಸಾಮಾಜಿಕ ಪಂಗಡವಲ್ಲ ವಾದರೂ ಹಿಂದೂಗಳ ದೃಷ್ಟಿಯಿಂದ ಇವೆರಡೂ ಬೇರೆ. ಕಳೆದ ೫೦ ವರ್ಷಗಳ ಭಾರತದ ರಾಜಕೀಯ ಉಪದೇಶ ಒಂದೇ ಉಸಿರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಎಂದು ಮಾತನಾಡುತ್ತಿರುವುದು ಬುಡಕಟ್ಟು ಜನಾಂಗ ತಮ್ಮನ್ನು ಗುರುತಿಸಿಕೊಳ್ಳುವಲ್ಲಿ ಬದಲಾವಣೆಯಾಗಿದ್ದಕ್ಕೆ ಕಾರಣ.

ವಾಸ್ತವಿಕ ಧಾರ್ಮಿಕ ಆಚರಣೆಗಳನ್ನು, ಬೌದ್ಧಿಕ ಅಂತರವನ್ನು ಮತ್ತು ನಂಬಿಕೆ ವ್ಯವಸ್ಥೆಯನ್ನು ಪರಿಶೀಲಿಸಿದಾಗ ಬುಡಕಟ್ಟು ಮತ್ತು ಹಿಂದೂಗಳಲ್ಲಿ ಎದ್ದುಕಾಣುವ ವ್ಯತ್ಯಾಸ ಕಂಡುಬರುತ್ತದೆ; ಕೆಲವೆ ಅಂಶಗಳಲ್ಲಿ ಮಾತ್ರ ಏಕತೆ ಗೋಚರಿಸುತ್ತದೆ. ಉದಾಹರಣೆಗೆ ಬುಡಕಟ್ಟು ಜನರಲ್ಲಿ ಯೋಗ, ಸನ್ಯಾಸ, ವರ್ಣಗಳು ಮತ್ತು ಆಶ್ರಮ ಪರಿಭಾವನೆಗಳಿಲ್ಲ. ಹಲವು ಬುಡಕಟ್ಟು ಜನ ಕೆಲವು ಹಿಂದೂ ದೇವರನ್ನು ಪೂಜೆಗೆ ಒಪ್ಪಿಕೊಂಡರೂ, ಎಲ್ಲಾ ಹಿಂದೂ ದೇವರನ್ನು ಒಪ್ಪಿಕೊಳ್ಳುವುದಿಲ್ಲ. ಬುಡಕಟ್ಟು ಜನಾಂಗದ ದೇವರ ಮತ್ತು ರಾಕ್ಷಸರ ಕುರಿತ ಪುರಾಣಕಥೆಗಳು ಹಿಂದೂ ಪುರಾಣಕಥೆ ಗಳಿಗಿಂತ ಭಿನ್ನವಾಗಿವೆ. ಬುಡಕಟ್ಟು ಜನಾಂಗದ ರಾಮಾಯಣ ಮತ್ತು ಮಹಾಭಾರತ ಗಳು ಹಿಂದೂ ರಾಮಾಯಣ ಮಹಾಭಾರತಗಳಿಗಿಂತ ಸ್ಪಷ್ಟವಾದ ವ್ಯತ್ಯಾಸಗಳಿಂದ

ಕೂಡಿವೆ. ಹಿಂದೂ ಪುರೋಹಿತವರ್ಗ ಮತ್ತು ಬುಡಕಟ್ಟು ಪುರೋಹಿತವರ್ಗದ ಅಚರಣೆಗಳ ನಡುವೆ ಕೂಡ ಸ್ಪಷ್ಟ ವ್ಯತ್ಯಾಸಗಳಿವೆ.

ಬುಡಕಟ್ಟು ಜನಾಂಗವೆಲ್ಲ ಒಂದು ವಂಶ; ಅದು ಜಾತಿ ಆಧಾರದಲ್ಲಿ ವಿಭಜನೆಯಾಗುವುದಿಲ್ಲ. ಜಾತಿ ಎನ್ನುವ ಸಾಮಾಜಿಕ ಸಾಂಸ್ಥಿಕತೆಯ ಕ್ರಮಾನುಗತ ವ್ಯವಸ್ಥೆಯಲ್ಲಿ ನಿರ್ದಿಷ್ಟ ಕುಟುಂಬದಲ್ಲಿ ಆಗುವ ಆಕಸ್ಮಿಕ ಹುಟ್ಟು ಬಹಳ ಮುಖ್ಯವಾಗುತ್ತದೆ. ಬುಡಕಟ್ಟು ಜನಾಂಗದಲ್ಲಿ ಯಾವುದೆ ಬಗೆಯ ಸಾಮಾಜಿಕ ಕ್ರಮಾನುಗತ ವ್ಯವಸ್ಥೆ ಇರುವುದಿಲ್ಲ. ಹಿಂದು ಸಮಾಜದಲ್ಲಿ ಇದು ಬಹಳ ಮುಖ್ಯವಾದ ಅಂಶ. ಆದುದರಿಂದ ಭಾರತದಲ್ಲಿ ಸಾಮಾಜಿಕವಾಗಿ ದುರ್ಬಲ ವರ್ಗವನ್ನು ಗುರುತಿಸುವಾಗ ಪರಿಶಿಷ್ಟ ಜಾತಿಯನ್ನು ಪರಿಶಿಷ್ಟ ಬುಡಕಟ್ಟು ಜನಾಂಗದಿಂದ ಬೇರ್ಪಡಿಸಲಾಗಿದೆ.

ಭಾರತದ ಇತಿಹಾಸದಲ್ಲಿ ವಸಾಹತು ಆಡಳಿತದ ಪ್ರಾರಂಭದ ದಿನಗಳಲ್ಲಿ ಅಲ್ಪಾವಧಿಗೆ ಭಾರತದ ಎಲ್ಲಾ ಸಮುದಾಯವನ್ನು ಬುಡಕಟ್ಟು ಎಂದು ವಿವರಿಸಲಾಗುತ್ತಿತ್ತು. ಆದುದರಿಂದ ಪೋರ್ಚುಗೀಸ್ ಪ್ರವಾಸಿಗರು 'ಬುಡಕಟ್ಟು', 'ಜಾತಿ' ಪದಗಳನ್ನು ಪರ್ಯಾಯವಾಗಿ ಬಳಸಿದರು. ಆದರೆ ಲಾರ್ಡ್ ಡಾಲ್‌ಹೌಸಿಯ ಕಾಲದಲ್ಲಿ ಬ್ರಿಟಿಷ್ ವಸಾಹತು ಸರ್ಕಾರ ಬುಡಕಟ್ಟು ಮತ್ತು ಜಾತಿಗಳು ರಾಜ್ಯಕ್ಕೆ ವಿಭಿನ್ನವಾದ ಪ್ರತಿಕ್ರಿಯೆ ವ್ಯಕ್ತಪಡಿಸುವುದನ್ನು ಕಂಡುಕೊಂಡಿತು. ಜಾತಿ ರಾಜ್ಯ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲು ತಯಾರಿತ್ತು; ಬುಡಕಟ್ಟು ಜನಾಂಗ ಒಪ್ಪಿಕೊಳ್ಳಲು ತಯಾರಿರಲಿಲ್ಲ. ಆದುದರಿಂದ ಈ ಸರ್ಕಾರ ಎರಡು ಪಟ್ಟಿಯನ್ನು ತಯಾರಿಸಿತು. ಒಂದು ೧೮೭೧ರಲ್ಲಿ 'ಅಪರಾಧಿ ಬುಡಕಟ್ಟು' ಮತ್ತೊಂದು ೧೮೭೨ರಲ್ಲಿ 'ಬುಡಕಟ್ಟು'. ವಸಾಹತು ಕಾಲದ ನಂತರ ಬುಡಕಟ್ಟು ಪಟ್ಟಿಯನ್ನು ಸಾಮಾಜಿಕ ವ್ಯವಸ್ಥೆಗೆ ಉಪಯೋಗ ಎಂದು ಒಪ್ಪಿಕೊಂಡು, ಕಾನೂನುಬದ್ಧವಾಗಿಸಿ, ಅಪರಾಧಿ ಬುಡಕಟ್ಟು ಪಟ್ಟಿಯನ್ನು ಸ್ವತಂತ್ರಪಡಿಸಿ, ಅವನ್ನು ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ಪಂಗಡಗಳಲ್ಲಿ ಹಂಚಲಾಯಿತು.

••• ••• •••

ಇಲ್ಲಿ ಒಂದು ಸೂಕ್ತವಾದ ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ಯಾವುದೆ ಬುಡಕಟ್ಟು ವ್ಯಕ್ತಿ ಹಿಂದುತ್ವ ಪರಿಭಾವನೆಯಿಂದ ಆಕರ್ಷಿತನಾಗಲು ಕಾರಣವೇನು? ಈತನ ಸಂದರ್ಭದಲ್ಲಿ ಹಿಂದು ಜಾತಿಯ ತೆಕ್ಕೆಯಲ್ಲಿ ಬರುವುದೆಂದರೆ ಜಾತಿಯ ಕ್ರಮಾನುಗತ ವ್ಯವಸ್ಥೆಯಲ್ಲಿ ಆತ ಕೆಳಸ್ತರದಲ್ಲಿರುವುದನ್ನು ಸ್ವ ಇಚ್ಛೆಯಿಂದ ಒಪ್ಪಿಕೊಂಡಂತೆ. ಇದಕ್ಕೆ ಉತ್ತರಿಸುವ ಮೊದಲು ಹಿಂದುತ್ವದ ಅರ್ಥವನ್ನು ನೋಡಬೇಕು. ಅದನ್ನು ಪ್ರತಿಪಾದಿಸುವವರ ಪ್ರಕಾರ ಹಿಂದು ಎಂದರೆ ಹಿಂದುತ್ವ ಅಲ್ಲ; ಹಿಂದುವಿಗೆ ಹಿಂದುತ್ವ



ಎನ್ನುವುದು ಕ್ರಿಶ್ಚಿಯನ್‌ರಿಗೆ ಕ್ರಿಶ್ಚಿಯನ್ ಧರ್ಮ ಇದ್ದ ಹಾಗಲ್ಲ.

ಹಿಂದುತ್ವ ಪ್ರತಿಪಾದಕರ ಪ್ರಕಾರ ಭಾರತ ಹಿಂದೂ ರಾಷ್ಟ್ರ ಎನ್ನುವುದರೊಂದಿಗೆ ಹಿಂದುತ್ವದ ಅರ್ಥ ಸೇರಿಕೊಂಡಿದೆ. ಇದು ಯಾವುದೆ ಧಾರ್ಮಿಕ ತತ್ವವಲ್ಲ, ಅಥವಾ ಸಮಾಜಸುಧಾರಣಾ ಚಳುವಳಿಯಲ್ಲ. ಇದೊಂದು ಸಾಂಸ್ಕೃತಿಕ ಅಂಧ ದೇಶಾಭಿಮಾನವನ್ನು ಅವಲಂಬಿಸಿರುವ ರಾಜಕೀಯ ತತ್ವಶಾಸ್ತ್ರ. ಇದು ಹಿಂದೂ ಅಲ್ಲದ ಭಾರತೀಯರನ್ನು ಅಲ್ಪಸಂಖ್ಯಾತ ಸ್ಥಾನವನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸುತ್ತದೆ. ಮತ್ತು ಇವರ ಸುರಕ್ಷತೆ ಬಹುಸಂಖ್ಯಾತರ ದಯಾಭಿಕ್ಷೆಯನ್ನು ಅವಲಂಬಿಸಿರುತ್ತದೆ. ಈ ತತ್ವ ಹಿಂದುಗಳನ್ನು ಸಿದ್ಧಾಂತವಾದಿಗಳಾಗಿ ಎನ್ನುವುದಿಲ್ಲ. ಆದರೆ ಭಾರತೀಯ ಮುಸ್ಲಿಂ ಮತ್ತು ಕ್ರಿಶ್ಚಿಯನರನ್ನು ಮುಸ್ಲಿಂ ಅಥವಾ ಕ್ರಿಶ್ಚಿಯನ್ ಸಿದ್ಧಾಂತವಾದಿಗಳಾಗಬೇಡಿ ಎನ್ನುತ್ತದೆ.

ಹಿಂದುತ್ವದ ಅಂತರಾಳದಲ್ಲಿ ಬಹುಸಂಖ್ಯಾತರ ಒಳ್ಳೆಯದು ಅಲ್ಪಸಂಖ್ಯಾತರಿಗೂ ಒಳ್ಳೆಯದು ಎನ್ನುವುದು ಸಿದ್ಧಾಂತವಾಗಿದೆ. ಅದು ಅಲ್ಪಸಂಖ್ಯಾತರ ಹಕ್ಕನ್ನು ಮನ್ನಿಸುವುದೆಂದರೆ ಬಹುಸಂಖ್ಯಾತರ ರಾಜಕೀಯ ಪ್ರಭುತ್ವಕ್ಕಿರುವ ಸವಾಲು ಮತ್ತು ಹೆದರಿಕೆ ಎಂದು ಪರಿಗಣಿಸುತ್ತದೆ. ಈ ಬಗೆಯ ಅಲ್ಪಸಂಖ್ಯಾತರು ರಾಷ್ಟ್ರವಿರೋಧಿಗಳು ಮತ್ತು ಸಮಾಜಘಾತುಕರು ಎನ್ನುತ್ತದೆ. ಅಲ್ಪಸಂಖ್ಯಾತರು ತಮ್ಮ ಸಂಖ್ಯೆಯನ್ನು ಹೆಚ್ಚಿಸುವ ಯಾವುದೇ ಪ್ರಯತ್ನ ಹಿಂದುತ್ವಕ್ಕೆ ಆಕ್ರಮಣಕಾರಿಯಾಗಿ ಕಂಡುಬರುತ್ತದೆ. ಆದುದರಿಂದ ಕ್ರೈಸ್ತಧರ್ಮಕ್ಕೆ ಮತಾಂತರ ಅಥವಾ ಹಿಂದೂಕನ್ಯೆ ಮುಸ್ಲಿಮನನ್ನು ಮದುವೆಯಾಗುವುದು ಅಪೇಕ್ಷಣೀಯವಲ್ಲ ಮತ್ತು ಅದು ಪ್ರಚೋದನಕಾರಿ ವರ್ತನೆ.

ಹಿಂದುತ್ವವನ್ನು ಪ್ರತಿಪಾದಿಸುವವರಿಗೂ ಮತ್ತು ಇರಾನಿನ ಮುಸ್ಲಿಂ ಮೂಲಭೂತವಾದಿಗಳು ಅಥವಾ ಆಫಘಾನಿಸ್ತಾನದ ಮೂಲಭೂತವಾದಿಗಳಿಗೂ ಮುಖ್ಯವಾದ ವ್ಯತ್ಯಾಸಗಳಿವೆ. ಇಸ್ಲಾಮಿಕ್ ಮೂಲಭೂತವಾದಿಗಳು ರಾಷ್ಟ್ರೀಯತೆ ಮತ್ತು ಸಂಖ್ಯೆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇವರು ಪ್ರತಿಯೊಬ್ಬ ಮುಸ್ಲಿಮನು ಮೂಲಭೂತವಾದಿಗಳು ಒತ್ತಾಯಿಸುವ ಇಸ್ಲಾಮಿಕ್ ತತ್ವಗಳನ್ನು ಅತ್ಯಂತ ವಿಶ್ವಾಸದಿಂದ ಅನುಸರಿಸಬೇಕೆಂದು ಬಯಸುತ್ತಾರೆ. ಹಿಂದುತ್ವ ತತ್ವ ರಾಷ್ಟ್ರದ ಪರಿಕಲ್ಪನೆಗೆ ಬದ್ಧವಾಗಿದೆ. ಬಹುಸಂಖ್ಯಾತರ ರಾಜಕೀಯ ಬಲಿಷ್ಠತೆಯ ತತ್ವದ ಸುತ್ತ ಸುತ್ತುತ್ತದೆ. ಇಸ್ಲಾಮಿಕ್ ಮೂಲಭೂತವಾದಿಗಳು ಧರ್ಮಸಾಮ್ರಾಜ್ಯದ ಹೋರಾಟಗಾರರು. ಹಿಂದುತ್ವ ಎಂದರೆ ರಾಷ್ಟ್ರೀಯ ಧರ್ಮಶುದ್ಧಿವಾದ. ಮೊದಲನೆಯದು ಇಸ್ಲಾಮಿನ ಸುಧಾರಣೆಯನ್ನು ಆಂತರಿಕ ಒತ್ತಡದ ಮೂಲಕ ತಡೆಯುತ್ತದೆ. ಎರಡನೆಯದು ಸುತ್ತಲಿರುವ ಸಮುದಾಯ ಮತ್ತು ನಂಬಿಕೆಗಳಿಗೆ

ಭಯವನ್ನು ಸೃಷ್ಟಿಸಿ ಇವುಗಳು ತಮ್ಮ ಇರುವಿಕೆಯನ್ನು ಪ್ರತಿಪಾದಿಸದಂತೆ ಮಾಡುತ್ತದೆ. ಇಂತಹ ಅನೇಕ ವ್ಯತ್ಯಾಸಗಳಿದ್ದರೂ ಇವೆರಡೂ ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಪೂರ್ಣ ಅಪನಂಬಿಕೆಯನ್ನಿಟ್ಟಿವೆ.

ಹಿಂದುತ್ವದ ಪ್ರತಿಪಾದಕರು ಒಂದು ದಿನ ಭಾರತ ಹಿಂದೂ ರಾಷ್ಟ್ರವಾಗುತ್ತದೆ ಎನ್ನುವ ಕನಸನ್ನು ಇಟ್ಟುಕೊಂಡಿದ್ದಾರೆ. ಆದರೆ ಹಿಂದುಗಳಲ್ಲದ ಬುಡಕಟ್ಟು ಜನಾಂಗ ಹಿಂದುತ್ವದ ಬಗೆಗೆ ಹೆಚ್ಚಿನ ಉತ್ಸಾಹ ತೋರಿಸಬೇಕಾಗಿಲ್ಲ. ಹಾಗಾದರೆ ಮಾರ್ಚ್ ೨೦೦೨ರ ಗಲಭೆಯಲ್ಲಿ ಬುಡಕಟ್ಟು ಜನಾಂಗ ಮುಸ್ಲಿಮರ ಮೇಲೆ ಅಷ್ಟೊಂದು ಬರ್ಬರವಾಗಿ ಎರಗಿದ್ದೇಕೆ? ಗೋಧ್ರಾ ಹತ್ಯೆಗೆ ಪ್ರತೀಕಾರವಾಗಿ ಬುಡಕಟ್ಟು ಜನಾಂಗ ಗುಜರಾತಿನ ಹಿಂದುಗಳೊಂದಿಗೆ ಕೈಜೋಡಿಸುವ ತೀರ್ಮಾನ ತೆಗೆದುಕೊಂಡಂತೆ ಕಾಣುತ್ತದೆ. ಈ ತೀರ್ಮಾನಕ್ಕೆ ಬರುವ ಮೊದಲು ಬುಡಕಟ್ಟು ಜನಾಂಗಕ್ಕೆ ಭಾರತದ ಮಧ್ಯಕಾಲೀನ ಇತಿಹಾಸದ ಅರಿವಿಲ್ಲ ಎನ್ನುವುದನ್ನು ನೆನಪಿಟ್ಟುಕೊಳ್ಳಬೇಕು.

ಬುಡಕಟ್ಟು ಜನಾಂಗಕ್ಕೆ ಬಾಬರ್ ಯಾರು, ಆತ ಅಥವಾ ಆತನ ಮುಂದಿನವರು ಎಷ್ಟು ಹಿಂದೂ ದೇವಾಲಯಗಳನ್ನು ನಾಶಮಾಡಿ ಮಸೀದಿ ನಿರ್ಮಾಣ ಮಾಡಿದರು ಎನ್ನುವುದು ತಿಳಿದಿಲ್ಲ. ಅವರಿಗೆ ಸಾವರ್ಕರ್ ಅಥವಾ ಹಗ್ಡೆವಾರ್ ಬಗೆಗೆ ಏನೂ ಗೊತ್ತಿಲ್ಲ. ಆರ್‌ಎಸ್‌ಎಸ್ ಎಂದರೆ ಏನು ಎಂದು ಗೊತ್ತಿಲ್ಲ. ರಾಮಸೇವಕರಾಗಿ, ಸ್ವಯಂಸೇವಕರಾಗಿ ಅಯೋಧ್ಯೆಗೆ ಯಾರೂ ಹೋಗಿಲ್ಲ. ಶಾಬಾನು ಕೇಸು ಅಥವಾ ಜುಮಾ ಮಸೀದಿಯ ಇಮಾಂ ಕುರಿತು ಏನೂ ತಿಳಿದಿಲ್ಲ. ಸ್ಥಳೀಯ ಲೇವಾದೇವಿಗಾರರ ಮೂಲಕ ಮಾತ್ರ ಬುಡಕಟ್ಟು ಜನ ಇಸ್ಲಾಮಿನ ಮುಖವನ್ನು ನೋಡಿದ್ದಾರೆ. ಮತ್ತು ತಿಳಿದುಕೊಂಡಿದ್ದಾರೆ. ಬಿಜೆಪಿ ಪಂಚಾಯ್ತಿ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಭಾಗವಹಿಸಿದ್ದರ ಮೂಲಕ ಹಿಂದುತ್ವ ಚಳುವಳಿಯ ಮುಖವನ್ನು ನೋಡಿದ್ದಾರೆ. ಬುಡಕಟ್ಟು ಜನಾಂಗ ಮುಸ್ಲಿಮರಿಗಿಂತ ಹಿಂದುಗಳಿಗೆ ಹತ್ತಿರವಿರುವಂತೆ ಭಾವಿಸುವುದು ನಿಜವಾದರೂ ಅವರ ನಿಕಟ ಸಂಬಂಧ ಕೇವಲ ಸ್ಥಳೀಯ ರಾಜಕೀಯ ಮತ್ತು ಸಮಸ್ಯೆಗಳಿಂದ ಪ್ರೇರಿತವಾಗಿದೆ.

ಕಾಂಗ್ರೆಸ್ ನಾಯಕತ್ವ ನಾಲ್ಕು ದಶಕಗಳ ಕಾಲ ಹೊಂದಿದ್ದ ಹತೋಟಿಯ ಕಾಲದಲ್ಲಿ ಬುಡಕಟ್ಟು ಜನಾಂಗ ಅಭಿವೃದ್ಧಿಯಾಗದಂತೆ ನೋಡಿಕೊಂಡಿತು. ಇವರಿಗೆ ಶಿಕ್ಷಣ ಸಿಗದಂತೆ ಜ್ಞಾನ ಬೆಳೆಯದಂತೆ ನೋಡಿಕೊಂಡಿತು. ಇವರನ್ನು ಮತ ಬ್ಯಾಂಕಾಗಿ ಇಟ್ಟುಕೊಂಡಿತ್ತು. ಈ ಜನಾಂಗವನ್ನು ಬಡತನದಲ್ಲಿರುವಂತೆ ಮಾಡಿದರೆ ರಾಜಕೀಯ ವಾಗಿ ಇವರು ಮೇಲೇಳುವುದಿಲ್ಲ ಎಂದು ಕಾಂಗ್ರೆಸ್ ತಿಳಿದಿತ್ತು. ಇತ್ತ ಬಿಜೆಪಿಗೆ ಈ ಜನಾಂಗದ ಬಡತನವನ್ನು ಹೋಗಲಾಡಿಸುವುದು ಹೇಗೆ ಎಂದು ತಿಳಿದಿಲ್ಲ. ಇವರ



ಆರ್ಥಿಕಾಭಿವೃದ್ಧಿಯಲ್ಲಿ ಆಸಕ್ತಿ ಇಲ್ಲ. ಬಿಜೆಪಿಯೂ ಈ ಜನಾಂಗ ಓಟು ಬ್ಯಾಂಕಾಗಿರಲಿ ಎಂದು ಆಶಿಸುತ್ತದೆ. ಒಂದು ದಶಕದಿಂದ ಸಂಘ ಪರಿವಾರ ಎಲ್ಲಾ ರಾಜ್ಯಗಳ ಬುಡಕಟ್ಟು ಜನಾಂಗದಲ್ಲಿ ಸಕ್ರಿಯವಾಗಿದೆ. ತನ್ನ ಸಹೋದರ ಸಂಸ್ಥೆ ವನವಾಸಿ ಸೇವಾ ಸಂಘದ ಮೂಲಕ ಇದು ಹಿಂದುತ್ವ ಸಂದೇಶವನ್ನು ಹರಡುತ್ತಿದೆ. ಇವರನ್ನು ವನವಾಸಿ ಅಥವಾ ಆದಿವಾಸಿ ಎಂದು ಕರೆಯಲಾಗುತ್ತದೆ. ಅಂದರೆ ಇವರು ಈ ಪ್ರದೇಶದ ಮೂಲನಿವಾಸಿಗಳೆಂದು ಅರ್ಥ. ಆರ್‌ಎಸ್‌ಎಸ್‌ನ ಇತಿಹಾಸದ ತಿಳುವಳಿಕೆಯ ಪ್ರಕಾರ ಆರ್ಯರು ಭಾರತದ ಮೂಲನಿವಾಸಿಗಳು. ಆದರೆ ಆರ್ಯರಲ್ಲದ ಈ ಆದಿವಾಸಿಗಳು ಹೇಗೆ ಮೂಲನಿವಾಸಿಗಳಾಗುತ್ತಾರೆ? ಆದುದರಿಂದ ಬುಡಕಟ್ಟು ಜನಾಂಗದ ಮೂಲನಿವಾಸಿತ್ವ ಹಿಂದುತ್ವಕ್ಕೆ ಇರುವ ಬಲವಾದ ಹೆದರಿಕೆ.

ಆದಿವಾಸಿಗಳ ಪ್ರಮುಖ ಶತ್ರು ಕ್ರಿಶ್ಚಿಯನ್ ಮಿಶನರಿಗಳು ಎಂದು ಸೇವಾಸಂಘ ದವರು ಪ್ರತಿಪಾದಿಸುತ್ತಾರೆ. ಬುಡಕಟ್ಟು ಜನಾಂಗಕ್ಕೆ ಕ್ರಿಶ್ಚಿಯನ್ ಮಿಶನರಿಗಳು ಚೆನ್ನಾಗಿ ಗೊತ್ತು. ಇವರ ಸ್ವಾತಂತ್ರ್ಯವನ್ನು ಮಿಶನರಿಗಳು ಮೊಟಕುಗೊಳಿಸಿದ್ದಾವೆ ಎನ್ನುವುದೂ ತಿಳಿದಿದೆ. ಹಿಂದುತ್ವವಾದವನ್ನು ಬೆಂಬಲಿಸುವ ಬುಡಕಟ್ಟು ಜನಾಂಗದವರ ಕೋಪಕ್ಕೆ ಗುಜರಾತಿನ ಡಾಂಗ್ಸ್ ಜಿಲ್ಲೆ ಮತ್ತು ಒರಿಸ್ಸ, ಬಿಹಾರಗಳಲ್ಲಿನ ಕ್ರಿಶ್ಚಿಯನ್ ಮಿಶನರಿಗಳು ತುತ್ತಾಗಿವೆ. ಬಿಜೆಪಿ ಮತ್ತು ಸೇವಾಸಂಘ ಬುಡಕಟ್ಟು ಜನಾಂಗದಲ್ಲಿ ರಾಜಕೀಯ ವೈಷಮ್ಯತೆಯ ಆಯಾಮವನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿವೆ. ಆದರೆ ಅವರನ್ನು ಗುರುತಿಸಿಕೊಳ್ಳುವಲ್ಲಿ ಬದಲಾವಣೆ ತರಲು ಸಾಧ್ಯವಾಗಿಲ್ಲ.

ತಮ್ಮ ಶತ್ರುಗಳ ಕುರಿತು ಬುಡಕಟ್ಟು ಜನಾಂಗಕ್ಕೆ ಬಲವಾದ ದ್ವೇಷವಿದೆ. ಕಾಂಗ್ರೆಸ್ ಪೋಷಿಸಿಕೊಂಡು ಬಂದ ಬಡತನ ಬಿಜೆಪಿ ಹುಟ್ಟುಹಾಕಿದ ರಾಜಕೀಯ ದ್ವೇಷ ಎರಡೂ ಭಯಾನಕವಾಗಿ ಮಿಶ್ರಣಗೊಂಡಿದೆ. ಹಿಂದುತ್ವದ ಅಂತಿಮ ತಾರ್ಕಿಕತೆ ಎಲ್ಲಾ ಅಲ್ಪಸಂಖ್ಯಾತರು, ಬುಡಕಟ್ಟು ಜನಾಂಗದವರನ್ನೂ ಒಳಗೊಂಡು ಪ್ರಶ್ನಾತೀತವಾಗಿ ಗುಲಾಮಗಿರಿಗೆ ಒಳಗಾಗಬೇಕು ಎನ್ನುವುದಾಗಿದೆ. ಅಲ್ಪಸಂಖ್ಯಾತರು ಹಿಂದೂರಾಷ್ಟ್ರ ಪರಿಕಲ್ಪನೆಗೆ ಪೂರ್ಣನಿಷ್ಠೆಯನ್ನು ಹೊಂದಿರಬೇಕು ಎನ್ನುವ ಅಭಿಪ್ರಾಯ ಸಂಘ ಪರಿವಾರದ್ದಾಗಿರುವುದರಿಂದ ಆದಿವಾಸಿ ಬುಡಕಟ್ಟು ಜನಾಂಗ ಮತ್ತು ವನವಾಸಿ ಹಿಂದುಗಳ ನಡುವೆ ಹಿಂಸಾತ್ಮಕ ಘರ್ಷಣೆ ಅನಿವಾರ್ಯ.

ಮುಂದಿನ ವಿಧಾನಸಭೆ ಚುನಾವಣೆಯ ಸೀಮಿತ ದೃಷ್ಟಿಯಿಂದ ಮುಸ್ಲಿಮರ ಮೇಲಿನ ಆಕ್ರಮಣ ಹಿಂದುತ್ವವಾದಿಗಳಿಗೆ ಆಕರ್ಷಣೀಯ ಮತ್ತು ಲಾಭದಾಯಕ ಎನಿಸಿದರೂ ದೀರ್ಘಾವಧಿಯ ರಾಜಕೀಯ ಪ್ರಕ್ರಿಯೆಗೆ ತುಂಬಾ ಹಾನಿಯುಂಟು ಮಾಡಿದೆ. ಮಾರ್ಚ್ ೨೦೦೨ರ ಗಲಭೆಯ ಸಂದರ್ಭದಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ

ರಾಜ್ಯದ ಅಧಿಕಾರ ಸಂಪೂರ್ಣವಾಗಿ ನಿಷ್ಕ್ರಿಯವಾಗಿತ್ತು, ನಾಶವಾಗಿತ್ತು. ಪುನರ್ ಪ್ರತಿಷ್ಠಾಪಿಸುವುದು ತುಂಬಾ ಕಷ್ಟದ ಕೆಲಸ.

ಗಲಭೆಯ ಸಂದರ್ಭದಲ್ಲಿ ಗುಜರಾತಿನ ಮುಸ್ಲಿಮರು ಹೇಳಲಾಗದ ಸಂಕಷ್ಟ ವನ್ನು ಅನುಭವಿಸಿದರು. ಅದೇ ರೀತಿ ಗೋಧ್ರಾ ಆಕ್ರಮಣದಲ್ಲಿ ಸಂಬಂಧಿಕರನ್ನು ಕಳೆದುಕೊಂಡ ಹಿಂದೂ ಕುಟುಂಬಗಳಿಗೂ ಹಾನಿಯಾಯಿತು. ಗುಜರಾತಿನ ಆರ್ಥಿಕತೆಗೆ ಅಪಾರ ಹಿನ್ನೆಡೆ ಉಂಟಾಯಿತು. ಅದು ಪುನಃ ಮೇಲ್ಮುಖವಾಗಿ ಚಲಿಸ ಬೇಕಾದರೆ ಅನೇಕ ವರ್ಷಗಳೆ ಬೇಕು. ಸಭ್ಯ, ಮರ್ಯಾದೆಯ ಜೀವನ ನಾಶವಾಯಿತು. ಗುಜರಾತಿನಲ್ಲಿ ಕಾನೂನು ಸುವ್ಯವಸ್ಥೆ ಸ್ಥಾಪಿತವಾಗಬೇಕಾದರೆ ಅನೇಕ ವರ್ಷಗಳೆ ಬೇಕು. ಗುಜರಾತಿನ ಬುಡಕಟ್ಟು ಜನಾಂಗದಲ್ಲಿ ವಿವಾದವನ್ನು ಹುಟ್ಟುಹಾಕಲಾಯಿತು. ಸ್ವಯಂ ನಾಶ ಮತ್ತು ಮಿತಿಯಿಲ್ಲದ ಹಿಂಸಾಚಾರವನ್ನು ಎದುರಿಸುವ ಸನ್ನಿವೇಶವನ್ನು ಬುಡಕಟ್ಟು ಜನಾಂಗ ಎದುರಿಸುವಂತಾಯಿತು.

ಗಲಭೆಯ ಫಲಿತಾಂಶವೆಂದರೆ ಮುಸ್ಲಿಂ ಜನಾಂಗ ನಿರಾಶ್ರಿತರ ಪಾಳಯದಲ್ಲಿ ಬಳಲುವಂತಾದುದು. ಅವರು ತಮ್ಮದನ್ನೆಲ್ಲ ಕಳೆದುಕೊಂಡರು. ಅವರಲ್ಲಿ ಅಭದ್ರತೆ ಕಾಡತೊಡಗಿದೆ. ನೆರೆಹೊರೆಯವರ ದ್ವೇಷಪೂರಿತ ವರ್ತನೆಯ ನಡುವೆ ತಮ್ಮ ಸುಟ್ಟು ಕರಕಲಾದ ಮನೆಗೆ ಅಥವಾ ಅಂಗಡಿಮುಂಗಟ್ಟುಗಳಿಗೆ ಹಿಂತಿರುಗಲು ಅವರು ತಯಾರಾಗಿಲ್ಲ. ಗುಜರಾತ್ ಭೂಕಂಪದಿಂದ ಸುಮಾರು ೨೦,೦೦೦ ಜನ ಸತ್ತರು. ಭೂಕಂಪ ಸಂತ್ರಸ್ತರಿಗೆ ವಿಶ್ವದ ಎಲ್ಲಾ ಕಡೆಯಿಂದ ಅಪೂರ್ವವಾದ ಸಹಾಯ ಹಸ್ತ ದೊರಕಿದರೂ ಪುನರ್ವಸತಿ ಕಲ್ಪಿಸುವುದು ಗುಜರಾತ್ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಗಲಭೆಯಿಂದ ಸುಮಾರು ಒಂದು ಲಕ್ಷ ಜನ ಆರ್ಥಿಕವಾಗಿ ನಾಶವಾಗಿದ್ದಾರೆ. ಇದರಲ್ಲಿ ಉದ್ಯೋಗ ಕಳೆದುಕೊಂಡ ಅಸಂಖ್ಯಾತ ಮುಸ್ಲಿಮರ ಸಂಖ್ಯೆ ಸೇರಿಲ್ಲ. ಇಷ್ಟೊಂದು ಬೃಹತ್ ಸಂಖ್ಯೆಯ ಜನಕ್ಕೆ ಪುನರ್ವಸತಿ ಕಲ್ಪಿಸುವುದು ಸಾಧ್ಯವೇ ಇಲ್ಲವೇನೊ.

ಗುಜರಾತ್ ಗಲಭೆಯ ಮತ್ತೊಂದು ಪರಿಣಾಮ ಬುಡಕಟ್ಟು ಜನಾಂಗದವರಲ್ಲಿ ವೈಷಮ್ಯದ ರಾಜಕೀಯ ಹುಟ್ಟುಹಾಕಿದ್ದು. ಇದನ್ನು ಮುಸ್ಲಿಂ ಅಲ್ಲದವರ ವಿರುದ್ಧವೂ ತಿರುಗಿಸುವುದು ಸಾಧ್ಯ. ಎಂಟು ಮಿಲಿಯನ್ ಬುಡಕಟ್ಟು ಜನ ಗುಜರಾತಿಲ್ಲಿದ್ದಾರೆ. ಹೆಚ್ಚಿನವರು ಬಡವರು ಮತ್ತು ಅರೆಹೊಟ್ಟೆಯವರು. ಈ ಬಗ್ಗೆ ವಿವೇಚನಾರಹಿತ ವೈಷಮ್ಯತೆ ದೀರ್ಘಾವಧಿಯಲ್ಲಿ ಅತ್ಯಂತ ಭಯಾನಕವಾದದ್ದು. ಪಾನವಾಡ ಮತ್ತು ತೇಜಗಢದ ಹಳ್ಳಿಗಳು ಕುಂಟುತ್ತಾ ಸಹಜಸ್ಥಿತಿಗೆ ಮರುಳುತ್ತಿವೆ. ಆದರೆ ಮಾರ್ಚ್ ೨೦೦೨ರ ಕಿವಿ ಕಿವುಡಾಗಿಸುವ ಆರ್ತನಾದವನ್ನು ಮರೆಯಲು ಸಾಧ್ಯವೇ ಇಲ್ಲ. ಗಲಭೆಯ ಕೂಗು ಕರುಣೆ ಮತ್ತು ಭಯದ ವಿಶೇಷವಾದ ಮಿಶ್ರಣ. ಯಾವುದೇ



ದೈವತ್ವದ ಛಾಯೆ ಇರಲಿಲ್ಲ. ಯಾವುದೆ ಧ್ಯೇಯೋದ್ದೇಶವಿಲ್ಲದೆ ಬುಡಕಟ್ಟು ಜನಾಂಗ ತಮ್ಮ ಧ್ವನಿ ಎತ್ತಿದ್ದು ತೀರ ದುಃಖದಾಯಕವಾದದ್ದು. ಅವರು ತಮ್ಮ ಮನೆಯನ್ನು ಉತ್ತಮಗೊಳಿಸಲು ಅಥವಾ ತಮ್ಮ ಸ್ಥಿತಿಯನ್ನು ಸುಧಾರಿಸಲು ತಮ್ಮ ಧ್ವನಿಯನ್ನು ಎತ್ತಲಿಲ್ಲ. ಆದರೆ ಮತ್ತೊಂದು ಸಮುದಾಯವನ್ನು ನಾಶಪಡಿಸಲು ಕೂಗಿದರು ಮತ್ತು ಸರ್ಕಾರ ಪ್ರೋತ್ಸಾಹಿತ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಸರ್ಕಾರ ಅಥವಾ ಪಕ್ಷವನ್ನು ಬದಲಾಯಿಸುವುದರ ಮೂಲಕ ಹಿಂಸಾಚಾರ ವನ್ನು ಹತ್ತಿಕ್ಕುವುದು, ಗಲಭೆಯನ್ನು ಹತೋಟಿಗೆ ತರುವುದು, ಅಲ್ಪಾವಧಿ ಚಿಕಿತ್ಸೆ ಮಾತ್ರ ಆಗುತ್ತದೆ. ಸಮಸ್ಯೆಯನ್ನು ಆಮೂಲಾಗ್ರವಾಗಿ ಪರಿಹರಿಸಲು ಆದರ ಮೂಲಕ್ಕೆ ಇಳಿಯಬೇಕಾಗುತ್ತದೆ. ಈ ಕೆಲಸವನ್ನು ಪ್ರತಿಯೊಬ್ಬರೂ ಪ್ರತಿಯೊಂದು ಕಡೆ ಮತ್ತು ಪ್ರತಿದಿವಸ ಮಾಡಬೇಕಾಗುತ್ತದೆ.

••• ••• •••

ಗುಜರಾತಿನ ಹಿಂಸಾಚಾರದ ಪೂರ್ತಿ ಅವಧಿಯಲ್ಲಿ ಆಲ್ಬರ್ಟ್ ಕಾಮುವಿನ ಮನಕಲಕುವ ಕಾದಂಬರಿ 'ದಿ ಪ್ಲೇಗ್' ಪದೇ ಪದೇ ನನ್ನ ನೆನಪಿಗೆ ಬರುತ್ತಿತ್ತು. ಈ ಕಾದಂಬರಿ ಮಹಾ ಪ್ಲೇಗ್‌ನ ಸಂದರ್ಭದ ಓರನ್ ಪಟ್ಟಣದ ಅಸಾಮಾನ್ಯ ಜೀವನವನ್ನು ಚಿತ್ರಿಸುತ್ತದೆ. ನೌಕರಶಾಹಿ ಈ ಅವಕಾಶವನ್ನು ಹಣಮಾಡಲು ಬಳಸಿಕೊಂಡಿತು. ಧಾರ್ಮಿಕ ನಾಯಕರು ಹೇಗೆ ದೇವರು ಮನುಷ್ಯನ ಮೇಲೆ ಮುನಿದಿದ್ದಾನೆ ಎಂದು ಕೊಂಡರು. ಬೇರೆಯವರು ಅಪಾಯರಹಿತ ಪ್ರದೇಶಗಳಿಗೆ ಓಡಿಹೋದರು. ಡಾ। ಮೀರ್ ಸಾಲ್ಪ್, ಮುಖ್ಯಪಾತ್ರ, ಒಂದು ಇಂಚೂ ಹಿಂಜರಿಯಲಿಲ್ಲ. ಅವರ ಘೋಷಣೆ ಹೀಗಿದೆ: 'ನನಗೆ ಸಾಧ್ಯವಾದದ್ದನ್ನು ಮಾಡಲು ನಾನಿರುವ ಸ್ಥಳವನ್ನೆ ಆಯ್ದುಕೊಳ್ಳು ತ್ತೇನೆ.' ಸ್ವಲ್ಪ ಸಮಯದ ನಂತರ ಪ್ಲೇಗ್ ಮಹಾಮಾರಿ ಹಿಂದೆ ಸರಿಯುತ್ತದೆ. ಇದಕ್ಕೆ ಮೀರ್ ಸಾಲ್ಪ್‌ರ ಹೋರಾಟ ಕಾರಣವಲ್ಲ. ಅದು ಹೇಗೆ ಬಂದಿತ್ತೊ ಹಾಗೆಯೆ ಮಾಯವಾಯಿತು.

ಕಾಮೂನ ದೃಷ್ಟಿಯಲ್ಲಿ ರೋಗದ ಪ್ರಾರಂಭ ಮತ್ತು ಅಂತ್ಯ ಎರಡೂ ಅಸಂಗತ. ಕಾಮೂ ಬುದ್ಧಿಪೂರ್ವಕ ಆಯ್ಕೆಗೆ ಒತ್ತುಕೊಟ್ಟಿದ್ದಾನೆ. ಆಯ್ಕೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಅಸ್ತಿತ್ವವಾದದ ಪ್ರಕಾರ ಜೀವನವೆಂದರೆ ಆಯ್ಕೆಗಳ ಸರಮಾಲೆ. ದೇವರು, ಸತ್ಯ, ನ್ಯಾಯ ಎನ್ನುವುದು ಇಲ್ಲದೆ ಇರುವುದರಿಂದ ಆಯ್ಕೆ ಬಹಳ ಕಷ್ಟ.

ಇಂದು ನಮಗೆ ಆಯ್ಕೆ ಸಾಧ್ಯವೇ ಇಲ್ಲ. ನಾವು ಯಾವ ಸ್ಥಿತಿಯಲ್ಲಿದ್ದೇವೆಂದರೆ, ಪ್ರತಿಕ್ಷಣದಲ್ಲಿ ನಾವು ಕಾರ್ಯೋನ್ಮುಖರಾಗದೆ ಇದ್ದರೆ ಹಿಂಸಾಚಾರದ ಕೆಟ್ಟಕಾರ್ಯ

ದಲ್ಲಿ ಭಾಗಿಯಾಗುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಆದುದರಿಂದ ರಚನಾತ್ಮಕ ಕಾರ್ಯಕ್ರಮಗಳು ಮಾತ್ರ ನಮ್ಮ ಭವಿಷ್ಯ. ಇಲ್ಲದೆ ಇದ್ದರೆ ನಮಗೆ ಭವಿಷ್ಯವೆ ಇಲ್ಲ.

(ಸಂಗ್ರಹ - ಅನುವಾದಃ ಡಾ। ಟಿ.ಎಸ್. ರಾಘವೇಂದ್ರ)

**ನೀನಾಸಮ್ ತಿರುಗಾಟ :**

**ಈ ವರ್ಷದ ಮೊದಲ ಹಂತದ ನಾಟಕಗಳು**

೧. **ಸಂಸಾರದಲ್ಲಿ ಸನಿದಪ** (ನಿರ್ದೇಶನಃ ಅಕ್ಷರ ಕೆ.ವಿ.) ಇಟಲಿಯ ಪ್ರಹಸನಕಾರ ದಾರಿಯೋ ಫೋನ 'ದಿ ವರ್ಚುವಸ್ ಬರ್ಗ್‌ಲರ್' ಕೃತಿಯ ಕನ್ನಡ ಮರುರೂಪ. ಮನೆಯೊಂದಕ್ಕೆ ಕಳ್ಳನ ಪ್ರವೇಶದಿಂದ ಉಂಟಾಗುವ ವಿಚಿತ್ರ ಸನ್ನಿವೇಶಗಳನ್ನು ಕೇಂದ್ರವಾಗಿಟ್ಟುಕೊಂಡು, ತುಂಬ ಲಘು ಧಾಟಿಯಲ್ಲೇ ಸಂಸಾರವನ್ನು ಕುರಿತ ಗಂಭೀರ ಚರ್ಚೆಗಳನ್ನು ಎತ್ತುವ ಕೃತಿ ಇದು. ಕನ್ನಡ ರೂಪಃ ಅಕ್ಷರ ಕೆ.ವಿ.

೨. **ಮಂತ್ರಶಕ್ತಿ** (ನಿರ್ದೇಶನಃ ಚನ್ನಕೇಶವ) ಮೈಸೂರು ಅರಸರ ಚರಿತ್ರೆಯನ್ನು ಆಧರಿಸಿ ಕನ್ನಡದ ನಾಟಕಕಾರ ಸಂಸ ಅವರು ಬರೆದ ಪ್ರಸಿದ್ಧ ನಾಟಕ. ೧೮ನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನದ ವಿರುದ್ಧ ನಡೆಯುತ್ತಿದ್ದ ರಾಜಕೀಯ ಕುತಂತ್ರ ಮತ್ತು ಕಾರಸ್ಥಾನಗಳನ್ನು ಕೇಂದ್ರವಾಗಿಟ್ಟು ಕೊಂಡು, ರಾಜನಾದ ರಣಧೀರನು ಅವೆಲ್ಲವನ್ನೂ ಹೇಗೆ ಬಗೆಬಗೆಯಿಂದ ಗೆದ್ದು ಈ ಸಂಸ್ಥಾನವನ್ನು ಕಟ್ಟುತ್ತಾನೆಂಬುದನ್ನು ನಿರೂಪಿಸುವ ಕಥಾನಕವನ್ನುಳ್ಳ ಕೃತಿ.

೩. **ಚೋರ ಚರಣದಾಸ** (ನಿರ್ದೇಶನಃ ಸುರೇಶ ಆನಗಳ್ಳಿ) ಆಧುನಿಕ ಭಾರತೀಯ ರಂಗಕರ್ಮಿಗಳಲ್ಲಿ ಪ್ರಮುಖರಾದ ಹಬೀಬ್ ತನ್ವೀರ್ ಅವರ ಪ್ರಸಿದ್ಧ ಹಿಂದಿ ನಾಟಕದ ಕನ್ನಡಾನುವಾದ. ಚರಣದಾಸನೆಂಬ ಕಳ್ಳನು ತನ್ನ ಚಾಣಾಕ್ಷತೆಯಿಂದ ರಾಣಿಯನ್ನೇ ಮರುಳು ಮಾಡುವ ಜಾನಪದ ಕಥೆಯೊಂದನ್ನಿಟ್ಟುಕೊಂಡು ಆ ಕಥನದಿಂದ ಆಧುನಿಕ ಅರ್ಥಗಳನ್ನೂ ಉದ್ಬೋಧಿಸುವ ಕೃತಿ ಇದು. ಕನ್ನಡ ಅನುವಾದಃ ಸಿದ್ಧಲಿಂಗ ಪಟ್ಟಣಶೆಟ್ಟಿ

ಅಕ್ಟೋಬರ್ ೨೦೦೨-ಜನವರಿ ೨೦೦೩ ನಡುವಿನ ತನ್ನ ಮೊದಲ ಹಂತದ ಪ್ರವಾಸ-ಪ್ರದರ್ಶನಕ್ಕೆ ನೀನಾಸಮ್ ತಿರುಗಾಟವು ಕರ್ನಾಟಕದ ಎಲ್ಲ ಭಾಗಗಳ ಆಸಕ್ತ ಸಾಂಸ್ಕೃತಿಕ ಸಂಸ್ಥೆಗಳಿಂದ ಆಹ್ವಾನಗಳನ್ನು ನಿರೀಕ್ಷಿಸುತ್ತಿದೆ. ವಿವರಗಳಿಗೆ ಸಂಪರ್ಕಿಸಿ: ನೀನಾಸಮ್ ತಿರುಗಾಟ, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭.

# ಸೆಕ್ಯುಲರಿಸಂನಿಂದ ವ್ಯಾಪಾರ - ವಹಿವಾಟಿಗೇನಾದರೂ ಲಾಭವಿದೆಯೆ ?

## ಸೈರಸ್ ಗರ್ಝದರ್

*ಭಾರತೀಯ ಕೈಗಾರಿಕಾ ಒಕ್ಕೂಟ (Confederation of Indian Industries -- CII) ಗುಜರಾತ್ ರಾಜ್ಯಶಾಖೆಯ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ, ೨೦೦೨ ಮಾರ್ಚ್ ೩೦ರಂದು ಮಾಡಿದ ಭಾಷಣ.*

ಉದ್ಯಮಿಗಳು, ವರ್ತಕರು ಮತ್ತು ವಹಿವಾಟುದಾರರ ಒಕ್ಕೂಟವಾದ ಈ ಸಂಸ್ಥೆಯ ಇಂಥ ಸಮಾರಂಭಗಳಲ್ಲಿ ಉದ್ಯಮ, ವ್ಯಾಪಾರ, ವಹಿವಾಟುಗಳ ಕುರಿತಷ್ಟೆ ಮಾತನಾಡುವುದು ಈ ಮೊದಲು ಸ್ಥಾಪಿತವಾದ ವಾಡಿಕೆಯಾಗಿದೆ. ನಾನು ಆ ರೂಢಿಯನ್ನು ಮುರಿದು, ಪ್ರಸ್ತುತ ಗುಜರಾತನ್ನು ಕಾಡುತ್ತಿರುವ ಆಂತರಿಕ ಕ್ಷೋಭೆಯ ಬಗ್ಗೆ ಮಾತನಾಡುತ್ತಿರುವುದಕ್ಕೆ ಕ್ಷಮೆಯಿರಲಿ. ನಮ್ಮ ಒಕ್ಕೂಟದ ಯಾವತ್ತೂ ನಿಲುವು, ವಿಶೇಷವಾಗಿ ವ್ಯಾಪಾರ-ವ್ಯವಹಾರಗಳ ಕುರಿತಾದ ನಿಲುವು ಆಧುನಿಕವೂ ಉದಾರವಾದಿಯೂ ಹಾಗೂ ಸಹಿಷ್ಣುವೂ ಜನಪರವೂ ಆಗಿದ್ದು, ನಾನಿಲ್ಲಿ ಆಡಲಿರುವ ಮಾತುಗಳು ಸಂಪ್ರದಾಯವನ್ನು ಮುರಿಯುವಂಥವಾದರೂ ಆಳದಲ್ಲಿ ಈ ಒಕ್ಕೂಟದ ಒಟ್ಟೂ ನಿಲುವಿಗೆ ಬದ್ಧವಾಗಿವೆಯೆಂದೆ ನನ್ನ ತಿಳುವಳಿಕೆ.

ಮುಕ್ತ ಮಾರುಕಟ್ಟೆಯ ಖ್ಯಾತ ಪ್ರತಿಪಾದಕ, ಅಮೆರಿಕನ್ ಅರ್ಥಶಾಸ್ತ್ರಜ್ಞ ಮಿಲ್ಟನ್ ಫ್ರೀಡ್‌ಮನ್ ಒಂದೆಡೆ ಹೇಳಿದ, 'ವ್ಯವಹಾರವನ್ನು ನಡೆಸಿಕೊಂಡು ಹೋಗುವುದೆ ವ್ಯವಹಾರದ ವ್ಯವಹಾರವಾಗಿದೆ' (The business of business is business). ಜಗತ್ತಿನ ಎಲ್ಲಾ ವ್ಯವಹಾರಸ್ಥರು ಥಟ್ಟನೆ ಒಪ್ಪಿಕೊಳ್ಳುವಂಥ ಮಾತು ಇದು. ಹಾಗಿದ್ದೂ ನಾವಿಂದು ಇಲ್ಲಿ ವ್ಯವಹಾರದ ವಿಷಯಗಳ ಜೊತೆಜೊತೆಗೆಯೆ ಸೆಕ್ಯುಲರಿಸಮ್‌ನಂತಹ 'ಅ-ವ್ಯಾವಹಾರಿಕ' ವಿಷಯದ ಕುರಿತೂ ಚರ್ಚಿಸಲು ಸೇರಿದ್ದೇವೆ, ಏಕೆ? ಈ ಪ್ರಶ್ನೆಗೆ ಉತ್ತರ, ಭಾಗಶಃ, ಫ್ರೀಡ್‌ಮನ್ ತನ್ನ ವಾಚ್ಯಾರ್ಥ

ಭಾಗದ ಮೂಲಕ ಸೂಚಿಸುವ ಇಂಗಿತಾರ್ಥವಾದ 'ಆಡಳಿತ ನಡೆಸಿಕೊಂಡು ಹೋಗುವುದೆ ಆಡಳಿತ ವ್ಯವಸ್ಥೆಯ ವ್ಯವಹಾರವಾಗಿದೆ' (The business of government is government) ಎಂಬ ಭಾಗದಲ್ಲಿದೆ. ಅರ್ಥಾತ್, ಸರ್ಕಾರಿ ವಲಯ ಆಳುವ ತನ್ನ ಕಾಯಕವನ್ನು ಸರಿಯಾಗಿ ನಿರ್ವಹಿಸಿದಲ್ಲಿ, ವಾಣಿಜ್ಯ ವಲಯ ಹಾಯಾಗಿ ತನ್ನ ವ್ಯವಹಾರವನ್ನು ನಡೆಸಿಕೊಂಡಿರಬಹುದು.

ಸ್ವಸ್ಥ ಸಮಾಜದಲ್ಲಿ ವಾಣಿಜ್ಯ ವ್ಯವಹಾರಗಳು ವಹಿಸುವ ಪಾತ್ರವನ್ನು ಕುರಿತು ಇನ್ನೋರ್ವ ಘನ ಅಮೆರಿಕನ್ ಚಿಂತಕ ಪೀಟರ್ ಡ್ರಕರ್ ಹೀಗೆ ಹೇಳಿದ: 'ಲಾಭ ಗಳಿಸುವುದು ವ್ಯವಹಾರ ಕ್ಷೇತ್ರದ ಸಾಮಾಜಿಕ ಜವಾಬ್ದಾರಿಯಾಗಿದೆ.' ಇದರರ್ಥ ಸ್ಪಷ್ಟ – ಜನತೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಬೇಕೆಂದಲ್ಲಿ, ಸಂಪತ್ತನ್ನು ಸೃಷ್ಟಿಸಬೇಕೆಂದಲ್ಲಿ, ಸಮಾಜವನ್ನು ಸಮೃದ್ಧಗೊಳಿಸಬೇಕೆಂದಲ್ಲಿ ವಾಣಿಜ್ಯೋದ್ದಿಮೆಗಳು ಲಾಭ ಗಳಿಸುತ್ತಿರಬೇಕು.

ಆದರೆ, ಆಡಳಿತ ವ್ಯವಸ್ಥೆಗಳು ಆಡಳಿತ ನಡೆಸದೆ ಇದ್ದಲ್ಲಿ ಏನು ಗತಿ? ಅಥವಾ, ತಪ್ಪಾಗಿ ಆಳ್ವಿಕೆ ಮಾಡಿದಲ್ಲಿ ಏನು ಗತಿ? ತಪ್ಪಾದ ಆಳ್ವಿಕೆ ಎರಡು ರೀತಿಯದಾಗಿರಬಹುದು: ಒಂದು, ಜಿಂಬಾಬ್ವೆ ಮತ್ತು ಇರಾಕ್‌ನಲ್ಲಿ ಸರ್ಕಾರಗಳು ತಮ್ಮದೆ ಜನಸಮುದಾಯದ ಕೆಲವು ಭಾಗಗಳನ್ನು ದಮನಿಸುತ್ತಿರುವಂತೆ, ಮಾಡಬಾರದ್ದನ್ನು ಮಾಡುವ ಮಾದರಿಯದಾಗಬಹುದು; ಎರಡು, ತಮ್ಮ ಪ್ರಜೆಗಳ ಜೀವ ಮತ್ತು ಜೀವನೋಪಾಯದ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಮತ್ತು ಶಾಂತಿ - ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ವಿಫಲವಾಗಿ ಸರ್ಕಾರಗಳು ಮಾಡಬೇಕಾದ್ದನ್ನು ಮಾಡದಿರುವ ರೀತಿಯದಾಗಿರಬಹುದು.

ಸರ್ಕಾರಗಳು ಈ ರೀತಿಯಲ್ಲಿ ಕರ್ತವ್ಯ ಪರಿಪಾಲನೆಯಲ್ಲಿ ಸೋತಲ್ಲಿ, ಅದು ಸಾಮಾಜಿಕ ಜೀವನವನ್ನು ಅಸ್ತವ್ಯಸ್ತಗೊಳಿಸಿದಲ್ಲಿ; ಕೂಲಿಕಾರ್ಮಿಕರು, ಅಂಗಡಿ ಮುಂಗಟ್ಟಿನವರು, ಶಿಕ್ಷಕರು, ನ್ಯಾಯಾಧೀಶರು ಇತ್ಯಾದಿಯವರ ಎದೆಗೂಡಲ್ಲಿ ಭಯ ತಾಂಡವವಾಡಿದಲ್ಲಿ; ಮಾರುಕಟ್ಟೆಗಳು ಮುಚ್ಚಿ, ನಾವು ವ್ಯವಹಾರಸ್ಥರು ತಯಾರಿಸುವ ಸರಕುಗಳ ಹಾಗೂ ಒದಗಿಸುವ ಸೇವಾಸೌಕರ್ಯಗಳ ಬಳಕೆದಾರರಾದ ಜನತೆ ಊರುಕೇರಿ ತೊರೆದು ವಲಸೆ ಹೊರಟಲ್ಲಿ – ವಾಣಿಜ್ಯ ಕ್ಷೇತ್ರದ ನಾವು 'ವ್ಯಾಪಾರವಷ್ಟೆ ನಮ್ಮ ವ್ಯವಹಾರ' ಎಂದು ಜಪಿಸುತ್ತ ಕಣ್ಣುಮುಚ್ಚಿ ಕೂರುವುದು ವ್ಯಾವಹಾರಿಕರ ಲಕ್ಷಣವಾದೀತೆ? ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತ ಬಂದಿರುವ ಅನೈತಿಕವೂ ಅಮಾನವೀಯವೂ ಆದ ವಿಧ್ವಂಸದ ಭಗ್ನರಾಶಿಯ ನಡುವೆ ಕೈಕಟ್ಟಿ ಕುಳಿತಿರುವುದು ನೀತಿವಂತರ ನಡವಳಿಕೆಯಾದೀತೆ? ದುಡಿಯುವ ಜನ ಓಡಿನಡೆದರೆ,



ಅಂಗಡಿ ಪೇಟೆಗಳು ಬೀಗ ಜಡಿದುಕೊಂಡರೆ, ಬಳಕೆದಾರರು ಕೊಳ್ಳದಿದ್ದರೆ ನಮ್ಮ ವ್ಯಾಪಾರವ್ಯವಹಾರಗಳ ಭವಿಷ್ಯ ಭದ್ರವಾಗಿರಬಲ್ಲದೆ?

ನನ್ನ ತಿಳುವಳಿಕೆಯಲ್ಲಿ, ಗುಜರಾತಿನ ವಾಣಿಜ್ಯ ಹಾಗೂ ಉದ್ಯಮಗಳ ಬಗ್ಗೆ ನಮಗೆ ನಿಜವಾಗಿಯೂ ಕಾಳಜಿಯಿದ್ದಲ್ಲಿ, ಒಂದು ಕ್ಷಣ ನಿಂತು, ಈ ರಾಜ್ಯದಲ್ಲಿ ಕಳೆದ ನಾಲ್ಕು ವಾರಗಳಲ್ಲಿ ನಡೆದ ದುರ್ಘಟನೆಗಳ ಕಾರಣ ಹಾಗೂ ಪರಿಣಾಮಗಳ ಕುರಿತು ಧ್ಯಾನಿಸದೆ ಬೇರೆ ದಾರಿಯಿಲ್ಲ.

ಗಲಭೆ ಲೂಟಿಗಳೂ ಸಾಮಾಜಿಕ ಕ್ಷೋಭೆಗಳೂ ನಮ್ಮ ಜೀವನದ ಅನಿವಾರ್ಯ ಅಂಗಗಳೆಂದೊ, ಅವು ಒಮ್ಮೆ ಕವಿದು ಮರುಕ್ಷಣ ಸರಿದುಹೋಗುವ ಕಾರ್ಮೋಡಗಳಂತೆಯೆಂದೊ, ಪ್ರಸ್ತುತ ಬಾಧಿಸುತ್ತಿರುವ ನೋವುನಷ್ಟಗಳು (ಸರ್ಕಾರಿ ಸಹಾಯ ಹಾಗೂ ವಿಮಾ ಪರಿಹಾರಗಳ ಕೃಪೆಯಿಂದ) ಬೇಗ ನಿವಾರಣೆಯಾಗಿ ನಾವು ಮತ್ತೆ 'ಎಂದಿನಂತಿನ ವ್ಯವಹಾರ'ಕ್ಕೆ ಮರಳುವೆವೆಂದೊ ಭಾವಿಸಿದಲ್ಲಿ ಅದರಷ್ಟು ಪೊಳ್ಳು ಭ್ರಮೆ ಮತ್ತೊಂದಿರಲಾರದು. ಕಾರಣವಿಷ್ಟೆ: ಗುಜರಾತಿನ ಈ ದಂಗೆಗಳು ಬರಿಯ ದಂಗೆಗಳಲ್ಲ; ಈ ಕಷ್ಟ-ನಷ್ಟಗಳನ್ನೆಲ್ಲ ಪೂರ್ತಿಯಾಗಿ ಭರಿಸುವುದು ಅಥವಾ ಭರಿಸಿಕೊಡುವುದು ಸಾಧ್ಯವಿಲ್ಲ; ಹಾಗೆಯೆ, ನೆಲಕಚ್ಚಿದ ವಾಣಿಜ್ಯ-ವ್ಯವಹಾರ ಮತ್ತೆ ಪುಟಿದೇಳಲಾಗುವುದಿಲ್ಲ. ಈ ಬಾರಿ ಗುಜರಾತು ಆಳ ಸಿಗದಂಥ ಗಾಯಗಳಿಗೆ ತುತ್ತಾಗಿದೆ, ಇನ್ನೂ ರಕ್ತ ಸುರಿಸಿಕೊಂಡೆ ಬಿದ್ದಿದೆ. ಅದರ ಗಾಯಗಳು ಮಾಯುವ ಬದಲು ಮುಂಬರುವ ದಿನಗಳಲ್ಲಿ ಇನ್ನಷ್ಟು ಭೀಕರವಾಗಿ ರೋಗಗ್ರಸ್ತವಾಗುವಂತೆ ಕೀವು ಕಟ್ಟಿಕೊಳ್ಳುತ್ತಿವೆ.

••• ••• •••

ಗುಜರಾತು ಯಾರ ನಾಡು, ಯಾವ ಜನರಿಗೆ ಸೇರಿದ್ದು? ಹತ್ತೊಂಬತ್ತನೆಯ ಶತಮಾನದ ಧೀಮಂತ ಕವಿ ಹಾಗೂ ಚಿಂತಕ ನರ್ಮದಾಶಂಕರ ಲಾಲ್‌ಶಂಕರ ತನ್ನ ಖ್ಯಾತ ಕಾವ್ಯ 'ಜೈ ಜೈ ಗರ್ವಿ ಗುಜರಾತ್' ನಲ್ಲಿ ಈ ಪ್ರಶ್ನೆಗೊಂದು ಉತ್ತರ ಕೊಟ್ಟ. ಗುಜರಾತಿಗಳೆಲ್ಲರಿಗೂ ಗುಜರಾತಿತನದ ಅಭಿಮಾನಪ್ರಜ್ಞೆಯನ್ನು ಕಟ್ಟಿಕೊಟ್ಟ ಸಾಂಸ್ಕೃತಿಕಗಣ್ಯರನ್ನು ಸ್ತುತಿಸುವ ಆ ಕೃತಿಯಲ್ಲಿ ಆತ ಗುಜರಾತು ಎಲ್ಲ ಧರ್ಮ-ಜಾತಿ-ಪಂಗಡ-ಭಾಷೆಗಳ ಜನರಿಗೆ ಸೇರಿದ್ದು ಎಂದ; ಅದು ಯಾವುದೆ ಒಂದು ಸಮುದಾಯದ ಸ್ವತ್ತಲ್ಲ, ಬದಲಾಗಿ ಗುಜರಾತಿ ಭಾಷೆಯನ್ನಾಡುವ ಎಲ್ಲ ಜನರಿಗೆ ಸೇರಿದ್ದು ಎಂದ. ಅದೂ ತೃಪ್ತಿಯಾಗದೆ, ಆತ ಈ ಪ್ರದೇಶ ಹಿಂದುವೇತರರಾದ ಪಾರ್ಸಿ, ಮುಸ್ಲಿಮರ, ಸವರ್ಣೇತರರ ಬೀಡೂ ಹೌದು ಎಂದ. ನಿಜವಾದ ಅರ್ಥದಲ್ಲಿ ಮತನಿರಪೇಕ್ಷವಾದ

ಈ ರೀತಿಯ ಸಾಂಸ್ಕೃತಿಕ ಸಂವೇದನೆಯೆ ಗುಜರಾತಿಗಳೆಲ್ಲರನ್ನು ಒಗ್ಗೂಡಿಸುವ ಶಕ್ತಿಯಾಗಿದೆಯೆಂದು ಆತ ಗಾಢವಾಗಿ ನಂಬಿದ್ದ.

ನರ್ಮದಾಶಂಕರ ಪರಸಹಿಷ್ಣುತೆ ಹಾಗೂ ಸಹಾನುಭೂತಿಗಳ ಅತ್ಯುದಾತ್ತ ಜೈನ ಪರಂಪರೆಯ ಅನುಸಾರಕನಾಗಿದ್ದ. ಗಾಂಧಿ ಆತನ ಹಾದಿಯಲ್ಲೆ ನಡೆದು ಇಡಿಯ ನಾಡಿಗೆ ಅಹಿಂಸೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಇಂಥ ಮಹಾನ್ ಪರಂಪರೆಯ ಈ ರಾಜ್ಯದ ಬಗ್ಗೆ ಇಂದು ಪರರು 'ಗಾಂಧಿಯ ನಾಡಿನಲ್ಲಿ ಗೋಡಸೆಗಳ ವಿಕಟಾಟ್ಟಹಾಸ' ಎಂಬ ಮಾತನ್ನು ಆಡುವಂತಾಗಿದೆ. ಇದಕ್ಕೆ ಕಾರಣವೇನಿರಬಹುದು?

ಎಷ್ಟೆ ಕಷ್ಟವಾಗಲಿ, ಕಟುಸತ್ಯಗಳನ್ನು ಕಣ್ಣು ನೆಟ್ಟು ನೋಡುವುದೆ ಕ್ಷೇಮ. ಅವುಗಳನ್ನು ಹೆಚ್ಚು ಮುಕ್ತವಾಗಿ ಚರ್ಚಿಸಿದಷ್ಟೂ ಅವುಗಳನ್ನು ಎದುರಿಸುವಲ್ಲಿ ಮತ್ತು ಮಣಿಸುವಲ್ಲಿ ನಾವು ಹೆಚ್ಚು ಹೆಚ್ಚು ಶಕ್ತರಾಗಬಹುದು. ಹಾಗೆ ನೋಡಿದಾಗ –

☐ ಗೋಧ್ರಾದ ರಾಕ್ಷಸೀ ಕೃತ್ಯ ಮನುಕುಲಕ್ಕೆಯೆ ಕಳಂಕ ತರುವಂಥದು, ಅತ್ಯಂತ ಖಂಡನಾರ್ಹವಾದುದು. ಅದಕ್ಕೆ ಕಾರಣರಾದ ದುರುಳರನ್ನು ಪತ್ತೆ ಹಚ್ಚಬೇಕು, ವಿಚಾರಣೆಗೆ ಒಳಪಡಿಸಬೇಕು, ಮರಣದಂಡನೆಯಾದರೂ ಸರಿಯೆ ನಮ್ಮ ಕಾನೂನಿನ ಅತಿನಿಷ್ಠುರ ಶಿಕ್ಷೆಗೆ ಅವರನ್ನು ಗುರಿಪಡಿಸಬೇಕು. ಸ್ವತಃ ಮುಸ್ಲಿಮರಾದ ಪ್ರೊಫೆಸರ್ ಬಂದೂಕವಾಲಾ ನುಡಿದಂತೆ 'ಗೋಧ್ರಾದ ದುಷ್ಕರ್ಮಿಗಳು ಮುಸ್ಲಿಮರ ಕಡುಶತ್ರುಗಳಲ್ಲದೆ ಬೇರೇನೂ ಅಲ್ಲ.'

☐ ಅಹಮದಾಬಾದಿನ ಜನಸಾಮಾನ್ಯರ ನಡುವೆ ಉದ್ಭವಗೊಂಡ ಕ್ಷೋಭೆ, ಅದು ಲೂಟಿ, ಅಗ್ನಿಸ್ಪರ್ಶ, ಹಲ್ಲೆ ಮತ್ತು ಹತ್ಯೆಗಳನ್ನೊಳಗೊಂಡು ಬೆಳೆಯುತ್ತಬಂದಂತೆ, ನಿರ್ದಿಷ್ಟವಾದೊಂದು ಮಾದರಿಯನ್ನು ಅನುಸರಿಸಿತು: ಅದರಲ್ಲಿ ಮುಸ್ಲಿಮರು ಮತ್ತು ದಲಿತರೆ ಅತಿಹೆಚ್ಚು ಬಲಿಯಾದವರಾಗಿದ್ದರು.

☐ ಅಶಾಂತಿಯನ್ನು ಹುಟ್ಟುಹಾಕುವ, ಹರಡುವ ಹಾಗೂ ಮುಂದುವರೆಸಿಕೊಂಡು ಹೋಗುವ ಪ್ರಕ್ರಿಯೆಯಲ್ಲಿ ಗುಜರಾತಿ ಭಾಷೆಯ ಪತ್ರಿಕೆಗಳು ಅತ್ಯಂತ ವಿಷಾದನೀಯ ಪಾತ್ರವನ್ನು ನಿರ್ವಹಿಸಿದವು. ಇವು, ಮುಸ್ಲಿಮೇತರ ಹೆಸರನ್ನು ಹೊತ್ತ ಮುಸ್ಲಿಮ್ ಸ್ವತ್ತುಗಳನ್ನು ವಿಶೇಷವಾಗಿ ಪಟ್ಟಿಮಾಡಿ ಹೆಸರಿಸಿದವು; ಆಯೆಲ್ಲ ಆಸ್ತಿಪಾಸ್ತಿಗಳು ಬಹುಬೇಗ ಬೂದಿಪಾಲಾದವು.

☐ ಬೀದಿಗಳಲ್ಲಿ ಕಾಳಗ ನಡೆಸುವವರು ಆಘಾತಕಾರಿಯಾದೊಂದು ಅಮಾನವೀಕರಣಕ್ಕೆ ಬಲಿಯಾಗಿದ್ದರು. ಅವರು ಬಹುಪಾಲು ಜನ ಇಪ್ಪತ್ತು ವರ್ಷಗಳಿಗಿಂತ ಕಡಿಮೆ ವಯಸ್ಸಿನವರಾಗಿದ್ದರು. ಹನ್ನೆರಡು-ಹದಿನೈದು ವಯೋಮಾನದ ಹುಡುಗರೂ ಕೊಲೆ-ಸುಲಿಗೆ-ಮಾನಭಂಗಗಳ ಕೇಕೆ ಹಾಕುತ್ತ



ಕುಣಿಯುತ್ತಿದ್ದುದು, ಅಹಿಂಸೆಯ ಜನ್ಮಸ್ಥಳವಾದ ಈ ಪ್ರದೇಶದ ಅಧಃಪತನವನ್ನು ಪ್ರತಿಬಿಂಬಿಸುತ್ತಿತ್ತು. ಇಡೀ ಪ್ರಕರಣದಲ್ಲಿ ಕಂಡುಬಂದ ಹೊಸತೊಂದು ಮನೋವೇಧಕ ಸಂಗತಿಯೆಂದರೆ ಎಷ್ಟೊ ಕಡೆ ಸ್ತ್ರೀಯರೂ ಕೂಡಾ ಸೇಡಿನ ಕ್ರಮವಾಗಿ ಅನ್ಯಧರ್ಮದ ಸ್ತ್ರೀಯರ ಮೇಲಿನ ಹಿಂಸೆ ಹಾಗೂ ಅತ್ಯಾಚಾರಗಳನ್ನು ಪ್ರೋತ್ಸಾಹಿಸುತ್ತಿದ್ದರು.

☐ ಈ ನರಮೇಧ ಅಹಮದಾಬಾದಿನಿಂದ ಬೇರೆ ನಗರಗಳಿಗೂ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸುತ್ತಿದ್ದಂತೆ, ದಂಗೆಕೋರರು ಮುಸ್ಲಿಮ್ ಕೋಮಿನ ಆರ್ಥಿಕ ತಳಹದಿಯನ್ನು ಇಡಿಯಿಡಿಯಾಗಿ ನಾಶಮಾಡುವ ವ್ಯವಸ್ಥಿತ ಪ್ರಯತ್ನದಲ್ಲಿ ತೊಡಗಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು.

••• ••• •••

ಗುಜರಾತಿನಲ್ಲಾದದ್ದು ಗಲಭೆಯೊ... ಅಥವಾ ಜನಾಂಗೀಯ ಹತ್ಯೆಯೊ? ಇಡೀ ದುರ್ಘಟನೆಯ ಎರಡು ಮುಖ್ಯ ಮುಖಗಳನ್ನೊಂದಿಷ್ಟು ಪರಿಶೀಲಿಸೋಣ. ಮೊದಲನೆಯದಾಗಿ, ಮುಸ್ಲಿಮರ ದುಡಿಮೆಯ ಮಾರ್ಗಗಳನ್ನೂ ವ್ಯಾಪಾರ ವ್ಯವಹಾರಗಳನ್ನೂ ನಿರ್ದಿಷ್ಟವಾದ ಗುರಿಗಳನ್ನಾಗಿಟ್ಟುಕೊಂಡು ದಾಳಿಮಾಡಿದಾಗ ಅವುಗಳಷ್ಟೆ ನಾಶವಾಗದೆ ಅವುಗಳು ಯಾವ ವಿಸ್ತೃತ ವ್ಯವಸ್ಥೆಯ ಭಾಗವಾಗಿದ್ದವೊ ಆ ವ್ಯವಸ್ಥೆಯೂ ನಷ್ಟಕ್ಕೊಳಗಾಯಿತು. ಅಲ್ಪಸಂಖ್ಯಾಕ ಕೋಮಿಗೆ ಹಾನಿ ಮಾಡುವ ಹುಚ್ಚು ಆವೇಶದಲ್ಲಿ ಬಹುಸಂಖ್ಯಾಕ ಕೋಮು ತನ್ನನ್ನೂ ಹಾನಿಗೀಡುಮಾಡಿಕೊಂಡಿತು; ಎರಡೂ ಕೋಮುಗಳು ಸೇರಿ ಬೆಳೆದಿದ್ದ ಸಮುದಾಯವೂ ಇದರಿಂದ ಭಗ್ನವಾಯಿತು.

ಎರಡನೆಯದಾಗಿ, ಯಾವುದೆ ಒಂದು ಕ್ರಿಯೆ ಪ್ರತಿಕ್ರಿಯೆಗೆ ದಾರಿಮಾಡಿಕೊಡುವುದು ಅತ್ಯಂತ ಸಹಜ ಎನ್ನುವ ವಾದದ ಪೊಳ್ಳುತನವನ್ನೂ ಅಪಾಯಕಾರಿ ಗುಣವನ್ನೂ ಬಯಲುಗೊಳಿಸಬೇಕಾದುದು ಅತ್ಯವಶ್ಯಕವಾಗಿದೆ. ಹಿಂಸಾಚಾರಕ್ಕೆ ಸಮರ್ಥನೆಯಾಗಿ ಬಳಕೆಯಾಗುವ ಇಂತಹ ಅಸಂಬದ್ಧ ಪ್ರಲಾಪವನ್ನು ಮಾನವ ಇತಿಹಾಸದುದ್ದಕ್ಕೂ ಕೇಳುತ್ತ ಬಂದಾಗಿದೆ. ಇನ್ನು ಅಹಿಂಸೆಯ ಪ್ರವಾದಿ ಮಹಾತ್ಮ ಗಾಂಧಿಯ ನಾಡಿನ ನಾಯಕನೋರ್ವನ ಬಾಯಲ್ಲಿ ಇಂಥ ಮಾತು ಬಂದಾಗಲಂತೂ, ಅದು ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡಲಾಗದ ದೌರ್ಬಲ್ಯವನ್ನು – ಅಥವಾ ಕಾಪಾಡುವ ಇಚ್ಛೆಯಿಲ್ಲದ ಮನಃಸ್ಥಿತಿಯನ್ನು – ಮುಚ್ಚಿಟ್ಟುಕೊಳ್ಳಲು ಬಳಕೆಯಾಗುವ ಮುಸುಕಷ್ಟೆ ಎಂದೆನಿಸದಿರಲಾರದು.

ಮುಂಬಯಿಯ ಶಿವಸೇನಾ ನಾಯಕರು ಮೊನ್ನೆ ಇದೇ ರೀತಿಯ ತರ್ಕವೊಂದನ್ನು ಬಳಸಲೆತ್ನಿಸಿದರು. ಅವರ ಮುಖಂಡನೋರ್ವ ಕಾರು ಅಪಘಾತದಲ್ಲಿ

ಮರಣಾಂತಿಕವಾಗಿ ಗಾಯಗೊಂಡ. ಠಾಣೆಯ ಖಾಸಗಿ ಆಸ್ಪತ್ರೆಯೊಂದರಲ್ಲಿ ಆತನಿಗೆ ತುರ್ತು ಚಿಕಿತ್ಸೆ ನೀಡಲಾಯಿತಾದರೂ ಅದು ಪ್ರಯೋಜನವಾಗದೆ ಆತ ಅಲ್ಲಿಯೆ ತೀರಿಕೊಂಡ. ರೊಚ್ಚಿಗೆದ್ದ ಶಿವಸೈನಿಕರು ಆಸ್ಪತ್ರೆಗೆ ಬೆಂಕಿಯಿಟ್ಟರು. ಆಸ್ಪತ್ರೆಯ ಮಾಲೀಕರು ದೂರು ನೀಡಿ, ಆದ ನಷ್ಟವನ್ನು ದೊಂಬಿಕೋರರಿಂದ ತುಂಬಿಸಿಕೊಡಬೇಕೆಂದು ನ್ಯಾಯಾಂಗಕ್ಕೆ ಮನವಿ ಸಲ್ಲಿಸಹೊರಟಾಗ, ಶಿವಸೇನೆಯ ನಾಯಕರು, ತಮ್ಮ ಸೈನಿಕರು ಮುಖಂಡನ ದುರ್ಮರಣದಿಂದ ಸಹಜವಾಗಿಯೆ ಸ್ಥಿಮಿತ ಕಳೆದು ಕೊಂಡಿದ್ದರೆಂದೂ, ಹಾಗಾಗಿ ಅವರ ಆ ಕೃತ್ಯವನ್ನು ಅಪರಾಧವೆಂದಲ್ಲದೆ 'ಅಸಹಜ ಸ್ಥಿತಿ'ಯ ನಡವಳಿಕೆಯೆಂದು ಪರಿಗಣಿಸಿ ಮನ್ನಿಸಬೇಕೆಂದೂ ಕೋರಿ ಕೊಂಡರು. ಒಂದು ಪಕ್ಷ ಆಸ್ಪತ್ರೆ ಅವರದ್ದೆ ಆಗಿ, ಇನ್ಯಾರೋ ಅಂಥದೆ ಕಾರಣಕ್ಕಾಗಿ ಅದನ್ನು ಸುಟ್ಟುಹಾಕಿದ್ದಲ್ಲಿ ಅವರು ಈ ತರ್ಕವನ್ನು ಒಪ್ಪಿಕೊಳ್ಳುತ್ತಿದ್ದರೇನು ?

ಗುಜರಾತ್ ಗಣಿತದ ಕೆಲವು ಲೆಕ್ಕಾಚಾರಗಳನ್ನೆ ನೋಡಿ:

☐ ಗೋಧ್ರಾದಲ್ಲಿ ಐವತ್ತೇಳು ಕರಸೇವಕರು ಅತ್ಯಂತ ಅಮಾನವೀಯ ರೀತಿಯಲ್ಲಿ (ಇದನ್ನು ಮತ್ತೊಮ್ಮೆ ಒತ್ತಿ ಹೇಳುತ್ತಿದ್ದೇನೆ – ಅತ್ಯಂತ ಅಮಾನವೀಯ ರೀತಿಯಲ್ಲಿ) ಹತ್ಯೆಗೊಳಗಾದರು.

☐ ಈ ದುಷ್ಟ ಕ್ರಿಯೆಗೆ 'ಸಹಜ' ಪ್ರತಿಕ್ರಿಯೆಯಾಗಿ, ದೂರದ ನಗರವೊಂದರಲ್ಲಿ ಸುಮಾರು ಆರುನೂರು ನಿರ್ದೋಷಿಗಳನ್ನು ಕೊಲ್ಲಲಾಯಿತು; ಅದಾದ ಮೇಲೆ ರಾಜ್ಯದ ಬೇರೆ ಬೇರೆ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಇನ್ನೂ ನೂರಾರು ಜನರನ್ನು ಬಲಿ ಕೊಡಲಾಯಿತು.

☐ ಇಂಥ ಸನ್ನಿವೇಶದಲ್ಲಿ, ಗೋಧ್ರಾ, ಅಹಮದಾಬಾದ್ ಮತ್ತು ಇನ್ನಿತರ ಕಡೆಗಳಲ್ಲಿ ಅಪರಾಧಗೈದವರನ್ನು ಹಿಡಿದು ಶಿಕ್ಷಿಸುವಲ್ಲಿ ಸರ್ಕಾರ ಆಸಕ್ತಿ ತೋರದಿದ್ದಲ್ಲಿ, ಆ ಸರ್ಕಾರ ಹಾಗೂ ಅದನ್ನು ಆರಿಸಿದ ನಾವು, ಗೋಧ್ರಾದಲ್ಲಿ ಹತ್ಯೆಯಾದ ಪ್ರತಿಯೊಬ್ಬ ಕರಸೇವಕನಿಗೆ ಪ್ರತಿಯಾಗಿ ಹದಿನೆಂಟು ಅಮಾಯಕರನ್ನು ಕೊಂದಿದ್ದು ನ್ಯಾಯಸಮ್ಮತವಾದುದು ಎಂಬ ತತ್ವವನ್ನು ಒಪ್ಪಿಕೊಂಡಂತಾಗುತ್ತದೆ.

☐ ಇಂಥ ವಾದಸರಣಿಯನ್ನು ಇನ್ನೊಂದಿಷ್ಟು ಬೆಳೆಸಿದರೆ ಏನಾಗಬಹುದು ? ಈಗ ಬಲಿಯಾಗಿರುವ ಒಂದು ಸಾವಿರ ಜನರಿಗೆ ಪ್ರತಿಯಾಗಿ, ಸಹಜ ಭಾವನಾತ್ಮಕ ಪ್ರತಿಕ್ರಿಯೆಯಾಗಿ, ೧೮:೧ರ ದಾಮಾಶಾದಲ್ಲಿ ಇನ್ನೂ ೧೮,೦೦೦ ಜನರನ್ನು ಬಲಿಕೊಡಬಹುದೆ ? ಮೊದಲ ಲೆಕ್ಕಾಚಾರ ತಪ್ಪಲ್ಲವೆಂದ ಮೇಲೆ ಅದರದೆ ತಾರ್ಕಿಕ ಮುಂದುವರಿಕೆಯಾದ ಈ ಎರಡನೆಯ ಲೆಕ್ಕಾಚಾರವನ್ನು ತಪ್ಪೆಂದು ಹೇಗೆ ಹೇಳುವುದು ?



☐ ಈ ರಾಜ್ಯದ ಜನತೆ, ಅದರಲ್ಲೂ ವಿಶೇಷವಾಗಿ ನಾವು ವ್ಯಾಪಾರಸ್ಥರು, ಈ ಮಿಥ್ಯಾತರ್ಕಸರಣಿಯನ್ನು ಖಂಡಿಸಲು ಸಾಧ್ಯವಿರುವ ಸರ್ವಪ್ರಯತ್ನವನ್ನೂ ಮಾಡಬೇಕು. ಇಂಥ ಪ್ರಳಯಪ್ರಿಯ ವಾದ, ಸ್ವಾರ್ಥಿ ರಾಜಕಾರಣದ ತತ್ವ, ಗುಜರಾತನ್ನು ಮಾತ್ರವಲ್ಲ ಕೊನೆಗೆ ಇಡಿಯ ಭಾರತವನ್ನೂ ಸುಟ್ಟುಹಾಕಬಹುದು.

••• ••• •••

ಇಡೀ ಪ್ರಕರಣದಿಂದ ನಿಜವಾಗಿಯೂ ನಷ್ಟಕ್ಕೀಡಾಗುವವರು ಯಾರು ? ಇಂಥ ದುರ್ಘಟನೆಗಳು ಇಂದಿನ ಕಾಲದಲ್ಲಂತೂ ಕ್ಷಣ ಕವಿದು ಕರಗಿಹೋಗುವ ಮೋಡಗಳಂತಲ್ಲ; ಅವುಗಳ ಕರಿನೆರಳು ಬಹುಕಾಲ ಕಾಡಬಹುದು, ಹೀಗೆ:

☐ ರಕ್ಷಣೆಯಿಲ್ಲದೆಡೆ ನೆಲೆಸಲಾರದೆ ಕೂಲಿಕಾರ್ಮಿಕರು, ಕರಕುಶಲಿಗಳು ಗುಜರಾತನ್ನು ತೊರೆದು ನಡೆಯಬಹುದು. ಅದರಿಂದ ಇಲ್ಲಿ ಮಾತ್ರವಲ್ಲ ಬೇರೆ ರಾಜ್ಯಗಳಲ್ಲಿಯೂ ಬಡತನ ಹಾಗೂ ನಿರುದ್ಯೋಗದ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಳ್ಳಬಹುದು.

☐ ಗಲಭೆಗಳ ವೇಳೆ ಅತಿ ಬಡವ ದಿನಗೂಲಿ ಕೆಲಸಗಾರರೆ ಹೆಚ್ಚು ಸಂಕಷ್ಟಕ್ಕೆ ಒಳಗಾಗುವವರು. ನಮ್ಮ ನಗರಗಳಲ್ಲಿ ಈ ನಿರ್ದಿಷ್ಟ ವರ್ಗದಲ್ಲಿ ಮುಸ್ಲಿಮರಿಗಿಂತ ಹಿಂದುಗಳೆ ಅಧಿಕ ಸಂಖ್ಯೆಯಲ್ಲಿರುವವರು. ಹೀಗಾಗಿ ಗಲಭೆಗಳಿಂದಾಗಿ ಹೆಚ್ಚು ಹೊಡೆತ ಬಿದ್ದಿರುವುದು ಬಹುಸಂಖ್ಯಾಕ ಸಮುದಾಯಕ್ಕೆಯೆ ಹೊರತು ಅಲ್ಪಸಂಖ್ಯಾತರಿಗಲ್ಲ; ಮತ್ತು ಈ ಹೊಡೆತ ಅವರ ಹೊಟ್ಟೆಗೆಯೆ ಸಂಬಂಧಿಸಿದ್ದು.

☐ ಗಲಭೆಗಳಲ್ಲಿ ಒಬ್ಬ ವ್ಯಕ್ತಿ ಬಲಿಯಾದರೆ ಸಾಮಾನ್ಯವಾಗಿ ಒಂದು ಕುಟುಂಬ ಅನಾಥವಾಗುತ್ತದೆ, ತನ್ನ ಆರ್ಥಿಕ ಆಧಾರವನ್ನು ಕಳೆದುಕೊಳ್ಳುತ್ತದೆ; ನೂರಾರು ಜನ ಬೀದಿಗೆ ಬೀಳುತ್ತಾರೆ. ಹೀಗೆ ಜನರು ಬಡವರಾಗುತ್ತ ನಡೆದಲ್ಲಿ ವಾಣಿಜ್ಯ ಕ್ಷೇತ್ರಕ್ಕೆ ಏನು ತಾನೆ ಲಾಭವಿದ್ದೀತು ?

☐ ಆರ್ಥಿಕ ವ್ಯವಸ್ಥೆಗಳು ಬಂಡವಾಳ ಹೂಡಿಕೆಯನ್ನು ಆಕರ್ಷಿಸಬೇಕಾದಲ್ಲಿ ಅವು ಸುಭದ್ರವಾಗಿರಬೇಕು, ಅವುಗಳ ಭವಿಷ್ಯ ಆಶಾದಾಯಕವಾಗಿರಬೇಕು. ಗಲಭೆಗಳ ಕಾರಣದಿಂದ ರಾಜ್ಯದಿಂದ ಎಷ್ಟು ಬಂಡವಾಳ ಪರರಾಜ್ಯಗಳಿಗೆ ಪಲಾಯನ ಗೈಯಿತೆಂಬುದು ಈ ಕ್ಷಣಕ್ಕೆ ತಿಳಿಯದಿದ್ದರೂ ಅದರ ಒಟ್ಟೂ ಮೊತ್ತವೆಷ್ಟೆಂಬುದು ಸದ್ಯದಲ್ಲೆ ಸ್ಪಷ್ಟವಾಗಲಿದೆ. ರಾಜ್ಯದಲ್ಲಿ ಈಗಿಂದೀಗಲೇ ಶಾಂತಿ ಮರುಸ್ಥಾಪನೆಯಾಗದಿದ್ದಲ್ಲಿ ನೂರಾರು ಕೋಟಿ ರೂಪಾಯಿಗಳಷ್ಟು ಹೂಡಿಕೆ ಇಲ್ಲಿಂದ ಹೊರ ಸಾಗಿ ಹೋಗುವುದಂತೂ ದಿಟ. 'ಕೆಲವು ಜನರಿಗೆ ಪಾಠ ಕಲಿಸಬೇಕು' ಎನ್ನುವ

ಬೆರಳೆಣಿಕೆಯಷ್ಟು ಸಂಖ್ಯೆಯ ನಾಯಕರ ತೆವಲು ತೀರಲು ಇಡಿಯ ರಾಜ್ಯದ ಪ್ರಜೆಗಳು ತಮ್ಮ ಜೀವ-ಜೀವನೋಪಾಯಗಳ ಬೆಲೆ ತೆರಬೇಕೆ?

□ ಕೊನೆಯದಾಗಿ, (ವಾದವನ್ನು ಆರ್ಥಿಕ ವಿಷಯಗಳಿಗಷ್ಟೆ ಸೀಮಿತಗೊಳಿಸಿಕೊಂಡು, ಮುಂದುವರೆಸಿಕೊಂಡು ಹೇಳುವುದಾದರೆ) ಭಾರತೀಯ ವಾಣಿಜ್ಯ ಹಾಗೂ ಉದ್ಯಮ ವಲಯಗಳು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ, ತಾವು ಜಾಗತಿಕ ಸ್ತರದಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಲು ಸಹಾಯ ಮಾಡದಿದ್ದ ಎಲ್ಲ ಕೇಂದ್ರ ಸರ್ಕಾರಗಳನ್ನೂ ಪದೇಪದೆ ಖಂಡಿಸುತ್ತಲೇ ಬಂದಿವೆ. ಹೀಗಿರುವಾಗ, ಗುಜರಾತಿನಲ್ಲಿ ಈಗ ನಡೆಯುತ್ತಿರುವುದು, ಉದ್ಯಮ ಕ್ಷೇತ್ರ ಅದರ ವಿರುದ್ಧ ಚಕಾರವೆತ್ತದಿರುವುದು ಎರಡೂ ಸೇರಿಕೊಂಡು ರಾಜ್ಯದ ಸ್ಪರ್ಧಾಶಕ್ತಿಯನ್ನು ನೇರವಾಗಿ ಹಾಗೂ ಗಣನೀಯವಾಗಿ ತಗ್ಗಿಸುವುದಂತೂ ಖಂಡಿತ. ಬ್ರಿಟಿಷ್ ಗ್ಯಾಸ್, ಮ್ಯಾಕ್‌ಡೊನಾಲ್ಡ್ಸ್, ಸ್ಯಾಮ್‌ಸಂಗ್, ಎಲ್‌ಜಿ ಮುಂತಾದ ಸಂಸ್ಥೆಗಳು ಗುಜರಾತಿನಲ್ಲಿರುವ ತಮ್ಮ ಹೂಡಿಕೆಗಳ ಬಗ್ಗೆ ಈಗಾಗಲೆ ಮರುಚಿಂತನೆ ನಡೆಸಲು ಪ್ರಾರಂಭಿಸಿಯಾಗಿದೆ.

••• ••• •••

ನಾವು ನಿಜವಾಗಿಯೂ ಸೆಕ್ಯುಲರ್ ಆದ ರಾಷ್ಟ್ರವೇ? 'ಸೆಕ್ಯುಲರಿಸಮ್' ಪದ ಹಾಗೂ ಪರಿಕಲ್ಪನೆಗಳ ಬಗೆಗಿನ ವಾದ-ವಿವಾದಗಳ ಕಥೆ ಏನೇ ಇರಲಿ, ಜಗತ್ತಿನ ಜನಸಮುದಾಯ 'ಸರ್ಕಾರ ಧರ್ಮ-ಧರ್ಮಗಳ ನಡುವೆ ಭೇದಭಾವ ಮಾಡದಿರುವುದು; ಧರ್ಮದ ಬಗ್ಗೆ ಅಲಿಪ್ತವಾಗಿರುವುದು; ಸರ್ಕಾರ ಹಾಗೂ ಧರ್ಮಗಳು ಪರಸ್ಪರ ಹಸ್ತಕ್ಷೇಪದಲ್ಲಿ ತೊಡಗದಿರುವುದು' ಎಂದೆ ಸರ್ವಸಾಮಾನ್ಯವಾಗಿ ಅರ್ಥೈಸಿಕೊಂಡಿದೆ. ಈ ವ್ಯಾಖ್ಯಾನದ ಪ್ರಕಾರ, ಎಲ್ಲಿ ಪ್ರಜೆಯೊಬ್ಬ ಯಾರೂ ತನ್ನ ಧರ್ಮದ ಕಾರಣಕ್ಕಾಗಿ ತನಗೆ ಕಿರುಕುಳ ಹಿಂಸೆಗಳನ್ನು ನೀಡಲಾರರು ಎನ್ನುವ ನಂಬಿಕೆಯೊಂದಿಗೆ ತನ್ನ ನಿತ್ಯ ವ್ಯವಹಾರಗಳಲ್ಲಿ ತೊಡಗಬಲ್ಲನೊ ಅದುವೆ ಸೆಕ್ಯುಲರ್ ಆದೊಂದು ಸಮಾಜ. ಅಲ್ಲಿ ಧರ್ಮ ಮನೆ, ಕುಟುಂಬ, ದೇವಸ್ಥಾನ, ಚರ್ಚು, ಮಸೀದಿಗಳೊಳಗಿನ ವಿಷಯವೆ ಹೊರತು ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ವಿಷಯವಲ್ಲ.

ಭಾರತದಲ್ಲಿ ಸೆಕ್ಯುಲರ್ ಸರ್ಕಾರಿ ವ್ಯವಸ್ಥೆಗಳು ನೆಲೆಗೊಳ್ಳಲು ಇಷ್ಟು ಕಷ್ಟವಾಗುತ್ತಿರುವುದೇಕೆ? ಇದನ್ನು ಪರಿಶೀಲಿಸುವಲ್ಲಿ ನಾವು ಇನ್ನಷ್ಟು ಕಟು ಸತ್ಯಗಳಿಗೆ ಮುಖಾಮುಖಿಯಾಗಲೇಬೇಕು:

ಆಧುನಿಕಪೂರ್ವ ಭಾರತ ಗಾಢ ಮತಾಂಧತೆಯಿಂದ ಕೂಡಿತ್ತು. ಅಲ್ಲಿ



ಹಿಂದೂಗಳು ಆಳುತ್ತಿದ್ದ ರಾಜ್ಯಗಳಲ್ಲಿ ಪ್ರಜೆಗಳ ನಡುವೆ ಸಮಾನತೆಯಿರಲಿಲ್ಲ, ನ್ಯಾಯ-ಕಾನೂನುಗಳ ವಿಷಯದಲ್ಲಿ ಸಮಾನತೆಯಿರಲಿಲ್ಲ; ಬಹುಪಾಲು ಸಂಗತಿಗಳು ಜಾತಿವರ್ಗೀಕರಣವನ್ನು ಆಧರಿಸಿದ್ದವು; ಶಿಕ್ಷೆಯೂ ಜಾತಿಸ್ತರದ ಮೇರೆಗೆಯೆ ನಿರ್ಧರಿತವಾಗುತ್ತಿತ್ತು. ಅದೇ ರೀತಿ, ಮುಸ್ಲಿಮ್ ಆಳ್ವಿಕೆಯ ರಾಜ್ಯಗಳಲ್ಲಿ ಇತರ ಧಾರ್ಮಿಕರೆಲ್ಲರೂ ಎರಡನೆ ದರ್ಜೆಯ ಪ್ರಜೆಗಳಾಗಿ ಬಾಳಬೇಕಿತ್ತು. ಇಂಥ ತಾರತಮ್ಯ ತುಸುವಾದರೂ ತಗ್ಗಿದ್ದು, ಸಮಾನತೆ ಸ್ವಲ್ಪವಾದರೂ ಸಾಧ್ಯವಾದದ್ದು ಆಧುನಿಕ ಭಾರತದಲ್ಲಿ ಮಾತ್ರ.

ಆದರೆ, ೧೯೭೦ರ ದಶಕದಲ್ಲಿ, ಇಂದಿರಾಗಾಂಧಿ ಈ ಹೊಸ ಪ್ರಗತಿಪರ ಬೆಳವಣಿಗೆಯನ್ನು ಕುಂಠಿತಗೊಳಿಸುವ ನಿರ್ಲಜ್ಜ ಪ್ರಯತ್ನಗಳನ್ನು ನಡೆಸಿದರು; ಕ್ಷತ್ರಿಯ-ಹರಿಜನ-ಆದಿವಾಸಿ-ಮುಸ್ಲಿಮರನ್ನು ಒಳಗೊಂಡ ವೋಟ್‌ಬ್ಯಾಂಕೊಂದನ್ನು ಕಟ್ಟಿಕೊಂಡು ಸರ್ವಸಮಾನತೆಯ ಕನಸನ್ನು ಭಂಗಗೊಳಿಸಿದರು. ಆ ತಂತ್ರಗಳನ್ನು ನಮ್ಮ ನಾಯಕರು ಇಂದಿಗೂ ಮುಂದುವರೆಸಿಕೊಂಡು, ಗೆದ್ದುಕೊಂಡು ಬಂದಿದ್ದಾರೆ. ಉದಾಹರಣೆಗೆ, ಬಿಹಾರದ ಪ್ರಮುಖ ರಾಜಕಾರಣಿಯೊಬ್ಬ ಚುನಾವಣೆಯ ಲೆಕ್ಕಾಚಾರ ಹಾಕಿ ಅಲ್ಲಿಯ ಯಾದವರನ್ನೂ ಮುಸ್ಲಿಮರನ್ನೂ ಒಗ್ಗೂಡಿಸುವ ಉಗ್ರ ಪ್ರಯತ್ನಗಳನ್ನು ನಡೆಸಿದಾಗ ಅದರ ಬಗ್ಗೆ ನಾವ್ಯಾರೂ ಚಕಾರವೆತ್ತುವುದಿಲ್ಲ. ಇಡೀ ದೇಶದ ರಾಜಕೀಯ ಭಾವಾವರಣ ಹೀಗಿರುವಾಗ, ಪಟೇಲ-ಬನಿಯಾ-ಬ್ರಾಹ್ಮಣರು ಜನಸಂಖ್ಯೆಯ ಶೇಕಡಾ ಮೂವತ್ತೈದರಷ್ಟಿರುವ ಗುಜರಾತಿನಲ್ಲಿ ಜಾತಿ-ರಾಜಕಾರಣ ನಿರಾತಂಕವಾಗಿ ತನ್ನ ಆಟವನ್ನಾಡುತ್ತಿರುವುದರಲ್ಲಿ ಆಶ್ಚರ್ಯವೇನಿದೆ?

ಜಾತಿ ಹಾಗೂ ಧರ್ಮಗಳನ್ನು ಸಾರ್ವಜನಿಕ ವಲಯದಿಂದ ಹೊರಗಿಡದ ಹೊರತು ಸೆಕ್ಯುಲರ್ ರಾಷ್ಟ್ರವೊಂದನ್ನು ನಾವು ಕಟ್ಟಲಾರೆವು; ಸರ್ವಸಮಾನತೆಯನ್ನು ಸ್ಥಾಪಿಸದ ಹೊರತು ಸುಖ-ಶಾಂತಿ-ನ್ಯಾಯಗಳ ಸಮಾಜವನ್ನು ನಿರ್ಮಿಸಲಾರೆವು.

••• ••• •••

ಸಂಘ ಪರಿವಾರದವರೇನೊ ಮುಸ್ಲಿಮರಿಗೆ ತಕ್ಕ ಶಾಸ್ತಿ ಮಾಡಿದೆವೆನ್ನುವ ತೃಪ್ತಿಯಲ್ಲಿ ತೇಗಿ ಬೀಗಬಹುದು. ಆದರೆ ಆ ತೃಪ್ತಿ ಎಷ್ಟು ತಾತ್ಕಾಲಿಕವಾದುದಾಗಿರಬಹುದು ಎನ್ನುವುದರ ಅರಿವು ಅವರಿಗಿಲ್ಲ. ಅವರು ನಡೆಸಿದ ಅವಾಂತರ-ಅನಾಚಾರಗಳ ಒಂದು ಅತಿ ಸಂಭವನೀಯ ಪರಿಣಾಮವೆಂದರೆ, ಅವರಲ್ಲಿ, ಅವರಿಗೆ ಬಲಿಯಾದ ಮುಸ್ಲಿಮ್ ಹಾಗೂ ದಲಿತ ಸಮುದಾಯಗಳಲ್ಲಿ ಮೂವರಲ್ಲೂ ಕೂಡ ಭಯೋತ್ಪಾದಕರ ಹೊಚ್ಚಹೊಸ ಪೀಳಿಗೆಗಳೆ ಹುಟ್ಟಬಹುದು. ಇಂಥ ಹಿಂಸಾಪ್ರಿಯರು ಭಾರತದ

ನಗರನಗರಗಳಲ್ಲಿ ನಿಲುಗಡೆಯೆ ಇಲ್ಲದಂತೆ ತಮ್ಮ ರಕ್ಕಸನರ್ತನ ನಡೆಸಿದಲ್ಲಿ ದೇಶದ ಗತಿಯೇನಾಗಬಹುದು? ಅಂಥ ಅತಿರೇಕದ ಲೋಕದಲ್ಲಿ ಹಿಂದೂಗಳೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಹೇಗೆ? ನಾವು ಭಾರತೀಯರು ನಮ್ಮ ಪಶ್ಚಿಮೋತ್ತರ ದಿಕ್ಕಿಗಿರುವ ಪಕ್ಕದ ದೇಶಕ್ಕಿಂತ ಯಾವ ರೀತಿಯಲ್ಲೂ ಭಿನ್ನರಲ್ಲ ಎಂದು ತೋರಿಸಿಕೊಟ್ಟಮೇಲೆ ವಿಶ್ವ ಸಮುದಾಯ ನಮ್ಮ ಬಗ್ಗೆ ವಿಶ್ವಾಸ-ಗೌರವಗಳನ್ನು ಅದಾವ ರೀತಿಯಲ್ಲಿ ತಾನೆ ತೋರಿಸೀತು?

ವಾಸ್ತವ ಹೀಗಿರುವಾಗ, ಮೂಲಭೂತವಾದಿಗಳ ದ್ವೇಷಯುತ, ಆತ್ಮಹತ್ಯಾತ್ಮಕ ನಡೆನುಡಿಗಳನ್ನು ಆಧುನಿಕರೂ ಧರ್ಮನಿರಪೇಕ್ಷರೂ ಆದ ನಾವೆಲ್ಲ ತೀವ್ರವಾಗಿ ಖಂಡಿಸಲೆಬೇಕು; ಅಲ್ಪಸಂಖ್ಯಾಕರ ಬಗ್ಗೆ ವಿಷ ಕಾರುವ ಪ್ರಚಾರದಲ್ಲಿ ತೊಡಗಿರುವವರನ್ನು ನಿಯಂತ್ರಿಸುವಂತೆ ಸರ್ಕಾರಗಳನ್ನು ಒತ್ತಾಯಿಸಬೇಕು.

ಅಲ್ಪಸಂಖ್ಯಾಕರ ಹಕ್ಕುಗಳು ಮೂಲದಲ್ಲಿ ಮಾನವ ಹಕ್ಕುಗಳೆ ಹೌದು; ಅವೆರಡನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಇತಿಹಾಸ ನಮಗೆ ಕಲಿಸಿಕೊಟ್ಟಿರುವ ಮರೆಯಬಾರದ ಒಂದು ಪಾಠವೆಂದರೆ, ತನ್ನೊಳಗಿನ ಅಲ್ಪಸಂಖ್ಯಾಕರನ್ನು ಘಾಸಿಗೀಡುಮಾಡುವ ಸಮಾಜ ಅಂತಿಮವಾಗಿ ತನ್ನನ್ನೆ ಘಾಸಿಗೊಳಿಸಿಕೊಳ್ಳುತ್ತದೆ. ನಾವು ನಿರ್ಲಕ್ಷಿಸಲಾಗದ ಇನ್ನೊಂದು ವಾಸ್ತವ ಇದು: ನಮ್ಮ ದೇಶ, ಒಂದು ಅರ್ಥದಲ್ಲಿ, ಅಲ್ಪಸಂಖ್ಯಾಕರಿಂದಲೇ ತುಂಬಿಕೊಂಡಿದೆ; ಇವರು ಬರಿಯೆ ಕ್ರೈಸ್ತರು, ಬೌದ್ಧರು, ಸಿಖ್ಖರು, ಜೈನರು, ಪಾರ್ಸಿಗಳು, ಮುಸ್ಲಿಮರು ಮಾತ್ರವಲ್ಲ, ಹಿಂದೂ ಸಮುದಾಯದೊಳಗೆಯೆ ಅತ್ಯಧಿಕ ಸಂಖ್ಯೆಯ ಅಲ್ಪಸಂಖ್ಯಾಕರಿದ್ದಾರೆ. ಹಾಗೆ ನೋಡಿದಲ್ಲಿ ಹಿಂದೂ ಬಹುಸಂಖ್ಯಾಕರಾದರೂ ಯಾರು, ಎಲ್ಲಿದ್ದಾರೆ? ತಮಿಳುನಾಡಿನಲ್ಲಿ ಈ ಮೊದಲಿದ್ದ ಬ್ರಾಹ್ಮಣ ಪ್ರಾಬಲ್ಯದ ಇಂದಿನ ಕಥೆಯೇನು? ದೇಶದೆಲ್ಲೆಡೆ ಕೆಳಜಾತಿಗಳು ಒಗ್ಗೂಡುತ್ತಿರುವಾಗ ಮೇಲುಜಾತಿಗಳ ಗತಿ ಏನಾಗಿದೆ? ಅನೇಕ ರಾಜ್ಯಗಳಲ್ಲಿರುವ ದಲಿತರ ಸಂಖ್ಯಾಬಲವನ್ನು ಯಾರಾದರೂ ಗಂಭೀರವಾಗಿ ಪರಿಗಣಿಸಿದ್ದಾರೊ? ಈಗ ಆದಿವಾಸಿಗಳೂ ಕೂಡ ಸಂಘಟಿತರಾಗಿ ತಮ್ಮ ನೈಸರ್ಗಿಕ ಹಾಗೂ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡತೊಡಗಿದ್ದಾರೆ. ಇಂಥಲ್ಲಿ ಬಹುಸಂಖ್ಯಾಕರು ಯಾರು, ಅಲ್ಪಸಂಖ್ಯಾಕರು ಯಾರು? ತುಸುವೆ ಹಿಂದಿನ ಇತಿಹಾಸದಲ್ಲಿ, ಮುಘಲ್ ಸಾಮ್ರಾಜ್ಯದ ಅಧಿಕಾರಿಗಳಲ್ಲಿ ಅರ್ಧಕ್ಕೂ ಹೆಚ್ಚು ಜನ ರಜಪೂತರಾಗಿದ್ದರು ಎಂಬುದು ನಮಗೆ ಮರೆತೆಹೋಯಿತೆ?

ನನ್ನ ಈಯೆಲ್ಲ ಮಾತುಗಳ ಅರ್ಥ, ಕಿರಿಕಿರಿಯ ಮುಜುಗರದ ಜಾತಿ-ರಾಜಕೀಯದ ಇಂಥ ಕೊಳಕು ವಿಷಯಗಳನ್ನೆಲ್ಲ ನಾವು ಮೇಲೆ ಕಾಣದಂತೆ ಗುಡಿಸಿ



ಕುರ್ಚಿಮೇಜುಗಳ ಕೆಳಗೆ ಅಡಗಿಸಿಡಬೇಕು ಎಂದಲ್ಲ. ಬದಲಿಗೆ, ಜಾತಿ ಆಧಾರದ ಮೇಲೆ ಹೋಳುಹೋಳಾದ ಭಾರತ ನಮ್ಮ ಕನಸಿನ ಭಾರತವಲ್ಲ ಎಂದು ಸರ್ಕಾರಗಳಿಗೆ ನಾವು ಸ್ಪಷ್ಟಪಡಿಸಬೇಕಿದೆ. ನಾವು ನಮ್ಮ ಸೋಪು, ಸೈಕಲ್ಲು, ಔಷಧಿ, ಬಟ್ಟೆಬರೆ, ಬಿಸ್ಕತ್ತು, ಟೆಲಿವಿಷನ್ನುಗಳನ್ನು ತಯಾರಿಸುವುದು ಆ ಜಾತಿ ಈ ಜಾತಿಗೆಂದಲ್ಲ. ನಾವು ನಮ್ಮ ಕಾರ್ಖಾನೆಗಳಲ್ಲಿ ಕೆಲಸಗಾರರನ್ನು ನೇಮಿಸಿಕೊಳ್ಳುವುದು ಅವರ ಕಾರ್ಯದಕ್ಷತೆಯನ್ನು ನೋಡಿಯೆ ಹೊರತು ಅವರು ಆ ಜಾತಿ ಈ ಜಾತಿಯವರೆಂದಲ್ಲ. ಇಂತಹ ನಾವು ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳ ಅಭಿವೃದ್ಧಿಯನ್ನು ಬಯಸುವವರೆಂದೂ, ಧಾರ್ಮಿಕ ಹಕ್ಕುಗಳು ಅಥವಾ ಅಲ್ಪಸಂಖ್ಯಾಕ ಹಕ್ಕುಗಳಿಗಿಂತ ಮುಖ್ಯವಾಗಿ ಮಾನವ ಹಕ್ಕುಗಳಲ್ಲಿ ನಂಬಿಕೆಯಿಟ್ಟವರೆಂದೂ ದನಿಯೆತ್ತರಿಸಿ ಈಗಲಾದರೂ ಹೇಳಬೇಕಾಗಿದೆ.

ವ್ಯವಹಾರ ಕ್ಷೇತ್ರ ಈಗಲಾದರೂ ಕ್ರಿಯಾಶೀಲವಾಗಬೇಕಾಗಿದೆ, ಆಗಬಲ್ಲುದು ಕೂಡಾ. ಅತ್ಯಂತ ಮುಖ್ಯ ಮೂಲಸ್ತರದ ನೈತಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಸಂಪೂರ್ಣ ಬದಿಗಿಟ್ಟೂ, ಸದ್ಯಕ್ಕೆ ಆರ್ಥಿಕ ಆಯಾಮದ ಮೇಲಷ್ಟೆ ಕಣ್ಣಿಟ್ಟೂ ನಾವು ಕೆಲವು ಸ್ಪಷ್ಟಾತಿಸ್ಪಷ್ಟ ಸಾರ್ವಜನಿಕ ನಿಲುವುಗಳನ್ನು ತಳೆಯಬೇಕಾಗಿದೆ. ಉದಾಹರಣೆಗೆ, ಸರ್ಕಾರ, ತನ್ನ ಸ್ವಂತ ಶಕ್ತಿಯ ಮೇಲೆಯೊ ಇಲ್ಲ ಇನ್ನಿತರರ ಸಹಾಯವನ್ನು ಪಡೆದೊ, ಒಟ್ಟು ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆಗಳು ನೆಲೆಯಾಗುವಂತೆ ಮಾಡಬೇಕು; ನಿಷ್ಪಕ್ಷಪಾತವಾಗಿ ನಡೆದುಕೊಂಡು ಗೋಧ್ರಾ ಹತ್ಯಾಕಾಂಡ ಹಾಗೂ ಇತರೆಡೆ ನಡೆದ ಹತ್ಯಾಕಾಂಡಗಳಲ್ಲಿ ಭಾಗಿಯಾದವರನ್ನು ಬಂಧಿಸಿ ಅವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಬೇಕು ಎಂದು ನಾವು ಒತ್ತಾಯಿಸಬೇಕು. ಒಂದು ಪಕ್ಷ ಸರ್ಕಾರ ಕರ್ತವ್ಯಚ್ಯುತಿ ತೋರಿದಲ್ಲಿ, ನಾವೇ ನಾಗರಿಕ ವಿಚಾರಣಾ ಆಯೋಗಗಳನ್ನು ರೂಪಿಸುವ ಪರ್ಯಾಯಮಾರ್ಗವನ್ನು ಶೋಧಿಸಬೇಕು; ಅಂಥ ವೇದಿಕೆಗಳಿಗೆ ಸ್ವತಂತ್ರ ವಿಚಾರಣೆಗಳನ್ನು ನಡೆಸುವಲ್ಲಿ, ಸಾಕ್ಷಿಗಳು ಅವುಗಳೆದುರು ನಿರ್ಭಯವಾಗಿ ಮಾಹಿತಿ ನೀಡುವಲ್ಲಿ ಹಾಗೂ ಅಂತಿಮವಾಗಿ ಸ್ಥಾಪಿತವಾದ ಸತ್ಯಾಂಶಗಳನ್ನು ಸಾರ್ವಜನಿಕರೆದುರು ಪ್ರಸ್ತುತಪಡಿಸುವಲ್ಲಿ ನಾವು ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಬೇಕು.

ನಮ್ಮ ಒಕ್ಕೂಟದ ಗುಜರಾತ್ ಶಾಖೆ ಈಗ ರೂಪಿಸುತ್ತಿರುವ ಮತ್ತು ಸ್ವಯಂಸೇವಾ ಸಂಸ್ಥೆಗಳು ಈಗಾಗಲೆ ನಡೆಸುತ್ತಿರುವ ನಿರಾಶ್ರಿತರ ಪುನರ್‌ವಸತಿ ಕಾರ್ಯಕ್ರಮಗಳಿಗೆ ನಾವು ತುಂಬುಮನದಿಂದ ಹಣಕಾಸಿನ ಹಾಗೂ ಮಾನವ ಸಂಪನ್ಮೂಲಗಳ ನೆರವನ್ನು ಕೊಡಬೇಕು. ವಾಣಿಜ್ಯ ಕ್ಷೇತ್ರದ ಸ್ಥೈರ್ಯವನ್ನು ಮರುಬಲಗೊಳಿಸುವಂತಹ ಹಾಗೂ ರಾಜ್ಯದ ವ್ಯವಹಾರ ಚಟುವಟಿಕೆಗಳನ್ನು ಮತ್ತೆ

ಚುರುಕುಗೊಳಿಸುವಂತಹ ಕ್ರಮಗಳನ್ನು ಮೊದಲ ಆದ್ಯತೆಯ ಮೇಲೆ ಕೈಗೊಳ್ಳಬೇಕು.

ಅಹಮದಾಬಾದಿನ ಕೋಟೆ ಭಾಗ ದಶಕಗಳ ಕಾಲ ದಾರುಣ ದುಸ್ಥಿತಿಯಲ್ಲೆ ಉಳಿದುನಿಂತಿದ್ದು, ಪದೇಪದೆ ಸ್ಫೋಟಿಸುವ ಕೋಮುಗಲಭೆಗಳಿಗೆ ಕೊಳಕು ಸೆಲೆಯಂತಾಗಿಹೋಗಿದೆ. ಅದನ್ನು ಆಮೂಲಾಗ್ರವಾಗಿ ಸುಧಾರಿಸಿ ಸ್ವಚ್ಛಗೊಳಿಸುವಲ್ಲಿ ನಮ್ಮ ಒಕ್ಕೂಟ ನೇತೃತ್ವ ವಹಿಸಿಕೊಳ್ಳಬೇಕು. ಮುಂಬಯಿ, ಭಿವಂಡಿ, ವಡೋದರಾಗಳಲ್ಲಿರುವಂತೆ ಇಲ್ಲಿಯೂ ಮೊಹಲ್ಲಾ ಸಮಿತಿಗಳನ್ನು, ರಾಮ್-ರಹೀಮ್ ವಸತಿ ಪ್ರದೇಶಗಳನ್ನು ನಿರ್ಮಿಸುವಲ್ಲಿ ಹಾಗೂ ನಿರ್ವಹಿಸುವಲ್ಲಿ ನಾವು ಎಲ್ಲ ರೀತಿಯ ಬೆಂಬಲ ನೀಡಬೇಕು.

ನಿಸ್ಪೃಹರೂ ನ್ಯಾಯನಿಷ್ಠರೂ ಆದ ಅಧಿಕಾರಿಗಳನ್ನು ರಾಜಕೀಯ ಸ್ವಾರ್ಥದ ಕಾರಣ ವರ್ಗಾವಣೆ ಮಾಡುವ ಸರ್ಕಾರಗಳನ್ನು ನಾವು ಖಂಡಿಸಬೇಕು. ನಮ್ಮ ಕ್ಷೇತ್ರದ ಭವಿಷ್ಯ ಸುಭದ್ರವಾಗಿ ಉಳಿಯುವುದು ಬೆಳೆಯುವುದು ದಕ್ಷ ಹಾಗೂ ಶುದ್ಧರ ಕೈಗಳಲ್ಲೆ ವಿನಃ ಅದಕ್ಷ ಸ್ವಾರ್ಥಿಗಳ ಕೈಯಲ್ಲಲ್ಲ.

ಸೇವಾಕಾರ್ಯಗಳನ್ನು ಕೈಗೊಳ್ಳಲು ನಮಗೆ ಬಿಡುವಿಲ್ಲದಿದ್ದಲ್ಲಿ ನಮ್ಮ ನಮ್ಮ ಮನೆಗಳ ಮಹಿಳೆಯರಾದರೂ ಅವುಗಳಲ್ಲಿ ತೊಡಗಿಕೊಳ್ಳುವಂತೆ ನಿರಾಶ್ರಿತರ ಕೇಂದ್ರಗಳಿಗೆ ತೆರಳಿ ಆ ಅಭಾಗ್ಯರಿಗೆ ಸಾಂತ್ವನ ಸಹಾಯಗಳನ್ನು ನೀಡುವಂತೆ ನಾವು ಉತ್ತೇಜಿಸಬೇಕು.

ಎಲ್ಲಕ್ಕಿಂತ ಮಿಗಿಲಾಗಿ ನಾವು ಮೂಕ ಪ್ರೇಕ್ಷಕರಾಗಿರುವುದನ್ನು ಬಿಟ್ಟು, ನಮ್ಮ ಸಂವಿಧಾನದ ಮೌಲ್ಯಾದರ್ಶಗಳನ್ನು ಎತ್ತಿಹಿಡಿಯುವಂತಹ ಮಾತುಗಳನ್ನು ದಿಟ್ಟವಾಗಿ ಆಡಬೇಕು. ಜೊತೆಗೆ ಎಲ್ಲ ಧರ್ಮಗಳ ಮೂಲಭೂತವಾದಿಗಳನ್ನು ತೀವ್ರವಾಗಿ ವಿರೋಧಿಸಬೇಕು. ಭಿಂದ್ರನ್‌ವಾಲೆ ಎಲ್ಲ ಸಿಖ್ಖರ ಪರವಾಗಿಯೇನೂ ಮಾತನಾಡಲಿಲ್ಲ; ಇಮಾಮ್ ಬುಖಾರಿ ಮತ್ತು ಶಹಾಬುದ್ದೀನರು ಎಲ್ಲ ಮುಸ್ಲಿಮರ ಪ್ರತಿನಿಧಿಗಳಲ್ಲ; ಅಶೋಕ ಸಿಂಘಾಲ್ ಮತ್ತು ಉಮಾಭಾರತಿ ಎಲ್ಲ ಹಿಂದೂಗಳ ವಕ್ತಾರರೇನಲ್ಲವೆಂಬುದನ್ನೂ ನಾವು ತೋರಿಸಬೇಕು.

••• ••• •••

ಸಾವಿರಾರು ನಿರಾಶ್ರಿತರು ಪುನರ್ವಸತಿ ಕೇಂದ್ರಗಳಲ್ಲಿ ಮೈಮುದುಡಿ ಹುದುಗಿರುವಾಗ, ಸರ್ಕಾರ ಈಗಿರುವಂತೆ ಕೈಚೆಲ್ಲಿ ಕುಳಿತಿರುವಾಗ ನಾವು ಬಿಡಿಬಿಡಿ ವ್ಯಕ್ತಿಗಳಾಗಿ ಮಾಡುವ ಕ್ರಿಯೆ ಪರಿಸ್ಥಿತಿಯನ್ನೇನಾದರೂ ಸುಧಾರಿಸೀತೆ?

ಇದಕ್ಕೆ ಉತ್ತರ ಪ್ರೊಫೆಸರ್ ಬಂದೂಕವಾಲಾ ಉಲ್ಲೇಖಿಸಿದ ರವೀಂದ್ರನಾಥ



ಠಾಕೂರರ ಕತೆಯೊಂದರಲ್ಲಿದೆ. (ಬಂದೂಕವಾಲಾ ನಮ್ಮ ಅಗ್ರವಿಜ್ಞಾನಿಗಳಲ್ಲೊಬ್ಬರು; ಮುಸ್ಲಿಮರಾಗಿದ್ದೂ ಅಯೋಧ್ಯಾ ಸಮಸ್ಯೆಯನ್ನು ಬಗೆಹರಿಸಲು ಮುಸ್ಲಿಮರೆ ಮೊದಲ ಹೆಜ್ಜೆಯಿಟ್ಟು, ವಿವಾದಿತ ಸ್ಥಳವನ್ನು ಹಿಂದೂಗಳಿಗೆ ಒಪ್ಪಿಸಿ, ಹಿಂದೂ-ಮುಸ್ಲಿಮ್ ಮೈತ್ರಿಯನ್ನು ವರ್ಧಿಸುವ ಹಿರಿತನವನ್ನು ತೋರಬೇಕೆಂದು ಮೊದಲಿನಿಂದಲೂ ವಾದಿಸುತ್ತ ಬಂದಿರುವವರು. ಇಷ್ಟಾಗಿಯೂ, ಅಹ್ಮದಾಬಾದಿನಲ್ಲಿ ಹಿಂದೂಗಳೆ ಅತಿಹೆಚ್ಚಿರುವ ಬಡಾವಣೆಯಲ್ಲಿರುವ ಅವರ ಮನೆ ಪದೇಪದೆ ಹಿಂದೂ ಮತೀಯವಾದಿಗಳ ದಾಳಿಗೆ ತುತ್ತಾಗುತ್ತ ಬಂದಿದೆ. ಇಲ್ಲಿಯವರೆಗೂ ಹೇಗೆ ಹೇಗೋ ಅವರನ್ನು ರಕ್ಷಿಸುತ್ತಿದ್ದ ಅವರ ಹಿಂದೂ ನೆರೆಹೊರೆಯವರು ಈ ಬಾರಿ ಮಾತ್ರ ದಾಳಿಕೋರರ ಕಲ್ಪನಾತೀತ ಕ್ರೌರ್ಯದಿಂದ ದಿಗ್ಮೂಢರಾಗಿದ್ದರಿಂದ ಅವರಿಗೆ ಹೆಚ್ಚಿನ ನೆರವು ದೊರೆಯದೆಹೋಯಿತು. ನೂರಾರು ಹಿಂದೂ ಮನೆಗಳ ಮಧ್ಯೆಯಿದ್ದ ಏಕೈಕ ಮುಸ್ಲಿಮ್ ಮನೆ, ಬಂದೂಕವಾಲಾರ ಮನೆ ಮತ್ತು ಅಪಾರ ಗ್ರಂಥಸಂಗ್ರಹ ಬೆಂಕಿಗಾಹುತಿಯಾದವು. ಅದೃಷ್ಟವಶಾತ್, ತುಸು ಮುಂಚೆಯಷ್ಟೆ ಬರಲಿದ್ದ ಅನಾಹುತದ ಸೂಚನೆ ಸಿಕ್ಕಿದ್ದ ಬಂದೂಕವಾಲಾ ತಮ್ಮ ಮಗಳೊಂದಿಗೆ ಮುಂಬಯಿಗೆ ಧಾವಿಸಿಬಂದು ಜೀವವುಳಿಸಿಕೊಂಡರು – ಅನುವಾದಕ) ಮೊನ್ನೆ ಮುಂಬಯಿಯಲ್ಲೊಂದೆಡೆ ಸಹಾನುಭೂತಿ ಸಮಚಿತ್ತತೆಗಳು ಸಂಗಮಿಸಿದ್ದ ಉಪನ್ಯಾಸವೊಂದರಲ್ಲಿ ಅವರು ಠಾಕೂರರ ಆ ಕತೆಯನ್ನು ನೆನಪಿಸಿಕೊಂಡರು:

ಸಂಜೆಹೊತ್ತು ಸಮುದ್ರ ತಟದ ಮೇಲೆ ನಿಂತು ತನ್ನನ್ನು ವೀಕ್ಷಿಸುತ್ತಿದ್ದ ಮನುಷ್ಯನೊರ್ವನಿಗೆ ಸೂರ್ಯ ಹೇಳಿದ: 'ಇನ್ನು ಕತ್ತಲು ಕವಿಯುತ್ತದೆ, ನಿನಗೆ ದಿಕ್ಕುದಾರಿ ಕಾಣದಾಗುತ್ತದೆ.' ಸಂಸಾರದ ಸದಸ್ಯರು ಹಾಗೂ ಸ್ನೇಹಿತರೊಡನೆ ಇದ್ದ ಆ ಮುಗ್ಧ ಸರಳ ಮನುಷ್ಯ ಪುಟ್ಟದೊಂದು ಹಣತೆಯನ್ನು ಬೆಳಗಿದ, ಹೇಳಿದ: 'ಇದು ಸೂರ್ಯನಲ್ಲ, ನಿಜ. ಆದರಿದು ನಮ್ಮ ದಾರಿದೀಪವಾಗಬಲ್ಲದು.'

(ಸಂಗ್ರಹ - ಅನುವಾದ : ಜಶವಂತ ಜಾಧವ)

**ನೀನಾಸಮ್ ರಂಗಶಿಕ್ಷಣಕೇಂದ್ರ**

ನೀನಾಸಮ್ ರಂಗಶಿಕ್ಷಣ ಕೇಂದ್ರದ ೨೩ನೇ ಶೈಕ್ಷಣಿಕ ವರ್ಷವು ಇದೇ ಆಗಸ್ಟ್ ೧೫ರಂದು ಪ್ರಾರಂಭವಾಯಿತು. ಹೊಸ ವಿದ್ಯಾರ್ಥಿಗಳ ಮೊದಲ ಪ್ರಯೋಗವಾಗಿ ಡಾ.ಚಂದ್ರಶೇಖರ ಕಂಬಾರ ಅವರ ಎರಡು ಕವಿತೆ (ನವಿಲೇ ನವಿಲೇ ಮತ್ತು ಜನಪದ ಕಥೆಗಳ ರಾಕ್ಷಸ)ಗಳನ್ನು ಆಧರಿಸಿದ 'ನವಿಲು ನಿಂತಾವ' (ನಿಃ ಬಿ.ಆರ್. ವೆಂಕಟರಮಣ ಐತಾಳ) ಎಂಬ ರಂಗಪ್ರಸ್ತುತಿಯ ಪ್ರದರ್ಶನ ಇದೇ ಆಗಸ್ಟ್ ೧೫ ಮತ್ತು ೧೬ರಂದು ನಡೆಯಿತು.

## ಮಾತುಕತೆ ೬೩

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

**ಆಗಸ್ಟ್ ೨೦೦೨ ವರ್ಷ ಹದಿನಾರು ಸಂಚಿಕೆ ಮೂರು**



| | | |
|---|---|---|
| ೧. | ಗುಜರಾತಿನ ಧರ್ಮದ್ವಂದ್ವದ ದಾರುಣಕಥನ | ಪುಟ ೨ |
| ೨. | ನಾಯಂ ಹಂತಿ ನ ಹನ್ಯತೇ<br>ಕೀರ್ತಿನಾಥ ಕುರ್ತಕೋಟಿ | ಪುಟ ೩. |
| ೩. | ಸಂಸ್ಕೃತಿಯೊಂದಕ್ಕೆ ಶ್ರದ್ಧಾಂಜಲಿ<br>ಆಶೀಷ್ ನಂದಿ<br>ಕನ್ನಡಕ್ಕೆ: ಜಶವಂತ ಜಾಧವ್ | ಪುಟ ೭ |
| ೪. | ಆದಿವಾಸಿ ಆಖ್ಯಾನ<br>ಗಣೇಶ ದೇವಿ<br>ಕನ್ನಡಕ್ಕೆ: ಡಾ.ಟಿ.ಎಸ್. ರಾಘವೇಂದ್ರ | ಪುಟ ೧೭ |
| ೫. | ಸೆಕ್ಯುಲರಿಸಂನಿಂದ ವ್ಯಾಪಾರ - ವಹಿವಾಟಿಗೇನಾದರೂ ಲಾಭವಿದೆಯೆ ?<br>ಸೈರಸ್ ಗಝುದರ್<br>ಕನ್ನಡಕ್ಕೆ: ಜಶವಂತ ಜಾಧವ್ | ಪುಟ ೪೦ |


second cover ←


**MAATHUKATHE** AUG. 2002 (YEAR 16 ISSUE 3)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**


→ third cover


## ಅಕ್ಷರ ಪ್ರಕಾಶನ

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **ರಂಗದಲ್ಲಿ ಅಂತರಂಗ** (ಸ್ತಾನಿಸ್ಲಾವ್‌ಸ್ಕಿಯ ಆ್ಯನ್ ಆ್ಯಕ್ಟರ್ ಪ್ರಿಪೇರ್ಸ್ ಅನುವಾದ: ಕೆ.ವಿ. ಸುಬ್ಬಣ್ಣ) | ರೂ. ೧೬೦ |
| **ಅಮ್ಮಚ್ಚಿಯೆಂಬ ನೆನಪು** (ಕಥೆಗಳು - ವೈದೇಹಿ) | ರೂ. ೮೦ |
| **ಸಿಂಗಾರೆವ್ವ ಮತ್ತು ಅರಮನೆ** (ಕಾದಂಬರಿ-ಮರುಮುದ್ರಣ- ಚಂದ್ರಶೇಖರ ಕಂಬಾರ) | ರೂ. ೮೫ |
| **ಕಾರಂತ ಚಿಂತನ** (ಕಡಲಾಚೆಯ ಕನ್ನಡಿಗರಿಂದ ಕಾರಂತರ ಕುರಿತ ಬರಹಗಳು) | ರೂ. ೧೫೦ |
| **ಕವಿರಾಜಮಾರ್ಗ ಮತ್ತು ಕನ್ನಡಜಗತ್ತು** (ಕೆ.ವಿ.ಸುಬ್ಬಣ್ಣ) | ರೂ. ೭೦ |
| **ಭವ** (ಕಾದಂಬರಿ-ಮರುಮುದ್ರಣ- ಯು.ಆರ್. ಅನಂತಮೂರ್ತಿ) | ರೂ. ೬೦ |
| **ಒಳಸೊನ್ನೆ ಹೊರಸೊನ್ನೆ** (ಕವನಗಳು - ಕೆ.ಎಚ್. ಶ್ರೀನಿವಾಸ್) | ರೂ. ೪೫ |
| **ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ** (ನಾಟಕ - ಕೆ.ವಿ. ಅಕ್ಷರ) | ರೂ. ೪೫ |
| **ಯು.ಆರ್. ಅನಂತಮೂರ್ತಿ: ಒಂದು ಅಧ್ಯಯನ** (ಟಿ.ಪಿ. ಅಶೋಕ) | ರೂ. ೫೦ |
| **ಮಾಮಾಮೋಶಿ** (ಮೋಲಿಯೆರ್ ಅನುವಾದ - ಕೆ.ವಿ. ಸುಬ್ಬಣ್ಣ) | ರೂ. ೪೫ |
| **ಜತೆಗಿರುವನು ಚಂದಿರ** (ನಾಟಕ - ಜಯಂತ ಕಾಯ್ಕಿಣಿ) | ರೂ. ೫೦ |
| **ಯಾವ ಶಬ್ದದ ಮಾಯೆ** (ಕವಿತೆಗಳು - ವರದೇಶ ಹಿರೆಗಂಗೆ) | ರೂ. ೪೦ |
| **ಇನ್ನೂ ಒಂದು** (ಕಾದಂಬರಿ - ವಿವೇಕ ಶಾನಭಾಗ) | ರೂ. ೪೫ |
| **ದಿವ್ಯ** (ಕಾದಂಬರಿ-ಮರುಮುದ್ರಣ - ಯು.ಆರ್.ಅನಂತಮೂರ್ತಿ) | ರೂ. ೮೫ |
| **ಸಂಸ್ಕಾರ** (ಕಾದಂಬರಿ-ಮರುಮುದ್ರಣ - ಯು.ಆರ್.ಅನಂತಮೂರ್ತಿ) | ರೂ. ೭೦ |
| **ಭಾರತೀಪುರ** (ಕಾದಂಬರಿ-ಮರುಮುದ್ರಣ - ಯು.ಆರ್.ಅನಂತಮೂರ್ತಿ) | ರೂ. ೧೧೦ |
| **ಅನಂತಮೂರ್ತಿ ಕಥಾವಾಚಿಕೆ** (ಯು.ಆರ್.ಅನಂತಮೂರ್ತಿ) | ರೂ. ೧೨೦ |
| **ಐದು ದಶಕದ ಕಥೆಗಳು** (ಯು.ಆರ್.ಅನಂತಮೂರ್ತಿ - ಸಮಗ್ರ ಕಥೆಗಳು) | ರೂ. ೨೩೦ |
| **ಕುಮಾರಿಲಭಟ್ಟ** (ಅಕ್ಷರ ಚಿಂತನ ಮಾಲೆ - ಪರಿಚಯ ಮತ್ತು ಅನುವಾದಗಳು - ಪ್ರಭಾಕರ ಜೋಷಿ, ಎಂ.ಎಂ. ಹೆಗಡೆ ಸಿದ್ದಾಪುರ) | ರೂ. ೫೦ |
| **ಸಾಹೇಬರು ಬರುತ್ತಾರೆ** (ಗೊಗೋಲ್ ನಾಟಕ ರೂಪಾಂತರ - ಕೆ.ವಿ. ಸುಬ್ಬಣ್ಣ ಮತ್ತು ಅಕ್ಷರ ಕೆ.ವಿ.) | ರೂ. ೪೫ |
| **ರಿಕ್ತ ರಂಗಭೂಮಿ** (ಗ್ರೊಟೋವ್‌ಸ್ಕಿ ಪರಿಚಯ ಮತ್ತು ಅನುವಾದಗಳು - ಟಿ.ಪಿ. ಅಶೋಕ) | ರೂ. ೪೦ |
| **ಈವರೆಗಿನ ಹೇಳತೇನ ಕೇಳ** (ಚಂದ್ರಶೇಖರ ಕಂಬಾರ – ಸಮಗ್ರ ಕಾವ್ಯ) | ರೂ.೧೫೦ |
| **ಮಾವಿನಮರದಲ್ಲಿ ಬಾಳೆಯ ಹಣ್ಣು** (ನಾಟಕ-ರಂಗಭೂಮಿ ಕುರಿತ ಬರಹಗಳು - ಅಕ್ಷರ ಕೆ.ವಿ.) | ರೂ.೧೦೦ |
| **ಶಕ್ತಿಶಾರದೆಯ ಮೇಳ** (ಆಧುನಿಕ ಕನ್ನಡಕಾವ್ಯದ ಅಧ್ಯಯನ- ಡಿ.ಆರ್. ನಾಗರಾಜ್ - ಮರುಮುದ್ರಣ) | ರೂ.೧೫೦ |

fourth cover


# MSIL
## a versatile marketing force

**Started three and half decades ago to provide marketing support to Karnataka's products, MSIL has evolved today as a multi-faceted, multi-product organisation far beyond the dimensions of its original vision. With a nation-wide sales network, keen business acumen and a professional approach; building credibility and winning consumer confidence.**

- *Serving the student community by offering high quality notebooks and school bags at reasonable prices.*
- *Marketing the tickets of Karnataka State Lottery - India's most trusted lottery.*
- *Streamiling the distribution of liquor, contributing substantially to the revenues of the State.*
- *Warehousing and professional handling of air cargo at the Bangalore Air Cargo Complex.*
- *Managing a cold storage for the export of flowers.*
- *Meeting the travel needs of the Government Officials through the Tours & Travels Division.*
- *Bringing home the latest consumer durables within easy reach of the consumers with MSIL Homaker hire purchase scheme.*
- *Commitment to energy conservation by popularising and marketing highly efficient solar, thermal and photovoltaic equipment.*
- *Introduced Karnataka's products to the world through export activities.*

**MSIL has done it all.**

## Mysore Sales International Limited

**MSIL House, 36, Cunningham Road, Bangalore 560 052**

Phone: 226410-28, Fax: 2250168, Email: msilho@vsnl.com, www.msilonline.com. Branch Offices at: Bangalore (Tel. 2215893, 2211468), Mumbai (Tel. 4946262, 4951304), Chennai (Tel. 4330302, 4343611), New Delhi (Tel.3363836, 3340862)

**Concern for the Consumer**